ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 17 ಸೋಮವಾರ 2022

ಸಂಪುಟ: 43 | ಸಂಚಿಕೆ: 181 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬೊಮ್ಮಾಯಿ ಅವರೇ ಮುಂದಿನ ಸಿಎಂ ಅಭ್ಯರ್ಥಿ

ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಘೋಷಣೆ


ಬೆಂಗಳೂರು, ಅ.16– ಬಿಜೆಪಿಯ ಕೇಂದ್ರ ನಾಯಕತ್ವವು ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಕಾರ್ಯ ವೈಖರಿಯಿಂದ ಸಂತಸಗೊಂಡಿದೆ ಮತ್ತು ಮುಂಬರುವ ಚುನಾವಣೆಯಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯಾಗಲಿದ್ದಾರೆ ಎಂದು ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಭಾನುವಾರ ಹೇಳಿದ್ದಾರೆ. ರಾಜ್ಯದಲ್ಲಿ ಬೊಮ್ಮಾಯಿ ಅವರು ಮಾಡುತ್ತಿರುವ ಕೆಲಸದಿಂದ ಕೇಂದ್ರದ ಬಿಜೆಪಿ ನಾಯಕರಿಗೆ ತುಂಬಾ ಸಂತೋಷವಾಗಿದೆ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾರ್ಯ ವೈಖರಿ, ಬಿಜೆಪಿಯ ಪ್ರಬಲ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಪಾತ್ರ, ಕೆಲವೇ ತಿಂಗಳುಗಳಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ನಿರೀಕ್ಷೆಗಳು ಮತ್ತು ಮುಖ್ಯಮಂತ್ರಿ ಅಭ್ಯರ್ಥಿಯ ಘೋಷಣೆ ಸೇರಿದಂತೆ ಪಕ್ಷದ ಕೇಂದ್ರ ನಾಯಕತ್ವದ ಮೌಲ್ಯಮಾಪನದ ಕುರಿತು ಸಿಂಗ್ ಅವರನ್ನು ಕೇಳಲಾಯಿತು.

> “ನಾವು ಈ ಬಾರಿ ಹಳೇ ಮೈಸೂರು ಭಾಗದಲ್ಲಿ ಚಮತ್ಕಾರ (ಪವಾಡ) ಮಾಡಲಿದ್ದೇವೆ. ಹಳೇ ಮೈಸೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ (ಬೀದರ್, ರಾಯಚೂರು ಮತ್ತು ಕಲಬುರಗಿ) ಕಾಂಗ್ರೆಸ್ ಮತ್ತು ಜೆಡಿಎಸ್‌ನ ಅನೇಕ ನಾಯಕರು ಬಿಜೆಪಿ ಸೇರಲು ಮುಂದಾಗಿದ್ದಾರೆ. ಏಕೆಂದರೆ, ಬಿಜೆಪಿಯೇ ಸರ್ಕಾರ ರಚಿಸಲಿದೆ ಮತ್ತು ಬಿಜೆಪಿಯೊಂದಿಗೆ ಭವಿಷ್ಯವಿದೆ ಎಂಬುದನ್ನು ಅವರು ಅರಿತಿದ್ದಾರೆ
> –ರಾಜ್ಯ ಉಸ್ತುವಾರಿ ಅರುಣ್‌ಸಿಂಗ್

ಮೋದಿ ಹಾಗೂ ಬೊಮ್ಮಾಯಿ ಸರ್ಕಾರದ ಕಲ್ಯಾಣ ಮತ್ತು ಅಭಿವೃದ್ಧಿ ಯೋಜನೆಗಳನ್ನು ಎತ್ತಿ ಹಿಡಿದ ಅವರು, ಕರ್ನಾಟಕದಲ್ಲಿನ ಒಟ್ಟು 224 ಸ್ಥಾನಗಳಲ್ಲಿ ಬಿಜೆಪಿ 150 ವಿಧಾನಸಭಾ ಸ್ಥಾನಗಳನ್ನು ಗೆಲ್ಲುವ ತನ್ನ ಗುರಿಯನ್ನು ಮೀರಿ ಇತಿಹಾಸ ಸೃಷ್ಟಿಸುತ್ತದೆ ಎಂದು ಹೇಳಿದರು. ಬೊಮ್ಮಾಯಿ ಅವರ ನೇತೃತ್ವದಲ್ಲಿ ಮತ್ತು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿರುವ ಹಾಗೂ ಸದ್ಯ ಪಕ್ಷದ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿರುವ ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ಆಡಳಿತ ಪಕ್ಷವು ಚುನಾವಣೆಯನ್ನು ಎದುರಿಸಲಿದೆ. ಬೊಮ್ಮಾಯಿ ಈಗ ಮುಖ್ಯಮಂತ್ರಿ. ಅವರೇ ಮುಖ್ಯಮಂತ್ರಿ ಅಭ್ಯರ್ಥಿ. ಇದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಸಿಂಗ್ ಹೇಳಿದರು.




ಕಳೆದ ವರ್ಷ ಜುಲೈನಲ್ಲಿ ಯಡಿಯೂರಪ್ಪ ಅವರ ಬದಲಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬೊಮ್ಮಾಯಿ ಅವರು ಸರಳ, ನಿಷ್ಠುರ ಮತ್ತು ಸಭ್ಯ ವ್ಯಕ್ತಿ ಎಂದು ಬಣ್ಣಿಸಿದ ಅವರು, ಸಾಮಾನ್ಯ ವ್ಯಕ್ತಿಯಾಗಿದ್ದವರು ಮುಖ್ಯಮಂತ್ರಿಯಾದರು ಮತ್ತು ಸಾರ್ವಜನಿಕ ಸಭೆಗಳಲ್ಲಿ ಅವರಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಮುಖ್ಯಮಂತ್ರಿಯವರು ಕೂಡ ತಮ್ಮಂತೆಯೇ

▶ 8ನೇ ಪುಟಕ್ಕೆ

ರಾಜ್ಯದಲ್ಲಿ ಮೊದಲ ಬಾರಿಗೆ ಮೈಸೂರಲ್ಲಿ ಹತ್ತು ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಸ್ಥಾಪನೆ

● ನಗರದ 10 ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಆರಂಭ ● ಸ್ತ್ರೀರೋಗದ ಬಗ್ಗೆ ಚಿಕಿತ್ಸೆ ನೀಡಲು ಕ್ರಮ ● ನುರಿತ ಮಹಿಳಾ ಸಿಬ್ಬಂದಿಗಳ ನೇಮಕ ● ಪಿಂಕ್ ಬಣ್ಣದಲ್ಲಿ ಕೊಠಡಿ ನಿರ್ಮಾಣ



ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಆರಂಭಿಸಲು ಪ್ರಾಥಮಿಕ ಆರೋಗ್ಯ ಕೇಂದ್ರದ ಕೊಠಡಿಗೆ ಪಿಂಕ್ ಬಣ್ಣ ಹೊಡೆದು ಸಿದ್ಧತೆ ಮಾಡಿಕೊಂಡಿರುವುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಅ.16– ಮಹಿಳೆಯರಿಗೆ ಹಾಗೂ ಹೆಣ್ಣು ಮಕ್ಕಳನ್ನು ಕಾಡುವ ಸ್ತ್ರೀರೋಗಗಳ ಬಗ್ಗೆ ತಪಾಸಣೆ ನಡೆಸಿ ಪ್ರತ್ಯೇಕವಾಗಿ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ರಾಜ್ಯದಲ್ಲೇ ಮೊದಲ ಬಾರಿಗೆ ಮೈಸೂರಲ್ಲಿ 10 ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಸ್ಥಾಪಿಸಲಾಗುತ್ತಿದ್ದು, ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಈ ಕ್ಲಿನಿಕ್‌ಗಳು ಕಾರ್ಯ ನಿರ್ವಹಿಸಲಿವೆ.

ರಾಜ್ಯದಲ್ಲೇ ಮೊದಲ ಬಾರಿಗೆ ಮೈಸೂರಲ್ಲಿ ಪೈಲೆಟ್ ಪ್ರಾಜೆಕ್ಟ್ ಆಗಿ ಆಯ್ದ 10 ಸ್ಥಳದಲ್ಲಿ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಆರಂಭಿಸಲಾಗುತ್ತಿದ್ದು, ಅವುಗಳಿಗೆ ದೊರೆಯುವ ಸ್ಪಂದನೆಯ ಮೇರೆಗೆ ರಾಜ್ಯದ ಇನ್ನಿತರ ನಗರಗಳಲ್ಲೂ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ತಲೆ ಎತ್ತಲಿವೆ. ಆ ಮೂಲಕ ಮಹಿಳೆಯರ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಮಹಿಳೆಯರ ಆರೋಗ್ಯ ಕಾಪಾಡಲು ಹೊಸ ಕಾರ್ಯಕ್ರಮ ಜಾರಿಗೊಳಿಸಿದಂತಾಗಲಿದೆ.

ಸ್ತ್ರೀರೋಗ ತಪಾಸಣೆ: ಮಹಿಳೆಯರನ್ನು ಕಾಡುವ ಹಲವು

▶ 8ನೇ ಪುಟಕ್ಕೆ

ಮೈಸೂರಲ್ಲಿ ಎಲ್ಲೆಲ್ಲಿ...

ಮೈಸೂರು ನಗರ ವ್ಯಾಪ್ತಿಯಲ್ಲಿ 21 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಅದರಲ್ಲಿ 10 ಆರೋಗ್ಯ ಕೇಂದ್ರಗಳಲ್ಲಿ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಅನ್ನು ರಾಜೇಂದ್ರನಗರ, ನಜರ್‌ಬಾದ್, ಬನ್ನಿಮಂಟಪ, ಜಾಕಿಕ್ವಾಟ್ರಸ್‌ನ ಹೆಚ್‌ಹೆಚ್ ಎಂಬಿಜಿ, ಟಿ.ಕೆ.ಬಡಾವಣೆ, ನಾಚನಹಳ್ಳಿ ಪಾಳ್ಯ, ಗಿರಿಯಾಭೋವಿ ಪಾಳ್ಯ, ಕುಂಬಾರಕೊಪ್ಪಲು, ಸುಬ್ರಹ್ಮಣ್ಯನಗರ ಹಾಗೂ ಶಾಂತಿನಗರದಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಸ್ಥಾಪಿಸಲಾಗುತ್ತಿದೆ. ಸ್ತ್ರೀರೋಗ ತಜ್ಞರು, ಆಪ್ತಸಮಾಲೋಚಕರು ಸೇರಿದಂತೆ ಮಹಿಳಾ ಸಿಬ್ಬಂದಿಗಳನ್ನೇ ನಿಯೋಜಿಸಲಾಗುತ್ತಿದೆ. ಪ್ರತಿ ದಿನವೂ ಒಂದೊಂದು ವಿಷಯದಲ್ಲಿ ಪರಿಣಿತರಾದ ತಜ್ಞ ವೈದ್ಯರನ್ನೇ ನಿಯೋಜಿಸಲಾಗುತ್ತಿದೆ. ಮಹಿಳೆಯರ ಆರೋಗ್ಯ ಕಾಪಾಡಲು ಕ್ಲಿನಿಕ್ ಸಹಕಾರಿಯಾಗಲಿದೆ.

– ಡಾ.ಕೆ.ಹೆಚ್.ಪ್ರಸಾದ್,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಇಂದು ಎಐಸಿಸಿ ಅಧ್ಯಕ್ಷೀಯ ಚುನಾವಣೆ

ನವದೆಹಲಿ/ಬೆಂಗಳೂರು, ಅ.16– 22 ವರ್ಷಗಳ ಬಳಿಕ ನಡೆಯುತ್ತಿರುವ ಎಐಸಿಸಿ ಅಧ್ಯಕ್ಷೀಯ ಚುನಾವಣೆಗೆ ಕೌಂಟ್‌ಡೌನ್ ಶುರುವಾಗಿದೆ. ಸೋಮವಾರ ಮತದಾನ ನಿಗದಿ ಆಗಿದ್ದು ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಕಣದಲ್ಲಿದ್ದಾರೆ.

ನೂತನ ಅಧ್ಯಕ್ಷರ ಆಯ್ಕೆಗೆ 9,100 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಕರ್ನಾಟಕದಲ್ಲಿ 494 ಮಂದಿ ಮತದಾರರಿದ್ದಾರೆ. ರಾಹುಲ್ ಗಾಂಧಿ ಭಾರತ್ ಜೋಡೋ ಪಾದಯಾತ್ರೆಯಲ್ಲಿರುವ ಕಾರಣ ಬಳ್ಳಾರಿಯ ಸಂಗನಕಲ್ಲಿನಲ್ಲಿ ಎಲೆಕ್ಷನ್ ಬೂತ್ ಸ್ಥಾಪಿಸಲಾಗಿದೆ. ಕೆಪಿಸಿಸಿ ಕಚೇರಿಯಲ್ಲಿ ಮತಗಟ್ಟೆ ಸ್ಥಾಪಿಸಲಾಗಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಒಲವು ಖರ್ಗೆ ಅವರತ್ತಲೇ ಇರುವ ಕಾರಣ ಎರಡನೇ ಬಾರಿಗೆ ಕನ್ನಡಿಗರೊಬ್ಬರು ಎಐಸಿಸಿ ಗಾದಿಗೆ ಏರುವುದು ಬಹುತೇಕ ನಿಶ್ಚಿತ. ಅಕ್ಟೋಬರ್ 19ಕ್ಕೆ ಫಲಿತಾಂಶ ಹೊರಬೀಳಲಿದೆ. ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಿ, ಕರ್ನಾಟಕದಿಂದಲೇ ನನ್ನ ರಾಜಕಾರಣ ಪ್ರಾರಂಭವಾಗಿದೆ. ಶಾಸಕನಾಗಿ, ಮಂತ್ರಿಯಾಗಿ, ಸಿಎಲ್‌ಪಿ ಲೀಡರ್ ಆಗಿ ಕೊಟ್ಟ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದೇನೆ. ಕೆಳಮಟ್ಟದ ಕಾರ್ಯಕರ್ತನಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದೇನೆ ಎಲ್ಲರೂ ಬೆಂಬಲ ಕೊಡುತ್ತಾರೆ ಎಂಬ ನಂಬಿಕೆಯಿದೆ ಎಂದು ಹೇಳಿದ್ದಾರೆ. ಶಶಿ ತರೂರ್ ಮಾತಾಡಿ, ನಾನು ಗೆದ್ದರೆ ಹೈಕಮಾಂಡ್ ಸಿಸ್ಟಂ ಇಲ್ಲದಂತೆ ಮಾಡುತ್ತೇನೆ. ಯಾರು ಗೆದ್ದರೂ ಸಂತೋಷ ಎಂದಿದ್ದಾರೆ. ಶಶಿ ತರೂರ್‌ಗೆ ಕಾರ್ತಿ ಚಿದಂಬರಂ ಬೆಂಬಲ ಘೋಷಿಸಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರ ಭಾರತ್ ಜೋಡೋ ಯಾತ್ರೆ ನಡೆಯುತ್ತಿಲ್ಲ.

ಬಳ್ಳಾರಿಯಲ್ಲಿ ರಾಹುಲ್ ಗಾಂಧಿ ಮತದಾನ



ರಾಷ್ಟ್ರಪತಿಗಳಿಗೆ ಕಣ್ಣಿನಪೊರೆ ಸಮಸ್ಯೆ: ಒಂದೇ ದಿನದಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿ



ನವದೆಹಲಿ, ಅ.16– ಕಣ್ಣಿನ ಪೊರೆ ಸಮಸ್ಯೆಯಿಂದ ಬಳಲುತ್ತಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕೊನೆಗೂ ಸಮಸ್ಯೆಯಿಂದ ಮುಕ್ತಿ ಪಡೆದಿದ್ದಾರೆ. ಹಲವು ದಿನಗಳಿಂದ ತಮ್ಮ ಎಡಗಣ್ಣಿನ ಪೊರೆ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಭಾನುವಾರ ದೆಹಲಿಯ ಆರ್ಮಿ ಹಾಸ್ಪಿಟಲ್ ರಿಸರ್ಚ್ ಅಂಡ್ ರೆಫೆರಲ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಬೆಳಗ್ಗೆ 11:30ರ ವೇಳೆಗೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಚಿಕಿತ್ಸೆ ಯಶಸ್ವಿಯಾಗಿ ನಡೆದಿದ್ದು ಮಧ್ಯಾಹ್ನ 1:30ರ ವೇಳೆಗೆ ಬಿಡುಗಡೆ ಮಾಡಲಾಯಿತು. ಕೆಲ ದಿನಗಳ ಕಾಲ ವಿಶ್ರಾಂತಿ ಪಡೆಯುವಂತೆ ವೈದ್ಯರು ಸೂಚಿಸಿರುವುದಾಗಿ ರಾಷ್ಟ್ರಪತಿ ಭವನದ ವಕ್ತಾರರು ತಿಳಿಸಿದ್ದಾರೆ. ಕಳೆದ ಜುಲೈ 25ರಂದು ದೇಶದ 15ನೇ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಸ್ವೀಕರಿಸಿದರು. 20 ಜೂನ್ 1958ರಂದು ಜನಿಸಿದ ಅವರು ಶಿಕ್ಷಕಿಯಾಗಿ ವೃತ್ತಿ ಜೀವನ ಆರಂಭಿಸಿದ್ದರು.

ಗಾಂಧಿ ಕುಟುಂಬದ ಸಲಹೆ, ಬೆಂಬಲ ಪಡೆಯಲು ನಾಚಿಕೆ ಪಡುವುದಿಲ್ಲ



ಬೆಂಗಳೂರು, ಅ.16– ಒಂದು ವೇಳೆ ನಾನು ಪಕ್ಷದ ಅಧ್ಯಕ್ಷನಾದರೆ, ಪಕ್ಷದ ವ್ಯವಹಾರಗಳನ್ನು ನಡೆಸುವಲ್ಲಿ ಅದರ ಬೆಳವಣಿಗೆಗೆ ಹೋರಾಡಿ ತಮ್ಮ ಶಕ್ತಿಯನ್ನು ಹಾಕಿರುವ ಗಾಂಧಿ ಕುಟುಂಬದ ಸಲಹೆ ಮತ್ತು ಬೆಂಬಲವನ್ನು ತೆಗೆದುಕೊಳ್ಳಲು ನಾನು ನಾಚಿಕೆಪಡುವುದಿಲ್ಲ ಎಂದು ಕಾಂಗ್ರೆಸ್ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದ ಮೇಲೆ ಗಾಂಧಿ ಕುಟುಂಬದ ರಿಮೋಟ್ ಕಂಟ್ರೋಲ್ ಆಗಲಿದ್ದಾರೆ ಎಂದು ಚರ್ಚೆಯ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಕ್ಟೋಬರ್ 17 ರಂದು ನಿಗದಿಯಾಗಿರುವ ಪಕ್ಷದ ಅತ್ಯುನ್ನತ ಹುದ್ದೆಗೆ ನಡೆಯಲಿರುವ ಈ ಚುನಾವಣೆಯಲ್ಲಿ ತಾನು ಪ್ರತಿನಿಧಿಗಳ ಅಭ್ಯರ್ಥಿ ಎಂದು ಹಿರಿಯ ನಾಯಕ ಹೇಳಿದರು. ಹೇಳಲು ಬೇರೆ ಏನೂ ಇಲ್ಲದಿರುವ ಕಾರಣ ಅವರು ಅಂತಹ ವಿಷಯಗಳನ್ನು ಹೇಳುತ್ತಾರೆ. ಬಿಜೆಪಿ ಇಂತಹ ಪ್ರಚಾರದಲ್ಲಿ ತೊಡಗುತ್ತದೆ ಮತ್ತು ಇತರರು ಅದನ್ನು ಅನುಸರಿಸುತ್ತಾರೆ. ಸೋನಿಯಾ ಗಾಂಧಿ ಅವರು ಪಕ್ಷದಲ್ಲಿ 20 ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ರಾಹುಲ್ ಗಾಂಧಿ ಕೂಡ ಅಧ್ಯಕ್ಷರಾಗಿದ್ದರು. ಅವರು ಪಕ್ಷಕ್ಕಾಗಿ ಶ್ರಮಿಸಿದ್ದಾರೆ ಮತ್ತು ಅದರ ಬೆಳವಣಿಗೆಗೆ ತಮ್ಮ ಶಕ್ತಿಯನ್ನು ಹಾಕಿದ್ದಾರೆ' ಎಂದರು. ಈ ದೇಶಕ್ಕಾಗಿ ಜವಾಹರಲಾಲ್ ನೆಹರು ಅವರಿಂದ ಇಂದಿರಾಗಾಂಧಿ, ರಾಜೀವ್ ಗಾಂಧಿ, ಸೋನಿಯಾ ಗಾಂಧಿ ಸೇರಿದಂತೆ ನೆಹರೂ–ಗಾಂಧಿ ಕುಟುಂಬ ಅಪಾರ ಕೊಡುಗೆ ಮತ್ತು ತ್ಯಾಗವನ್ನು ಮಾಡಿದ್ದಾರೆ. ನಾವು (ಕಾಂಗ್ರೆಸ್) ಕೆಲವು ಚುನಾವಣೆಗಳಲ್ಲಿ ಸೋತಿದ್ದೇವೆ ಎಂಬ ಕಾರಣಕ್ಕಾಗಿ (ಗಾಂಧಿಗಳ ವಿರುದ್ಧ) ಇಂತಹ ಮಾತುಗಳನ್ನು ಹೇಳುವುದು ಸರಿಯಲ್ಲ ಎಂದರು.

ಅವರು (ಗಾಂಧಿ ಕುಟುಂಬ) ಈ ದೇಶಕ್ಕೆ ಒಳ್ಳೆಯದನ್ನು ಮಾಡಿದ್ದಾರೆ. ಅವರ ಸಲಹೆಯು ಪಕ್ಷಕ್ಕೆ ಪ್ರಯೋಜನವಾಗುತ್ತದೆ. ಆದ್ದರಿಂದ ನಾನು ಖಂಡಿತವಾಗಿಯೂ ಅವರ ಸಲಹೆ ಮತ್ತು ಬೆಂಬಲವನ್ನು ಪಡೆಯುತ್ತೇನೆ. ಅದರಲ್ಲಿ ನನಗೆ ಯಾವುದೇ ನಾಚಿಕೆ ಇಲ್ಲ. ನಿಮ್ಮ (ಮಾಧ್ಯಮ) ಸಲಹೆಯಿಂದ ಏನಾದರೂ ಪ್ರಯೋಜನವಾದರೆ, ನಾನು ಅದನ್ನು ಸಹ ತೆಗೆದುಕೊಳ್ಳುತ್ತೇನೆ. ಅವರು ಈ ಪಕ್ಷಕ್ಕಾಗಿ ಕೆಲಸ ಮಾಡಿದ್ದಾರೆ ಮತ್ತು ಅವರ ಸಲಹೆಯನ್ನು ಪಡೆಯುವುದು ನನ್ನ ಕರ್ತವ್ಯ' ಎಂದು ಖರ್ಗೆ ಹೇಳಿದರು.

ಚಾಮರಾಜ ಕ್ಷೇತ್ರದಿಂದ ಹರೀಶ್‌ಗೌಡರಿಗೆ ಟಿಕೆಟ್ ನೀಡಲು ಆಗ್ರಹ



ಮೈಸೂರು, ಅ.16(ಜಿಎ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಕೆ.ಹರೀಶ್‌ಗೌಡರನ್ನು ಕಣಕ್ಕಿಳಿಸುವಂತೆ ಕುಂಬಾರಕೊಪ್ಪಲು ಮತ್ತು ಮಹದೇಶ್ವರ ಬಡಾವಣೆ ನಿವಾಸಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದ್ದಾರೆ. ಕೆ.ಹರೀಶ್‌ಗೌಡರಿಗೆ ಟಿಕೆಟ್ ದೊರಕಲೆಂದು ನಗರದ ತ್ರಿನೇತ್ರ ಸರ್ಕಲ್ ಬಳಿ ಇರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ಥಳೀಯರು, ನಂತರ ಸಭೆ ನಡೆಸಿದರು.

ಅಂಬರೀಶ್ ಅಭಿಮಾನಿ ಸಂಘದ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಗಣೇಶ್ ಮಾತನಾಡಿ, ರಾಜ್ಯದ 224 ಕ್ಷೇತ್ರಗಳಲ್ಲಿ ಚಾಮರಾಜ ಕ್ಷೇತ್ರ ವಿಭಿನ್ನವಾಗಿದ್ದು, ಇಲ್ಲಿ ಸ್ಪರ್ಧಿಸಲು ಪ್ರತಿ ಬಾರಿ ಪೈಪೋಟಿ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರು ಶೀಘ್ರವೇ ಇಲ್ಲಿನ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು. ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡ ಕೆ.ಹರೀಶ್‌ಗೌಡರು ಸದಾ ಕ್ಷೇತ್ರದ ಜನರೊಂದಿಗಿದ್ದು ಕಷ್ಟ–ಸುಖದಲ್ಲಿ ಭಾಗಿಯಾಗಿದ್ದಾರೆ. ಇವರಿಗೆ ಅವಕಾಶ ನೀಡಿದರೆ ಪಕ್ಷಾತೀತವಾಗಿ ಜನ ಬೆಂಬಲಿಸಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತ ಸಿದ್ದಪ್ಪಾಜಿ ವಿಶ್ವಕರ್ಮ ಮಾತನಾಡಿ, ಯಾವುದೇ ಅಧಿಕಾರವಿಲ್ಲದಿದ್ದರೂ ಕೆ.ಹರೀಶ್‌ಗೌಡರು ಕೊರೊನಾ ಸಂದರ್ಭದಲ್ಲಿ ಬಡವರಿಗೆ ಆಹಾರ ಕಿಟ್, ವೈದ್ಯಕೀಯ ನೆರವು ನೀಡುವುದರ ಮೂಲಕ ಸಂಕಷ್ಟದಲ್ಲಿ ಜನರ ಕೈಹಿಡಿದಿದ್ದಾರೆ. ಬೃಹತ್ ಉದ್ಯೋಗ ಮೇಳದ ಮೂಲಕ ವಿದ್ಯಾವಂತರ ಜೀವನಕ್ಕೆ ದಾರಿದೀಪವಾಗಿದ್ದಾರೆ. ಇಂತಹ ನಿಷ್ಠಾವಂತ ಕಾರ್ಯಕರ್ತರನ್ನು ಪಕ್ಷ ಗುರುತಿಸಿ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು. ಈ ವೇಳೆ ಚಂದ್ರೇಗೌಡ, ನರಸೇಗೌಡ, ಪಾಯದ ನಾಗರಾಜು, ರಮೇಶ್ ರಾಮಚಂದ್ರ, ರವಿ, ದಿನೇಶ್, ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

ಹಿಂದಿ ಹೇರಿಕೆ ಹುನ್ನಾರ ನಿಲ್ಲಲಿ

ಕನ್ನಡ ಚಳವಳಿಗಾರರ ಆಗ್ರಹ

ಮೈಸೂರು, ಅ.16(ಎಂಟಿವೈ)–ಹಿಂದಿ ಹೇರಿಕೆಗೆ ರಾಜ್ಯದಲ್ಲಿ ಹುನ್ನಾರ ನಡೆಸಲಾಗುತ್ತಿದೆ ಎಂದು ಆರೋಪಿಸಿ ಕನ್ನಡ ಚಳವಳಿ ಕೇಂದ್ರ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರಿನ ನ್ಯಾಯಾಲಯ ಮುಂಭಾಗದ ಮಹಾತ್ಮ ಗಾಂಧಿ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದ ಕನ್ನಡ ಚಳುವಳಿಗಾರರು, ರಾಜ್ಯದಲ್ಲಿ ಹಿಂದಿ ಹೇರಿಕೆಗೆ ನಡೆದಿರುವ ಹುನ್ನಾರ ನಿಲ್ಲಬೇಕು. ಕೇಂದ್ರ ಸರ್ಕಾರ ಬಲವಂತವಾಗಿ ಹಿಂದಿ ಹೇರಿಕೆ ಮಾಡುವ ತಂತ್ರವನ್ನು ಕೈ ಬಿಡಬೇಕು. ಬ್ಯಾಂಕ್, ಅಂಚೆ ಕಚೇರಿ ಸೇರಿದಂತೆ ಕೇಂದ್ರ ಸರ್ಕಾರದ ಕಚೇರಿಗಳು ಹಿಂದಿಮಯವಾಗಿದ್ದು, ಅಲ್ಲಿ ಕನ್ನಡಿಗರಿಗೆ ವ್ಯವಹರಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಕನ್ನಡ ಬಳಕೆಯನ್ನು ಕಡ್ಡಾಯಗೊಳಿಸಬೇಕು ಎಂದು ಆಗ್ರಹಿಸಿದರು. ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ)ದ ಮೂಲಕ ವಿವಿಧ ಹುದ್ದೆಗಳ ನೇಮಕಾತಿಗೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ನಡೆಸುತ್ತಿರುವುದು ಖಂಡನೀಯ. ಕನ್ನಡಿಗರಿಗೆ ಕನ್ನಡದಲ್ಲಿಯೇ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಕನ್ನಡದ ಮೇಲೆ ಹಿಂದಿ ಹೇರಿಕೆಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಸಮಿತಿ ಪದಾಧಿಕಾರಿಗಳಾದ ಮೂಗೂರು ನಂಜುಂಡಸ್ವಾಮಿ, ತಾಯೂರು ವಿಠಲಮೂರ್ತಿ, ಸಿದ್ದಲಿಂಗಪ್ಪ, ಮಲ್ಲಣ್ಣ, ಬಸಪ್ಪ, ನಾಗರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ದೈಹಿಕ, ಮಾನಸಿಕ ಆರೋಗ್ಯದತ್ತ ವಿದ್ಯಾರ್ಥಿಗಳ ಹೆಜ್ಜೆ

ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದಿಂದ ವಿಶ್ವ ಮಾನಸಿಕ ಆರೋಗ್ಯ ದಿನ ವಿಭಿನ್ನ ಕಾರ್ಯಕ್ರಮ



ಮೈಸೂರು,ಅ.16–'ವ್ಯಾಯಾಮದಿಂದ ದೈಹಿಕ, ಮಾನಸಿಕ ಆರೋಗ್ಯ' ಧ್ಯೇಯದೊಂದಿಗೆ ಹೆಜ್ಜೆ ಹಾಕಿದ್ದಲ್ಲದೇ ಬೀದಿ ನಾಟಕದ ಮೂಲಕವೂ ಅರಿವು ಮೂಡಿಸುವ ಕೆಲಸವನ್ನು ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಮಾಡಿದರು.

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ವಿದ್ಯಾವರ್ಧಕ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಜತೆಗೂಡಿ ನಾಟಕವನ್ನು ಪ್ರಸ್ತುತಪಡಿಸಿ ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಸಿದರು. 8ಮಂದಿಗೆ ಒಬ್ಬರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಯಿದೆ. ಪ್ರತಿ 40 ಸೆಕೆಂಡಿಗೆ ಒಬ್ಬರ ಆತ್ಮಹತ್ಯೆ ನಡೆಯುತ್ತಿದೆ ಎಂಬ ಆಘಾತಕಾರಿ ಅಂಶವನ್ನು ಸಂಶೋಧನೆಗಳು ತಿಳಿಸಿಕೊಟ್ಟಿವೆ. ಹೀಗಾಗಿ 1992ರಲ್ಲಿ ಮೊದಲ ಬಾರಿಗೆ ಈ ದಿನವನ್ನು ಆಚರಿಸಲಾಯಿತು. ಎಲ್ಲರಲ್ಲೂ ಮಾನಸಿಕ ಕಾಯಿಲೆ ಅಲ್ಪ ಪ್ರಮಾಣದಲ್ಲಿ ಇರುತ್ತದೆ. ಶೇ.12ರಷ್ಟು ಪ್ರಮಾಣದ ಮಾನಸಿಕ ಖಿನ್ನತೆ ಆಲ್ಕೋಹಾಲ್ ಹಾಗೂ ಡ್ರಗ್ ಸೇವನೆಯಿಂದ ಆಗುತ್ತಿರುವ ಬಗ್ಗೆ ವರದಿಗಳಿವೆ ಎಂಬುದನ್ನು ಕಾರ್ಯಕ್ರಮದಲ್ಲಿ ತಿಳಿಸಿಕೊಡುವ ಮೂಲಕ ಜನಜಾಗೃತಿ ಮೂಡಿಸಿದರು. ಈ ವೇಳೆ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಬಿ. ಸದಾಶಿವೇಗೌಡ, ಆಪ್ತ ಸಮಾಲೋಚಕರಾದ ಎಂ.ಆರ್. ಶಂಭಾವಿ ಇನ್ನಿತರರು ಉಪಸ್ಥಿತರಿದ್ದರು.

ಜೀವನದ ಸಂಧ್ಯಾ ಕಾಲದಲ್ಲಿ ಹಿರಿಯ ನಾಗರಿಕರಿಗೆ ಅಗತ್ಯ ನೆರವು

ಅವರವರ ಧರ್ಮದನುಸಾರ ಆಧ್ಯಾತ್ಮಿಕವಾಗಿಯೂ ಒತ್ತಾಸೆ



ಮೈಸೂರು, ಅ.16(ಎಂಟಿವೈ)– ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆಯಲ್ಲಿ ಶನಿವಾರ ಹಿರಿಯ ನಾಗರಿಕರ ದಿನಾಚರಣೆ ಹಾಗೂ ಉಪಶಮನ ಆರೈಕೆ ಕಾರ್ಯಕ್ರಮ ಆಯೋಜಿಸಿ, ಹಿರಿಯ ನಾಗರಿಕರಿಗೆ ದೊರೆಯುವ ಆರೋಗ್ಯ ಸೌಲಭ್ಯದ ಬಗ್ಗೆ ಅರಿವು ಮೂಡಿಸಲಾಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಸ್ವಾಮಿ ವಿವೇಕಾನಂದ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಪಿಕೆಟಿಬಿ ಆಸ್ಪತ್ರೆಯ ಕುವೆಂಪು ಸಭಾಂಗಣದಲ್ಲಿ ನಡೆದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮವನ್ನು ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಉದ್ಘಾಟಿಸಿ ಮಾತನಾಡಿ, ಸರ್ಕಾರ ಹಾಗೂ ಕೆಲವು ಸ್ವಯಂಸೇವಾ ಸಂಸ್ಥೆಗಳ ನೆರವಿನಿಂದ ಹಲವೆಡೆ ಉಪಶಮನ ಆರೈಕೆ(ಪ್ಯಾಲಿಯೇಟಿವ್ ಕೇರ್) ಕೇಂದ್ರ ತೆರೆಯಲಾಗಿದೆ. ಕ್ಯಾನ್ಸರ್, ಪಾರ್ಶ್ವವಾಯು, ಹೆಚ್‌ಐವಿ ಸೇರಿದಂತೆ ದೀರ್ಘಕಾಲಿಕ ಹಾಗೂ ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತಾ ಹಾಸಿಗೆ ಹಿಡಿದಿರುವ ಹಿರಿಯ ನಾಗರಿಕರಿಗೆ ನೋವಿನಿಂದ ಹೊರತರಲು ಹಾಗೂ ಅವರಿಗೆ ಆರೈಕೆ ಮಾಡಲು ಉಪಶಮನ ಆರೈಕೆ ಕೇಂದ್ರ ತೆರೆಯಲಾಗಿದೆ ಎಂದರು.

ಈ ಕೇಂದ್ರದಲ್ಲಿ ಸೂಕ್ತ ಚಿಕಿತ್ಸೆಯೊಂದಿಗೆ ಉಪಶಮನಕ್ಕೆ ಕ್ರಮ ಕೈಗೊಳ್ಳಲಾಗಿದೆ. ರೋಗಿಗಳಿಗೆ ಆರೈಕೆಯೊಂದಿಗೆ ಮಾನಸಿಕ ಹಾಗೂ ಆಧ್ಯಾತ್ಮಿಕವಾಗಿ ಒತ್ತಾಸೆಯಾಗುವುದು. ದೀರ್ಘಕಾಲ ನಾನಾ ನೋವಿನಿಂದ ಬಳಲುತ್ತಿರುವ ರೋಗಿಗಳಿಗೆ ಉಪಶಮನ, ರೋಗಿಗಳು ಹಾಗೂ ಅವರ ಕುಟುಂಬದವರೊಂದಿಗೆ ಆಪ್ತ ಸಮಾಲೋಚನೆ, ಅಗತ್ಯ ನೆರವು ನೀಡುವ ಗುರಿ ಹೊಂದಲಾಗಿದೆ ಎಂದರು.

ಉಪಶಮನ ಆರೈಕೆ ಕೇಂದ್ರವು 20 ಹಾಸಿಗೆ ಹೊಂದಿದ್ದು, ಇದರಲ್ಲಿ ವೈದ್ಯರು, ನರ್ಸ್ ಹಾಗೂ ಆಪ್ತ ಸಮಾಲೋಚಕರು ರೋಗಿಗಳ ಸೇವೆಗೆ ಸಜ್ಜಾಗಿದ್ದಾರೆ. ರೋಗಿಗಳು ಹಾಗೂ ಕುಟುಂಬದ ಸದಸ್ಯರಿಗೆ ಮಾನಸಿಕ ಹಾಗೂ ಧನಾತ್ಮಕ ಬೆಂಬಲ ನೀಡಲಾಗುತ್ತದೆ. ರೋಗಿಗಳಿಗೆ ಸರ್ಕಾರದ ವಿವಿಧ ಯೋಜನೆಗಳಿಂದ ಬರುವ ಸೌಲಭ್ಯ ಹಾಗೂ ಸಾಮಾಜಿಕ ಸವಲತ್ತಿನ ಬಗ್ಗೆಯೂ ಜಾಗೃತಿ ಮೂಡಿಸಿ, ಸಹಕಾರ ನೀಡಲಾಗುತ್ತದೆ. ಜೀವನದ ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಅವರ ಧರ್ಮಕ್ಕೆ ಅನುಗುಣವಾಗಿ ಆಧ್ಯಾತ್ಮಿಕವಾಗಿ ಒತ್ತಾಸೆ ನೀಡಲಾಗುತ್ತದೆ. ಇದರೊಂದಿಗೆ ಸಲಹಾ ಮತ್ತು ಸಂಪರ್ಕ ಸೇವೆಯಲ್ಲಿ ವಿವಿಧ ಯೋಜನೆಗಳ ಸೌಲಭ್ಯ ಒದಗಿಸಲಾಗುತ್ತದೆ ಎಂದು ತಿಳಿಸಿದರು.

ಜಾಗೃತಿ ಜಾಥಾ: ಕಾರ್ಯಕ್ರಮದ ಅಂಗವಾಗಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ವಿವಿಧ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಜಾಗೃತಿ ಜಾಥಾದಲ್ಲಿ ಪಾಲ್ಗೊಂಡು ಹಿರಿಯ ನಾಗರಿಕರ ಆರೈಕೆ ಬಗ್ಗೆ ಜಾಗೃತಿ ಮೂಡಿಸಿದರು. ಇಡಿ ಆಸ್ಪತ್ರೆಯಿಂದ ಆರಂಭವಾದ ಜಾಥಾ ಲೋಕನಾಯಕನಗರ, ಬಸವನಗುಡಿ, ಹೆಬ್ಬಾಳ, ಸೂರ್ಯ ಬೇಕರಿ ವೃತ್ತ, ಕುಂಬಾರಕೊಪ್ಪಲು ಮೂಲಕ ಕೆಆರ್‌ಎಸ್ ಮುಖ್ಯ ರಸ್ತೆಯಲ್ಲಿರುವ ಪಿಕೆಟಿಬಿ ಹಾಗೂ ಸಿಡಿ ಆಸ್ಪತ್ರೆ ಆವರಣದಲ್ಲಿ ಮುಕ್ತಾಯಗೊಂಡಿತು.

ಕಾರ್ಯಕ್ರಮದಲ್ಲಿ ಮೂಳೆ ಶಸ್ತ್ರಚಿಕಿತ್ಸಕ, ಸರಗೂರಿನ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕ, ಡಾ.ಎಂ.ಆರ್.ಸೀತಾರಾಮ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗ ಜಂಟಿ ನಿರ್ದೇಶಕಿ ಡಾ. ರಾಜೇಶ್ವರಿ, ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿ ಡಾ. ಎನ್.ಮಹದೇವಪ್ರಸಾದ್, ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್, ಹಿರಿಯ ನಾಗರಿಕ ಕಲ್ಯಾಣಾಧಿಕಾರಿ ಮಾಲತಿ, ರೋಟರಿ ಅಂತರರಾಷ್ಟ್ರೀಯ ಜಿಲ್ಲಾ ಗವರ್ನರ್ ಎನ್.ಪ್ರಕಾಶ್ ಕಾರಂತ್, ರೋಟರಿ ಉತ್ತರ ಅಧ್ಯಕ್ಷ ಡಾ.ಎಸ್.ಹೆಚ್.ಜಗದೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕಲಾಭೂಮಿ ಪ್ರತಿಷ್ಠಾನ ಅಸ್ತಿತ್ವಕ್ಕೆ

ಸಿನಿಮಾ, ನಾಟಕ, ಲಲಿತಕಲಾ ಶಾಲೆಗೆ ಚಾಲನೆ



ಮೈಸೂರು, ಅ.16(ಜಿಎ)– ಸಿನಿಮಾ, ನಾಟಕ ಹಾಗೂ ಲಲಿತಕಲೆ ಶಾಲೆಯಾದ 'ಕಲಾಭೂಮಿ ಪ್ರತಿಷ್ಠಾನ' ಮೈಸೂರಿನಲ್ಲಿ ಚಾಲನೆ ದೊರಕಿತು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಲಯನ್ಸ್ ಕ್ಲಬ್ ಮೈಸೂರು–ಬಾಂಧವ್ಯ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮಾ. ಹರೀಶ್ ಕಲಾಶಾಲೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು. ಇದೇ ವೇಳೆ ಹಿರಿಯ ನಟ ಶಂಕರ್ ಅಶ್ವಥ್, ಜಾರಿ ನಿರ್ದೇಶನಾಲಯ ಮೈಸೂರು ಪೊಲೀಸ್ ಅಧೀಕ್ಷಕಿ ಡಾ.ಬಿ.ಟಿ.ಕವಿತಾ, ಸಮಾಜ ಸೇವಕಿ ಪ್ರೇಮಾಬೋಧಿ, ರಂಗಭೂಮಿ ಕಲಾವಿದ ಮಂಜುಸ್ವಾಮಿ, ರಂಗಕರ್ಮಿ ಗಿರೀಶ್ ಮಾಚಳ್ಳಿ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಹಿರಿಯ ನಟ ಮತ್ತು ವಾಣಿಜ್ಯ ಮಂಡಳಿ ಉಪಾಧ್ಯಕ್ಷ ಜೈಜಗದೀಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಈ ರೀತಿಯ ಸಂಸ್ಥೆ ಆರಂಭಿಸುವುದು ಸವಾಲಿನ ಕೆಲಸ. ಇದಕ್ಕೆ ಜನಸಂಪರ್ಕದ ಜೊತೆಗೆ ಆರ್ಥಿಕ ಶಕ್ತಿ ಇರಬೇಕು. ಹಾಗಾಗಿ ನಾವೂ ಈ ಬಗ್ಗೆ ಆಲೋಚಿಸಿಲ್ಲ. ಆದರೆ ನಟ, ನಿರ್ದೇಶಕ ಆಸ್ಕರ್ ಕೃಷ್ಣ ಹಾಗೂ ಸ್ನೇಹಿತರಿಂದ ಈ ಕಾರ್ಯವಾಗಿರುವುದು ಶ್ಲಾಘನಾರ್ಹ. ಈ ಸಂಸ್ಥೆಯ ಕಾರ್ಯಕ್ಕೆ ವಾಣಿಜ್ಯ ಮಂಡಳಿಯಿಂದ ಸದಾ ಸಹಕಾರ ವಿರಲಿದೆ ಎಂದು ಭರವಸೆ ನೀಡಿದರು.

ರಂಗಾಯಣದ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಮಾತನಾಡಿ, ಯಾವುದಾದರೂ ಕಲಾ ಸಂಸ್ಥೆಗಳು ನಮ್ಮ ಸಂಸ್ಕೃತಿ ಪ್ರತಿಬಿಂಬಿಸುವ ಸಂಸ್ಥೆಗಳಾಗಿರುತ್ತವೆ. ಒಂದು ಕಲೆಗೆ ಸೀಮಿತವಾಗಿರುವ ಸಂಸ್ಥೆಗಳನ್ನು ಸಹಜವಾಗಿ ಕಾಣುತ್ತೇವೆ. ಆದರೆ ಕಲಾಭೂಮಿ ಪ್ರತಿಷ್ಠಾನದ ಮೂಲಕ ಸಿನಿಮಾ, ನಾಟಕ ಹಾಗೂ ಲಲಿತ ಕಲೆಗಾಗಿ ಸೇವೆ ಸಲ್ಲಿಸಲು ಮುಂದಾಗಿರುವುದು ವಿಶೇಷ. ಇಂತಹ ಸಂಸ್ಥೆಗಳು ಜ್ಞಾನಾರ್ಜನೆಯ ಕೇಂದ್ರವಾಗಿ ಬೆಳೆಯಬೇಕು ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿಗಳಾದ ಎಂ.ಎನ್. ಕುಮಾರ್, ಕುಶಾಲ್‌ಗೌಡ, ಉಪಾಧ್ಯಕ್ಷೆ ಶಿಲ್ಪಾ ಶ್ರೀನಿವಾಸ್, ಖಜಾಂಚಿ ಟಿ.ಪಿ.ಸಿದ್ದರಾಜು, ಕಲಾಭೂಮಿ ಸಂಸ್ಥೆಯ ಆಸ್ಕರ್ ಕೃಷ್ಣ, ದೇವಜನ ಗೀತಾ ಮೋಂಟಡ್ಕ, ಡಾ. ಕೃಷ್ಣಮೂರ್ತಿ ಚಮರಂ, ಎಸ್.ಎಂ. ಪಾಟೀಲ್, ಬಿ.ಎಮಧು, ಎಸ್.ಡಿ.ಅರವಿಂದ್, ಸತ್ಯಲಿಂಗರಾಜು, ವಿಶ್ರುತ್ ನಾಯಕ್, ತೃಪ್ತಿ ಅಭಿಕರ್, ಸಿದ್ದು ಪೂರ್ಣಚಂದ್ರ, ರೋಹಿತ್ ರಮಣ, ಪ್ರಶಾಂತ್ ಅಂಕಪುರ ಮತ್ತಿತರರು ಉಪಸ್ಥಿತರಿದ್ದರು.

ಪಿಎಸ್‌ಐ ನೇಮಕಾತಿ ಪ್ರಕರಣ: ಎಲ್ಲಾ ದಾಖಲೆ ಸಲ್ಲಿಸುವಂತೆ ಎಸಿಎಂಎಂಗೆ ವಿಶೇಷ ನ್ಯಾಯಾಲಯ ಆದೇಶ

ಬೆಂಗಳೂರು, ಅ.16–ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಯಂತ್ರಣ (ಪಿಸಿ) ಕಾಯಿದೆಯ ವಿವಿಧ ಸೆಕ್ಷನ್‌ಗಳನ್ನು ಸೇರಿಸಿರುವುದರಿಂದ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ವರ್ಗಾಯಿಸುವಂತೆ ಬೆಂಗಳೂರಿನ ಒಂದನೇ ಹೆಚ್ಚುವರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ (ಎಸಿಎಂಎಂ) ನ್ಯಾಯಾಲಯಕ್ಕೆ ಪಿಸಿ ಕಾಯಿದೆ ಅಡಿ ಸ್ಥಾಪಿಸಲಾಗಿರುವ ವಿಶೇಷ ನ್ಯಾಯಾಲಯವು ಆದೇಶಿಸಿದೆ. ಸಿಐಡಿಯ ಡಿವೈಎಸ್‌ಪಿ ಬಿ.ಕೆ. ಶೇಖರ್ ಅವರು ಪಿಎಸ್‌ಐ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತರಿಸಿಕೊಳ್ಳುವಂತೆ ವಿಶೇಷ ನ್ಯಾಯಾಲಯವನ್ನು ಕೋರಿದ್ದರು. ತನಿಖಾಧಿಕಾರಿಯ ಕೋರಿಕೆಯನ್ನು ವಿಶೇಷ ನ್ಯಾಯಾಲಯ ಅನುಮತಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಮನವಿ ಸಲ್ಲಿಸಲು ಆದೇಶಿಸಿದೆ. ಹೀಗಾಗಿ, ಇಡೀ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಕೋರುತ್ತೇನೆ ಎಂದು ವಿಶೇಷ ನ್ಯಾಯಾಲಯದ ಶಿರಸ್ತೇದಾರ್ ಅವರು ಈಚೆಗೆ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ಪತ್ರ ಬರೆದಿದ್ದಾರೆ.

ಡಿವೈಎಸ್‌ಪಿ ನರಸಿಂಹಮೂರ್ತಿ 2022ರ ಏಪ್ರಿಲ್ 29ರಂದು ಹೈಗ್ರೌಂಡ್ಸ್ ಠಾಣೆಯಲ್ಲಿ ಹಗರಣಕ್ಕೆ ಸಂಬಂಧಿಸಿದಂತೆ 22 ಮಂದಿಯ ವಿರುದ್ಧ ದೂರು ನೀಡಿದ್ದರು. ಆನಂತರ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, ಡಿವೈಎಸ್‌ಪಿ ಬಿ.ಕೆ. ಶೇಖರ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 27ರಂದು ಮೊದಲ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಅಮಾನತುಗೊಂಡಿರುವ ಎಡಿಜಿಪಿ ಅಮೃತ್ ಪೌಲ್ ವಿರುದ್ಧ ಸೆಪ್ಟೆಂಬರ್ 28ರಂದು ಹೆಚ್ಚುವರಿ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ಪ್ರಕರಣದಲ್ಲಿ 25, 26, 28, 31, 32, 33, 34ನೇ ಆರೋಪಿಗಳು ಪೊಲೀಸ್ ಅಧಿಕಾರಿಗಳಾಗಿದ್ದು, 29 ಮತ್ತು 30ನೇ ಆರೋಪಿಗಳು ಪೊಲೀಸ್ ಇಲಾಖೆಯಲ್ಲಿ ಲಿಪಿಕ ಸಿಬ್ಬಂದಿಯಾಗಿದ್ದಾರೆ. ಕರ್ನಾಟಕ ಪೊಲೀಸ್ ಕಾಯಿದೆಯ ಸೆಕ್ಷನ್ 170 ಮತ್ತು ಸಿಆರ್‌ಪಿಸಿ ಸೆಕ್ಷನ್ 197 ಅಡಿ ಅಧಿಕಾರಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲು ರಾಜ್ಯ ಸರ್ಕಾರವು ಅಭಿಯೋಜನಾ ಮಂಜೂರಾತಿ ನೀಡಿದೆ. ಪೊಲೀಸ್ ನೇಮಕಾತಿ ವಿಭಾಗದ ಅಧಿಕಾರಿಗಳು ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ರೂ. 3.12 ಕೋಟಿ ರೂಪಾಯಿ ವಶಪಡಿಸಿಕೊಳ್ಳಲಾಗಿದೆ. ಅವರ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯಿದೆ 1988ರ ಅಡಿ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ. ಹೀಗಾಗಿ, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಎಸಿಎಂಎಂ ನ್ಯಾಯಾಲಯದಿಂದ ತರಿಸಿಕೊಂಡು, ಪ್ರಕ್ರಿಯೆ ಮುಂದುವರಿಸುವಂತೆ ತನಿಖಾಧಿಕಾರಿ ಕೋರಿಕೆ ಸಲ್ಲಿಸಿದ್ದರು. ಇದನ್ನು ವಿಶೇಷ ನ್ಯಾಯಾಲಯವು ಪುರಸ್ಕರಿಸಿದೆ.

ದೇಶದ ಅಭಿವೃದ್ಧಿಯಲ್ಲಿ ತಾಂತ್ರಿಕ ಶಿಕ್ಷಣ ಪ್ರಮುಖ ಪಾತ್ರ ವಹಿಸಲಿದೆ




ಬೆಂಗಳೂರು, ಅ.16– ದೇಶದ ಅಭಿವೃದ್ಧಿಯಲ್ಲಿ ತಾಂತ್ರಿಕ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಇದು ತಂತ್ರಜ್ಞಾನದ ಸಮಯ. ತಾಂತ್ರಿಕ ಗುಣಮಟ್ಟದ ಶಿಕ್ಷಣವು ಖಂಡಿತವಾಗಿಯೂ ಯುವಕರಿಗೆ ಕೌಶಲ್ಯ ಮತ್ತು ಶ್ರೇಷ್ಠತೆಯನ್ನು ನೀಡುತ್ತದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಎಂ.ಎಸ್. ರಾಮಯ್ಯ ತಾಂತ್ರಿಕ ಶಿಕ್ಷಣ ಸಂಸ್ಥೆಯ ವಜ್ರ ಮಹೋತ್ಸವದ ಕಾರ್ಯಕ್ರಮದಲ್ಲಿ ವರ್ಚುವಲ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು. ಪ್ರಾಚೀನ ಕಾಲದಲ್ಲಿ, ನಮ್ಮ ದೇಶವು ಜ್ಞಾನ ಮತ್ತು ವಿಜ್ಞಾನದ ಕಾರಣದಿಂದಾಗಿ ವಿಶ್ವ ಗುರುವಿನ ಸ್ಥಾನವನ್ನು ಹೊಂದಿತ್ತು. ಇದನ್ನು ಮತ್ತೊಮ್ಮೆ ಸಾಧಿಸಲು, ನಮ್ಮ ಯುವ ಕೌಶಲ್ಯ, ಪ್ರತಿಭೆ ಮತ್ತು ಶಕ್ತಿಯನ್ನು ಸಂಯೋಜಿಸುವ ಮೂಲಕ ನಾವು ಸಕ್ರಿಯ ಪ್ರಯತ್ನಗಳನ್ನು ಮಾಡಬೇಕು ಮತ್ತು ಇದರಲ್ಲಿ ಯುವಕರ ಪಾತ್ರವು ಮುಖ್ಯವಾಗಿದೆ. ನಮ್ಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯವು ಬಹಳ ಪ್ರಾಚೀನವಾಗಿದೆ ಮತ್ತು ಪ್ರಾಚೀನ ಕಾಲದಿಂದಲೂ 'ವಸುದೈವಂ ಕುಟುಂಬಕಂ' ತತ್ವಶಾಸ್ತ್ರ ಮತ್ತು ಧ್ಯಾನದ ಮೇಲೆ ಕೇಂದ್ರೀಕೃತವಾಗಿದೆ ಮತ್ತು 'ಸರ್ವೇ ಭವಂತು ಸುಖಿನೋ, ಸರ್ವೇ ಸಂತು ನಿರಾಮಯ' ಎಂಬ ಮನೋಭಾವದಿಂದ ಪ್ರೇರಿತವಾಗಿದೆ ಎಂದರು.

ಇಂದು ಇಡೀ ಸಮಾಜ ಮತ್ತು ದೇಶದಲ್ಲಿ ನೈತಿಕತೆಯನ್ನು ಹುಟ್ಟುಹಾಕುವ ಮತ್ತು ಆಧುನಿಕ ಜ್ಞಾನವನ್ನು ಮೌಲ್ಯಗಳೊಂದಿಗೆ ಜೋಡಿಸುವ, ಧರ್ಮ–ಸಂಸ್ಕೃತಿ, ರಾಷ್ಟ್ರದ ಏಕತೆ–ಸಮಗ್ರತೆಯನ್ನು ಮತ್ತು ಸಮಾಜದಲ್ಲಿ ಸಮಾನತೆ ಮತ್ತು ಸೌಹಾರ್ದತೆಯನ್ನು ಕಾಪಾಡುವ ಇಂತಹ ಶಿಕ್ಷಣದ ಅವಶ್ಯಕತೆಯಿದೆ ಎಂದು ಹೇಳಿದರು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು(NEP) ನಮ್ಮ ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಯ ಭವಿಷ್ಯವನ್ನು ಉಜ್ವಲ ಮತ್ತು ಸುರಕ್ಷಿತಗೊಳಿಸಲಿದೆ. ನವ ಭಾರತ ನಿರ್ಮಾಣದಲ್ಲಿ ಇದರ ಪಾತ್ರ ನಿರ್ಣಾಯಕವಾಗಿರುತ್ತದೆ. ಈ ಶಿಕ್ಷಣ ನೀತಿಯನ್ನು ಜಾರಿಗೆ ತರುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.10.2022 ಸೋಮವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ : ಆರಿದ್ರಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್, ಶ್ರೀರಾಮ ಮಂದಿರ (ಜಯನಗರ):** ಆರೋಗ್ಯ ಶಿಬಿರ, ಬಿ.ಪಿ., ಶುಗರ್, ಬೊಜ್ಜು ನಿವಾರಣೆ, ಗ್ಯಾಸ್ಟ್ರಿಕ್, ಅಸಿಡಿಟಿ, ಅಸ್ತಮಾ, ಸೈನಸ್, ಅಜೀರ್ಣ, ವೆರಿಕೋಸ್, ಬೆನ್ನು ನೋವು, ಸಯಾಟಿಕ್, ಸಂಧಿವಾತ, ಥೈರಾಯ್ಡ್, ನಿದ್ರಾಹೀನತೆ, ಮೊಣಕಾಲು ನೋವು, ಕುತ್ತಿಗೆ ನೋವು, ಹಿಮ್ಮಡಿ ನೋವು ಇತ್ಯಾದಿ ಖಾಯಿಲೆಗಳಿಗೆ ಚಿಕಿತ್ಸೆ. ಸ್ಥಳ: ಶ್ರೀರಾಮ ಮಂದಿರ, 16ನೇ ಕ್ರಾಸ್, ಜಯನಗರ. ಬೆಳಗ್ಗೆ 10.30 ರಿಂದ ಸಂಜೆ 5.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನ, ಸಮಾನತೆ ಪ್ರಕಾಶನ:** ರಾಜ್ಯ ಕಾನೂನು ವಿವಿ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ. ಸಿ.ಬಸವರಾಜು, ಮುಕ್ತ ವಿವಿಯಿಂದ ಪಿಹೆಚ್‌ಡಿ ಪದವಿ ಪಡೆದಿರುವ ಡಾ. ಕಲ್ಯಾಣ ಸಿರಿ ಭಂತೇಜಿ ಅವರಿಗೆ ಅಭಿನಂದನಾ ಸಮಾರಂಭ. ಸ್ಥಳ: ಕಲಾಮಂದಿರ. ಬೆಳಗ್ಗೆ 11 ಗಂಟೆಗೆ.

■ **ಮಹಾರತ್ನ ಟ್ರಸ್ಟ್:** ಜಾನಪದ ಗೀತೆಗಳ ಕಲಿಕಾ ಶಿಬಿರ–2022. ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ. ಅಧ್ಯಕ್ಷತೆ: ಜಾನಪದ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ. ಮುಖ್ಯ ಅತಿಥಿಗಳು: ಕಲಾ ಪ್ರೋತ್ಸಾಹಕರಾದ ಕೆ.ವಿ.ಮಲ್ಲೇಶ್, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಜಿ.ಆರ್.ಶ್ರೀವತ್ಸ, ಮಹಾರತ್ನ ಟ್ರಸ್ಟ್ ಅಧ್ಯಕ್ಷರು, ಗಾಯಕರೂ ಆದ ಮೈಸೂರು ಎಂ.ಮಹಾಲಿಂಗ. ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ. ಸಂಜೆ 4 ಗಂಟೆಗೆ.

■ **ನೃತ್ಯಗಿರಿ (ಪ್ರದರ್ಶನ ಕಲೆಗಳ ಸಂಶೋಧನಾ ಕೇಂದ್ರ, ಮೈಸೂರು):** ನೃತ್ಯ ಸಪ್ತಾಹ, ಬೆಳ್ಳಿ ಹಬ್ಬದ ಸಂಭ್ರಮ, ಗುರುವಂದನಾ ಕಾರ್ಯಕ್ರಮ, ಕುಮಾರಿ ತನ್ಮಯಿ ಕಿಶೋರ್ ಅವರಿಂದ ಗುರುವಂದನಾ ಕಾರ್ಯಕ್ರಮ. ಅಧ್ಯಕ್ಷತೆ: ಮಹರ್ಷಿ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಡಾ. ಭವಾನಿ ಶಂಕರ್. ಮುಖ್ಯ ಅತಿಥಿ: ಎಲ್‌ಐಸಿ ಆಫ್ ಇಂಡಿಯಾದ ನಿವೃತ್ತ ಸಹಾಯಕ ವಿಭಾಗ ಮುಖ್ಯಸ್ಥರಾದ ಎಚ್‌ವಿಎಲ್‌ಎನ್ ಆಚಾರ್. ಸ್ಥಳ: ವೀಣೆಶೇಷಣ್ಣ ಭವನ, ಗಾನ ಭಾರತಿ, ಆದಿಚುಂದನಗಿರಿ ರಸ್ತೆ, ಕುವೆಂಪುನಗರ. ಸಂಜೆ 6 ಗಂಟೆಯಿಂದ.

■ **ಪಂಡಿತ್ ರಾಜೀವ್ ತಾರಾನಾಥ್ ಸನ್ಮಾನ ಟ್ರಸ್ಟ್:** ಪಂಡಿತ್ ರಾಜೀವ್, ತಾರಾನಾಥ್ 90ನೇ ಹುಟ್ಟು ಹಬ್ಬದ ಸಂಭ್ರಮ, ವೀಡಿಯೋ ತುಣುಕುಗಳ ಪ್ರದರ್ಶನ. ಆಶೀರ್ವಚನ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರಿಂದ. ವಿಶೇಷ ಅತಿಥಿಗಳು: ಚಂದ್ರಶೇಖರ ಕಂಬಾರ, ಉಸ್ತಾದ್ ಫೈಯ್ಯಾಜ್ ಖಾನ್, ಮನು ಬಳಿಗಾರ್. ಗಣೇಶ್ ಅಮೀನ್ ಗಡ ಮತ್ತು ರಘುಪತಿ ತಮ್ಹಾಣ್‌ಕರ್ ಅವರ ಸಂಪಾದಕತ್ವದ ಸ್ವಯಾನ ಪುಸ್ತಕ ಬಿಡುಗಡೆ, ನಾದಾಂಜಲಿ, ಪಂಡಿತ್ ರಾಜೀವ್ ತಾರಾನಾಥ್–ಎ ಲೈಫ್ ಇನ್ ಮ್ಯೂಸಿಕ್ ಸಾಕ್ಷ್ಯಚಿತ್ರ ಪ್ರದರ್ಶನ. ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣ, ಸರಸ್ವತಿಪುರಂ. ಸಂಜೆ 6.15ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ಯಾತ್ರೆ: ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್, ಮನೋರಮಾ, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಪಿ.ಎಸ್. ರಂಜನಿ, ರೋಹಿಣೀ ಸುಧಾಮ್ ವ್ಯಾಖ್ಯಾನ:– ಡಾ.ಲತಾ ಮೈಸೂರು, 10.00 ಲಯ ಸಂಭ್ರಮ, ಪರಿಕಲ್ಪನೆ ಮತ್ತು ಪ್ರಸ್ತುತಿ– ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್. ಸುಬ್ರಹ್ಮಣ್ಯ.

ಮಧ್ಯಾಹ್ನ: 12.30 ದೇವರನಾಮ: ಸಂಗೀತಾ ಕಟ್ಟಿ, ಆರ್.ಕೆ. ಶ್ರೀಕಂಠನ್, 12.45 ನಮ್ಮ ಆರೋಗ್ಯ ಕಾರ್ಯಕ್ರಮ ಯುವಜನರಲ್ಲಿ ಕಣ್ಣಿನ ತೊಂದರೆ, ಲಕ್ಷಣಗಳು ಮತ್ತಿ ಚಿಕಿತ್ಸೆ, ಕ್ರಿತು ಡಾ. ಪಿ. ಚಂದ್ರಕಲಾ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ವೃಂದಗಾನ, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ– ಡಾ. ಸುಕನ್ಯಾ ಪ್ರಭಾಕರ್.

ಸಂಜೆ: 4.00 ಮಹಿಳಾರಂಗ: ಡಾಕ್ಟರ್ ಸಮಯ, ಭಾಗವಹಿಸುವ ವೈದ್ಯರು– ಡಾ. ಕೃಷ್ಣಾ ಕೆ.ಆರ್., ವಿಷಯ– ಮಹಿಳೆಯರಲ್ಲಿ ಖಿನತ್ತೆ, ಪ್ರಸ್ತುತಿ– ಕೆ.ಬಿ. ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್ ವಾಣಿ– ವಿಶ್ವ ಆಹಾರ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ.

ರಾತ್ರಿ: 9.30 ಎ.ವಿ. ಪ್ರಕಾಶ್– ವೇಣುವಾದನ, 10.00 ನಾಟಕ, 10.30 ಸವಿನೆನಪು.

ಮೈಸೂರು ಮಿತ್ರ

ಸೋಮವಾರ 17 ಅಕ್ಟೋಬರ್ 2022

'ಸುಧರ್ಮಾ' ಸಂಸ್ಕೃತ ಪತ್ರಿಕೆ ಆರಂಭಿಸಿ ಮುನ್ನಡೆಸಿದ

ಪಂಡಿತ ಕೆ.ಎನ್.ವರದರಾಜ ಅಯ್ಯಂಗಾರ್ ಪ್ರಾತಃಸ್ಮರಣೀಯರು

ಸಂಭಾಷಣಾ ಸಂದೇಶ ಸಂಸ್ಕೃತ ಪತ್ರಿಕೆ ಸಂಪಾದಕ ಡಾ.ಜನಾರ್ಧನ ಹೆಗಡೆ ಸ್ಮರಣೆ

ಮೈಸೂರು, ಅ.16(ಪಿಎಂ)– 'ಸುಧರ್ಮಾ' ಸಂಸ್ಕೃತ ಪತ್ರಿಕೆ ಆರಂಭಿಸಿದ ಪಂಡಿತ ಕೆ.ಎನ್.ವರದರಾಜ ಅಯ್ಯಂಗಾರ್, ಪತ್ರಿಕೆಯನ್ನು ಮುನ್ನಡೆಸಿದ ಪರಿ ದೊಡ್ಡ ಸಾಹಸವೇ ಸರಿ. ಅವರು ನಿಜಕ್ಕೂ ಪ್ರಾತಃಸ್ಮರಣೀಯರು ಎಂದು 'ಸಂಭಾಷಣಾ ಸಂದೇಶ' ಸಂಸ್ಕೃತ ಮಾಸ ಪತ್ರಿಕೆ ಸಂಪಾದಕ ಡಾ.ಜನಾರ್ಧನ ಹೆಗಡೆ ಸ್ಮರಿಸಿದರು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸುಧರ್ಮಾ ಸಂಸ್ಕೃತ ಪತ್ರಿಕೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸುಧರ್ಮಾ ಸಂಸ್ಥಾಪಕ ಪಂಡಿತ ಕಳಲೆ ನಡಾದೂರ್ ವರದರಾಜ ಅಯ್ಯಂಗಾರ್ ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಸಂಸ್ಕೃತದಲ್ಲಿ ಮುಖ್ಯ ಭಾಷಣ ಮಾಡಿದರು.

ಯಾವುದೇ ಪತ್ರಿಕೆ ಉಳಿದು ಮುನ್ನಡೆಯಲು ಸಂಪಾದನಾ ಮತ್ತು ಪ್ರಸರಣ ವಿಭಾಗಗಳು ಮುಖ್ಯ ಪಾತ್ರ ವಹಿಸುತ್ತವೆ. ಸುಧರ್ಮಾ ಸಂಸ್ಥಾಪಕ ವರದರಾಜ ಅಯ್ಯಂಗಾರ್ ಈ ಎರಡೂ ವಿಭಾಗಗಳನ್ನು ನಿಭಾಯಿಸುವಲ್ಲಿ ಅಪಾರ ಪರಿಶ್ರಮ ವಹಿಸಿದ್ದರು. ಅವರ ಈ ಕಠಿಣ ಪರಿಶ್ರಮ ಆ ಕಾಲಕ್ಕೆ ದೊಡ್ಡ ಸಾಹಸವೇ ಸರಿ. ತಾವೊಬ್ಬರೇ ಈ ಎರಡೂ ವಿಭಾಗಗಳ ನಿರ್ವಹಣೆ ಮಾಡುತ್ತಿದ್ದರು. ಹಾಗಾಗಿ ಅವರು ನಮಗೆಲ್ಲಾ ಪ್ರಾತಃಸ್ಮರಣೀಯರು ಎಂದರು.


ಪತ್ರಿಕೆಗೆ ವಿಷಯ ಸಂಗ್ರಹ ತುಂಬ ಕಷ್ಟದ ಕೆಲಸ. ಅಂದೇ ಅವರು ಸುಧರ್ಮಾಕ್ಕೆ ವಿಷಯ ಸಂಗ್ರಹದಲ್ಲಿ ತಮ್ಮ ಕೌಶಲ್ಯ ಮೆರೆದಿದ್ದರು. ಚಂದಾದಾರರಿಂದ ಮಾತ್ರವೇ ಪತ್ರಿಕೆ ಬದುಕುಳಿಯಲು ಕಷ್ಟಸಾಧ್ಯ. ಹಾಗಾಗಿ ವಿಶೇಷಾಂಕ ಪ್ರಕಟಿಸಿ, ಅವುಗಳಿಗೆ ಜಾಹೀರಾತು ಸಂಗ್ರಹಿಸಿ ಪತ್ರಿಕೆ ಮುನ್ನಡೆಸಿದರು. ಅವರು ತಮ್ಮ ಹಾದಿಯಲ್ಲಿ ಸಾಕಷ್ಟು ಹಾನಿಯನ್ನು ಅನುಭವಿಸಿದರೂ ಧೃತಿಗೆಡದೇ ಪತ್ರಿಕೆ ಹೊರತಂದರು ಎಂದು ಹೇಳಿದರು.

ಸುಧರ್ಮಾ ಬೆಳೆಸುವಲ್ಲಿ ಅವರ ಪ್ರಯತ್ನ ಆದರ್ಶನೀಯ. ಇಂದು ಪತ್ರಿಕೆ ಪ್ರಕಟಿಸುವ ವಿಧಾನ ಸರಳವಾಗಿದೆ. ಆದರೆ 50 ವರ್ಷಗಳ ಹಿಂದೆ ಇಂದಿನಂತಹ ತಂತ್ರಜ್ಞಾನದ ಸೌಲಭ್ಯ ಇಲ್ಲವಾದರೂ ಉತ್ತಮ ವ್ಯವಸ್ಥೆ ಅಳವಡಿಸಿಕೊಂಡು ಪತ್ರಿಕೆ ಹೊರತರುತ್ತಿದ್ದರು. ಪ್ರಸ್ತುತ ಬೇರೆ ಸಂಸ್ಕೃತ ದಿನ ಪತ್ರಿಕೆಗಳು ಇದ್ದರೂ ವ್ಯವಸ್ಥಿತ ದಿನಪತ್ರಿಕೆಯಾಗಿ ಹೊರಬರುತ್ತಿರುವ ಪತ್ರಿಕೆ, ಇಡೀ ದೇಶದಲ್ಲಿ ಸುಧರ್ಮಾ ಒಂದೇ ಎನ್ನಬಹುದು. ನಮ್ಮ ಸಂಭಾಷಣಾ ಸಂದೇಶ ಪತ್ರಿಕೆ ಲಕ್ಷಕ್ಕೂ ಹೆಚ್ಚು ವಾಚಕರನ್ನು ಇಡೀ ದೇಶದಲ್ಲಿ ಹೊಂದಿದೆ ಎಂದು ತಿಳಿಸಿದರು.

ಇದೇ ವೇಳೆ ಮಹಾರಾಷ್ಟ್ರ ಪುಣೆಯ ಶ್ರೀ ಶಾರದಾ ಪ್ರತಿಷ್ಠಾನಮ್‌ನ ಸಂಸ್ಥಾಪಕ ಪಂಡಿತ್ ವಸಂತ ಅನಂತ ಗಾಡ್ಗೀಳ್ ಅವರಿಗೆ 'ಪತ್ರಿಕಾ ಸೇವಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಲ್ಲದೆ, 'ವರದ ವೈಭವಮ್' ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಾಯಿತು. ವರದರಾಜ ಅಯ್ಯಂಗಾರ್ ಕುರಿತಂತೆ ಹಲವು ಸಂಸ್ಕೃತ ಲೇಖಕರು ಬರೆದಿರುವ ಲೇಖನಗಳನ್ನು ಇದು ಒಳಗೊಂಡಿದೆ. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಸೇರಿದಂತೆ ಮೂರೂ ಭಾಷೆಯ ಲೇಖನಗಳು ಗ್ರಂಥದಲ್ಲಿರುವುದು ವಿಶೇಷ.

ವಿದ್ವಾನ್ ಶಿಂಗಪ್ಪ ಅವರ 'ಆಶ್ವಲಾಯನ ಗೃಹ್ಯ ಸೂತ್ರ', ಡಾ.ವಿಶ್ವಾಸ್ ಅವರ 'ಮಹಾ ಭಾರತಾಂತರ್ಗತಾಃ ಕಾಶ್ಚನ ಉಪಕಥಾಃ' ಮತ್ತು ವಿದ್ವಾನ್ ಶ್ರೀ ವತ್ಸಾಚಾರ್ಯ ಅವರ 'ಸ್ವಾತಂತ್ರ್ಯ ವೀರಾಃ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಈ ಮೂರು ಕೃತಿಗಳನ್ನು ಸುಧರ್ಮಾ ಪ್ರಕಾಶನದಿಂದ ಹೊರತರಲಾಗಿದೆ.

ಇಡೀ ಕಾರ್ಯಕ್ರಮ ಸಂಸ್ಕೃತದಲ್ಲೇ ನಡೆದಿದ್ದು ವಿಶೇಷವಾಗಿತ್ತು. ಇದೇ ವೇಳೆ 'ಸುಧರ್ಮಾ ನಡೆದು ಬಂದ ದಾರಿ' ಶೀರ್ಷಿಕೆಯಡಿ ಛಾಯಾಚಿತ್ರ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾನಿಲಯ ಕುಲಪತಿ ಡಾ.ಗಿರೀಶ್ ಚಂದ್ರ, ಸುಧರ್ಮಾದ ಗೌರವ ಸಂಪಾದಕರಾದ ವಿದ್ವಾನ್ ಡಾ.ಹೆಚ್.ವಿ. ನಾಗರಾಜರಾವ್, ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ, ಸಂಪಾದಕಿ ಕೆ.ಎಸ್.ಜಯಲಕ್ಷ್ಮೀ, ಅಖಿಲ ಭಾರತ ಪ್ರಶಿಕ್ಷಣ ಪ್ರಮುಖ ಡಾ.ಹೆಚ್.ಆರ್.ವಿಶ್ವಾಸ್ ಮತ್ತಿತರು ಹಾಜರಿದ್ದರು.



ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಭಾನುವಾರ ಸುಧರ್ಮಾ ಸಂಸ್ಥಾಪಕ ಪಂಡಿತ ಕಳಲೆ ನಡಾದೂರ್ ವರದರಾಜ ಅಯ್ಯಂಗಾರ್ ಅವರ ಜನ್ಮಶತಮಾನೋತ್ಸವದಲ್ಲಿ 'ವರದ ವೈಭವಮ್' ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಾಯಿತು.



ಚಂಡೀಗಢದಲ್ಲಿ ನಡೆದ ಇಂಟರ್ ಡಿಸಿಪ್ಲಿನರಿ ರಿಸರ್ಚ್(ಐಆರ್‌ಎಸ್‌ಡಿ) ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹ ಪ್ರಾಧ್ಯಾಪಕ ಡಾ.ಎಸ್.ಎ.ಮೋಹನ್ ಕೃಷ್ಣ ಅವರು ಗ್ರೀನ್ ಥಿಂಕರ್ಸ್‌ಗ್ರೂಪ್ ಸಂಸ್ಥೆ ಆಸ್ಟ್ರೇಲಿಯಾದ ವೆಸ್ಟರ್ನ್ ಸಿಡ್ನಿ ವಿಶ್ವವಿದ್ಯಾಲಯ, ಯುನೈಟೆಡ್ ಕಿಂಗ್‌ಡಂನ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯ, ಸೆಂಟರ್ ಫಾರ್ ಸ್ಮಾರ್ಟ್ ಮಾಡರ್ನ್ ಕನ್‌ಸ್ಟ್ರಕ್ಷನ್ ಮತ್ತು ಐಐಟಿ ಬಾಂಬೆ ಸಹಯೋಗದಲ್ಲಿ ಕೊಡಮಾಡಿದ ವಿಶೇಷ ಪ್ರಶಸ್ತಿಗೆ ಪಾತ್ರರಾದರು. ಗ್ರೀನ್ ಥಿಂಕರ್ಸ್‌ಗ್ರೂಪ್ ಅಧ್ಯಕ್ಷ ಡಾ.ತನ್ವೀರ್ ಸಿಂಗ್, ಹಿರಿಯ ಸಲಹೆಗಾರ ಡಾ ಸಾವತಂತರ್ ಸಿಂಗ್ ಖುರ್ಮಿ, ಐಐಟಿ ಬಾಂಬೆಯ ರಾಷ್ಟ್ರೀಯ ಸಂಯೋಜಕಿ ಆಕಾಂಕ್ಷಾ ಸೈನಿ, ಭಾರತ ಸರ್ಕಾರದ ನವೋದಯ ವಿದ್ಯಾಲಯ ಸಮಿತಿಯ ಎಂಓಇ ಡಾ.ಅಮಿತ್ ಕುಮಾರ್ ಅವರು ಮೋಹನ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಅರೆಕಾಲಿಕ ಕೆಲಸ ಕೊಡಿಸುವುದಾಗಿ 80 ಸಾವಿರ ವಂಚನೆ

ಮೈಸೂರು, ಅ.16– ಆನ್‌ಲೈನ್‌ನಲ್ಲಿ ಅರೆಕಾಲಿಕ ಕೆಲಸ ಕೊಡಿಸುವುದಾಗಿ ಮಹಿಳೆಯನ್ನು ನಂಬಿಸಿ 80 ಸಾವಿರ ರೂ. ವಂಚಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ. ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ವೀರನಗೆರೆಯ ಮಹಿಳೆಯೊಬ್ಬರ ಮೊಬೈಲ್‌ಗೆ ಲಿಂಕ್‌ವೊಂದನ್ನು ಕಳುಹಿಸಿದ ವಂಚಕರು, ಅರೆಕಾಲಿಕ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾರೆ. ಇದಕ್ಕಾಗಿ ನಾವು ಕಳುಹಿಸಿರುವ ಲಿಂಕ್ ಕ್ಲಿಕ್ ಮಾಡಿ, ಸೂಚನೆಗಳನ್ನು ಪಾಲಿಸುವಂತೆ ಹೇಳಿದ್ದಾರೆ. ನಂತರ ವಿವಿಧ ಹಂತಗಳಲ್ಲಿ ಒಟ್ಟು 80 ಸಾವಿರ ರೂ. ಹಣ ಪಡೆದು ವಂಚಿಸಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಹಕರ ಸೋಗಿನಲ್ಲಿ ಆಭರಣ ಮಳಿಗೆಯಲ್ಲಿ ಚಿನ್ನ ಕದ್ದ ಮಹಿಳೆಯರು

ಮೈಸೂರು, ಅ.16– ಮಹಿಳೆಯರಿಬ್ಬರು ಗ್ರಾಹಕರ ಸೋಗಿನಲ್ಲಿ ಆಭರಣ ಮಳಿಗೆಯಿಂದ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕದ್ದೊಯ್ದಿರುವುದಾಗಿ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ದೇವರಾಜ ಅರಸು ರಸ್ತೆಯ ಸುರಾನಾ ಆಭರಣ ಮಳಿಗೆಗೆ ಶುಕ್ರವಾರ ಸಂಜೆ 6.30ರ ಸುಮಾರಿಗೆ ತೆರಳಿದ್ದ ಇಬ್ಬರು ಮಹಿಳೆಯರು ಗ್ರಾಹಕರಂತೆ ಚಿನ್ನಾಭರಣಗಳನ್ನು ವೀಕ್ಷಿಸಿದ್ದಾರೆ. ಈ ವೇಳೆ 17 ಗ್ರಾಂ ತೂಕದ ಸುಮಾರು 1.80 ಲಕ್ಷ ರೂ. ಮೌಲ್ಯದ ಒಂದು ಜೊತೆ ಕಿವಿ ಓಲೆ ಕದ್ದೊಯ್ದಿದ್ದಾರೆ ಎಂದು ಆಭರಣದಂಗಡಿ ಮಾಲೀಕರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳಿಯರ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಸ್ವಿಟ್ಜರ್ಲೆಂಡ್‌ನಲ್ಲಿ ಬುರ್ಖಾ ನಿಷೇಧ

ಬರ್ನ್, ಅ.16– ಸ್ವಿಟ್ಜರ್ಲೆಂಡ್‌ನಲ್ಲಿ ಬುರ್ಖಾ ನಿಷೇಧ ಜಾರಿಗೆ ತರಲಾಗಿದ್ದು, ನಿಯಮ ಉಲ್ಲಂಘಿಸಿದರೆ ಭಾರಿ ದಂಡ ವಿಧಿಸುವುದಾಗಿ ಅಲ್ಲಿನ ಸರ್ಕಾರ ಎಚ್ಚರಿಕೆ ನೀಡಿದೆ.

ಸ್ವಿಟ್ಜರ್ಲೆಂಡ್‌ನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಬುರ್ಖಾ ಧರಿಸುವುದನ್ನು ನಿಷೇಧಿಸಲಾಗಿದ್ದು, ನಿಯಮ ಉಲ್ಲಂಘಿಸಿದರೆ 1 ಸಾವಿರ ಡಾಲರ್ ದಂಡ ತೆರಬೇಕಾಗಿದೆ. ಈ ಸಂಬಂಧ ದಂಡ ವಿಧಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆ.

ಹಿಜಾಬ್ ವಿರೋಧಿಸಿ ಇರಾನ್‌ನಲ್ಲಿ ಭಾರೀ ಪ್ರತಿಭಟನೆ ನಡೆಯುತ್ತಿರುವ ನಡುವೆಯೇ ಸ್ವಿಟ್ಜರ್ಲೆಂಡ್ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಸ್ವಿಟ್ಜರ್ಲೆಂಡ್ ಬುರ್ಖಾ ನಿಷೇಧ ಹಾಗೂ ಉಲ್ಲಂಘನೆಗೆ 1 ಸಾವಿರ ಡಾಲರ್ ದಂಡ ವಿಧಿಸುವ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಕ್ಟೋಬರ್ 12 ರಂದು ಸಂಸತ್ತಿನಲ್ಲಿ ಈ ಮಸೂದೆ ಮಂಡಿಸಲಾಗಿದೆ. ಕಳೆದ ವರ್ಷ ಜನಾಭಿಪ್ರಾಯ ಸಂಗ್ರಹಿಸಿದ ಬಳಿಕ ಸುರಕ್ಷತೆ ಕಾರಣ ನೀಡಿ ಮುಖ ಮುಚ್ಚುವ ವಸ್ತ್ರಗಳನ್ನು ನಿಷೇಧಿಸಲಾಗಿತ್ತು. ಇದೀಗ ಈ ನಿಯಮ ಉಲ್ಲಂಘಿಸಿದರೆ ಭಾರೀ ದಂಡ ವಿಧಿಸುವ ಪ್ರಸ್ತಾವನೆ ಮಂಡಿಸಲಾಗಿದೆ.

ರಾಜ್ಯೋತ್ಸವ ಪ್ರಯುಕ್ತ ಅ.28ಕ್ಕೆ 'ಕೋಟಿ ಕಂಠ ಗಾಯನ'

ಮೈಸೂರು, ಅ.16(ಜಿಎ)– ಈ ಬಾರಿಯ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ 'ಮಾತಾಡ್ ಮಾತಾಡು ಕನ್ನಡ' ಘೋಷವಾಕ್ಯದೊಂದಿಗೆ 'ಕೋಟಿ ಕಂಠ ಗಾಯನ' ಕಾರ್ಯಕ್ರಮದ ಮೂಲಕ ರಾಜ್ಯಾದ್ಯಂತ ಆಯ್ದ ಕನ್ನಡ ಗೀತೆಗಳು ಮೊಳಗಲಿವೆ.

ನವೆಂಬರ್ 1 ರಂದು 67ನೇ ಕರ್ನಾಟಕ ರಾಜ್ಯೋತ್ಸವವನ್ನು ನಾಡಿನಾದ್ಯಂತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅತ್ಯಂತ ವಿಶಿಷ್ಟವಾಗಿ ಆಚರಿಸಲು ಉದ್ದೇಶಿಸಲಾಗಿದ್ದು, 'ಕೋಟಿ ಕಂಠ ಗಾಯನ' ಕಾರ್ಯಕ್ರಮದ ಮೂಲಕ ರಾಜ್ಯಾದ್ಯಂತ ಆಯ್ದ ಕನ್ನಡ ಗೀತೆಗಳನ್ನು ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜು ಹಾಗೂ ಕರ್ನಾಟಕದ ಪ್ರಮುಖ ಸ್ಥಳಗಳು ಸೇರಿದಂತೆ 10 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಅ.28ರ ಬೆಳಗ್ಗೆ 11 ಗಂಟೆಗೆ ಕನ್ನಡ ಗಾಯನ ಮೊಳಗಿಸಲು ನಿರ್ಧರಿಸಿದೆ.

ಕಳೆದ ವರ್ಷ 66ನೇ ಕರ್ನಾಟಕ ರಾಜ್ಯೋತ್ಸವವನ್ನು ವಿನೂತನವಾಗಿ ಆಚರಿಸಲಾಯಿತು. ನಾಡಿನಾದ್ಯಂತ ನಾಲ್ಕು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ 22 ಲಕ್ಷಕ್ಕೂ ಹೆಚ್ಚು ಜನರು ಒಂದೇ ಸಮಯದಲ್ಲಿ ಏಕ ಕಂಠದಲ್ಲಿ ನಾಡಗೀತೆ ಸೇರಿದಂತೆ ಆಯ್ದ ಕನ್ನಡ ಗೀತೆಗಳನ್ನು ಮೂಲಕ ಹಾಡುವ ಕನ್ನಡಾಭಿಮಾನವನ್ನು ಮೆರೆಸಿದರು.

'ಮಾತಾಡ್ ಮಾತಾಡು ಕನ್ನಡ' ಎನ್ನುವ ಘೋಷವಾಕ್ಯದೊಂದಿಗೆ ನಡೆದ ಈ 'ಲಕ್ಷ ಕಂಠ ಗಾಯನ'ವು ಒಂದು ಇತಿಹಾಸವನ್ನೇ ಸೃಷ್ಟಿಸಿತ್ತು. ಈ ಬಾರಿಯೂ ಇನ್ನೂ ಹೆಚ್ಚಿನ ಸಂಭ್ರಮ, ಉತ್ಸಾಹಗಳಿಂದ ನಾಡಿನಾದ್ಯಂತ ಆಚರಿಸುವ ಹಿನ್ನೆಲೆಯಲ್ಲಿ 'ಕೋಟಿ ಕಂಠ ಗಾಯನ'ವನ್ನು ಆಯೋಜಿಸಲಾಗಿದೆ.

ಬೃಹತ್ ವೃಂದಗಳಲ್ಲಿ ಆಯ್ದ ಆರು ಕನ್ನಡ ಗೀತೆಗಳನ್ನು ಒಂದು ಕೋಟಿಗೂ ಹೆಚ್ಚು ಜನ ಏಕ ಕಂಠದಲ್ಲಿ ಹಾಡಿ ಐತಿಹಾಸಿಕ ದಾಖಲೆ ಬರೆಯುವುದರ ಮೂಲಕ ಈ ಬಾರಿಯ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುವ ಸಂಕಲ್ಪ ಮಾಡಲಾಗಿದೆ.

ಈ ಬಾರಿಯ 6 ಗೀತೆಗಳು : ರಾಷ್ಟ್ರಕವಿ ಕುವೆಂಪು ರಚಿಸಿರುವ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ' ಮತ್ತು 'ಬಾರಿಸು ಕನ್ನಡ ಡಿಂಡಿಮವ', ಹುಯಿಲಗೋಳ ನಾರಾಯಣ ರಾಯರು ರಚಿಸಿರುವ ' ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು', ಡಾ.ಡಿ.ಎಸ್. ಕರ್ಕಿ ರಚಿಸಿರುವ 'ಹಚ್ಚೇವು ಕನ್ನಡದ ದೀಪ', ಚನ್ನವೀರ ಕಣವಿ ರಚಿಸಿರುವ 'ವಿಶ್ವ ವಿನೂತನ ವಿದ್ಯಾ ಚೇತನ' ಹಾಗೂ ಹಂಸಲೇಖ ರಚನೆಯ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು.. ಎಂಬ ಆರು ಗೀತೆಗಳು ಈ ಬಾರಿಯ ಕೋಟಿ ಕಂಠ ಗಾಯನ ಕಾರ್ಯಕ್ರಮಕ್ಕೆ ಆಯ್ಕೆ ಮಾಡಲಾಗಿದೆ.

ಸಲಹೆ ಮತ್ತು ಅವಕಾಶಕ್ಕಾಗಿ : ಈ ಕೋಟಿ ಕಂಠ ಗಾಯನದ ಯಶಸ್ಸಿಗೆ ನಿಮ್ಮ ವಿನೂತನ ಸಲಹೆ / ಯೋಚನೆಗಳು, ನೋಂದಣಿ ವಿವರಗಳು ಹಾಗೂ ಇತರ ತಾಂತ್ರಿಕ ಸಹಾಯಕ್ಕಾಗಿ ಕೇಂದ್ರ ಕಚೇರಿಯ ಸಹಾಯವಾಣಿಗಳನ್ನು ಸಂಪರ್ಕಿಸಿ : 9900534569, 9916832044, 9986837037, 9880442804 ಹಾಗೂ ಇಮೇಲ್: kanbhavblr@gmail.com kanajacoordinator@gmail.com ಗಾಯನದ ಉಪಯುಕ್ತ ನಾಡಿನಾದ್ಯಂತ ನಡೆಯುವ ಕೋಟಿ ಕಂಠ ಗಾಯನ ಅಭಿಯಾನದಲ್ಲಿ ಪಾಲ್ಗೊಳ್ಳಲು, ಸಹಭಾಗಿಗಳಾಗಲು ಮತ್ತು ನೀವೇ ಸಮೂಹ ಗಾಯನ ಆಯೋಜಿಸಲು ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಜಂಟಿ ನಿರ್ದೇಶಕರು (ಮೈಸೂರು ವಲಯ)– 99166–00027, 0821–2513225, ಅಶೋಕ್ ಎನ್ ಚಲವಾದಿ ಜಂಟಿ ನಿರ್ದೇಶಕ (ಬೆಂಗಳೂರು ವಲಯ)– 99003–37738 080–22212582, ಕೆ.ಎಚ್.ಚೆನ್ನೂರ್ ಜಂಟಿ ನಿರ್ದೇಶಕರು (ಕಲಬುರಗಿ ವಲಯ)– 94484–36877, 08472–227734, ಬಸವರಾಜ ಹೂಗಾರ ಜಂಟಿ ನಿರ್ದೇಶಕರು (ಬೆಳಗಾವಿ ವಲಯ)–94801–97511 0831–2474649 ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ



ರಾಜ್ಯೋತ್ಸವದ ಅಂಗವಾಗಿ 2021ರ ಅಕ್ಟೋಬರ್ 28ರಂದು ಓವೆಲ್ ಮೈದಾನದಲ್ಲಿ ಲಕ್ಷಕಂಠ ಗಾಯನ ನಡೆದಿತ್ತು

ಹೆಬ್ಬಾಳು ಕೆರೆ ಕೋಡಿ ಹರಿಯುವ ನಾಲೆ ಒಡೆದು ಜಮೀನು ಜಲಾವೃತ



ಮೈಸೂರು, ಅ.16(ಎಸ್‌ಬಿಡಿ)– ಮೈಸೂರಿನಲ್ಲಿ ನಿರಂತರ ಮಳೆಯಿಂದಾಗಿ ಕೆರೆ ನೀರು ಹರಿಯುವ ನಾಲೆಯ ಏರಿ ಒಡೆದು ಜಮೀನು ಜಲಾವೃತವಾಗಿದೆ.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಹೆಬ್ಬಾಳು ಕೆರೆಯ ಕೋಡಿ ನೀರು ಹರಿಯಲು ನಾಲೆ ನಿರ್ಮಿಸಲಾಗಿದೆ. 2–3 ದಿನಗಳಿಂದ ನಿರಂತರವಾಗಿ ಧಾರಾಕಾರ ಮಳೆ ಸುರಿಯುತ್ತಿರುವ ಪರಿಣಾಮ ಕೆರೆ ತುಂಬಿ ಕೋಡಿ ನೀರಿನ ಪ್ರಮಾಣವೂ ಹೆಚ್ಚಾಗಿದೆ. ಇದರಿಂದ ನಾಲೆಯಲ್ಲಿ ನೀರಿನ ಒತ್ತಡ ಹೆಚ್ಚಾದ ಒಂದು ಕಡೆ ಏರಿ ಒಡೆದು ಅಪಾರ ಪ್ರಮಾಣದ ನೀರು ಸಮೀಪದ ಕೃಷಿ ಪ್ರದೇಶಕ್ಕೆ ನುಗ್ಗಿದೆ. ಇದರಿಂದ ತೆಂಗಿನತೋಟ ಇನ್ನಿತರ ಬೆಳೆಗೆ ಹಾನಿಯಾಗಿದೆ.

ಮತ್ತಷ್ಟು ಹಾನಿ ಆತಂಕ: ಮಳೆ ಮುಂದುವರೆದರೆ ಕೆರೆಯ ಹೊರಹರಿವು ನೀರಿನ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ. ಒಡೆದಿರುವ ಏರಿಯನ್ನು ತಕ್ಷಣಕ್ಕೆ ಸರಿಪಡಿಸದಿದ್ದರೆ ಮತ್ತಷ್ಟು ಸಮಸ್ಯೆ ಉಂಟಾಗಲಿದೆ. ಏರಿ ಮತ್ತಷ್ಟು ಒಡೆದು ಅಪಾರ ಪ್ರಮಾಣದ ಬೆಳೆ ಹಾನಿಯಾಗುವ ಸಾಧ್ಯತೆ ಇದೆ. ಒಡೆದ ಭಾಗವನ್ನು ಸರಿಪಡಿಸುವುದರ ಜೊತೆಗೆ ನಾಲೆಯುದ್ದಕ್ಕೂ ಏರಿಯ ಸ್ಥಿತಿಗತಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಕೆರೆ ಸಂರಕ್ಷಣೆಯೂ ತುರ್ತು: ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ ಅವರು ಹೆಬ್ಬಾಳು ಕೆರೆಯನ್ನು ಪುನರುಜ್ಜೀವನಗೊಳಿಸಿದ್ದರು. ಪರಿಣಾಮ ಸುಂದರ ತಾಣದಂತೆ ಕಂಗೊಳಿಸುತ್ತಿದ್ದ ಕೆರೆ, ವ್ಯವಸ್ಥೆಯ ವೈಫಲ್ಯದಿಂದ ಮತ್ತೆ ಆಘಾತ ಅನುಭವಿಸುತ್ತಿದೆ. ವಿಜಯನಗರ, ಮಂಚೇಗೌಡನ ಕೊಪ್ಪಲು ಹಾಗೂ ಹೆಬ್ಬಾಳು ಮೂಲಕ ಹಾದು ಹೋಗುವ ಬೃಹತ್ ಮಳೆ ನೀರು ಚರಂಡಿ ಮೂಲಕ ಅಪಾರ ಪ್ರಮಾಣದ ಪ್ಲಾಸ್ಟಿಕ್ ಇನ್ನಿತರ ತ್ಯಾಜ್ಯ ಕೆರೆಯ ಒಡಲು ಸೇರುತ್ತದೆ. ಈ ಬಗ್ಗೆ ಹಲವು ಬಾರಿ ನಗರ ಪಾಲಿಕೆ ಗಮನಕ್ಕೆ ತಂದರೂ ಕೆರೆ ಸಂರಕ್ಷಣೆ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಮನೆಗಳಿಗೆ ಮಳೆನೀರು: ನಿರಂತರ ಮಳೆಯಿಂದ ಮೈಸೂರಿನಲ್ಲಿ ತಗ್ಗು ಪ್ರದೇಶದ ಹಲವು ಮನೆಗಳಿಗೆ ಶನಿವಾರ ರಾತ್ರಿ ನೀರು ನುಗ್ಗಿ ನಿವಾಸಿಗಳು ತೊಂದರೆ ಅನುಭವಿಸಿದರು. ಸಯ್ಯಾಜಿರಾವ್ ರಸ್ತೆ ಬಂಬೂಬಜಾರ್, ಬನ್ನಿಮಂಟಪ ಜೋಡಿ ತೆಂಗಿನಮರ ಸ್ಮಶಾನ ರಸ್ತೆ ಕಾಂಪ್ಲೆಕ್ಸ್ ಬಳಿ, ಬನ್ನಿಮಂಟಪದಿಂದ ಕರಕುಶಲನಗರ ಹಾಗೂ ರಿಂಗ್‌ರೋಡ್ ಸಂಪರ್ಕಿಸುವ ರಸ್ತೆಗಳಲ್ಲಿರುವ ರೈಲ್ವೆ ಅಂಡರ್ ಬ್ರಿಡ್ಜ್‌ನಲ್ಲಿ ಮಳೆ ಬಂದಾಗಲೆಲ್ಲಾ ಕೆರೆಯಂತೆ ನೀರು ನಿಲ್ಲುವುದು ಇನ್ನೂ ತಪ್ಪಿಲ್ಲ. ಒಂದಿಲ್ಲೊಂದು ನೆಪದಿಂದ ವರ್ಷಗಳಿಂದಿರುವ ರಸ್ತೆ ಗುಂಡಿಗಳು ಮಳೆಯಿಂದ ಮತ್ತಷ್ಟು ವಿಸ್ತಾರಗೊಂಡು ವಾಹನ ಸವಾರರಿಗೆ ಕಂಟಕಪ್ರಾಯವಾಗುತ್ತಿವೆ.

ಹಾಸನದ ಅರಸೀಕೆರೆ ಬಳಿ ಭೀಕರ ಅಪಘಾತ: ಮೃತರ ಕುಟುಂಬಸ್ಥರಿಗೆ ತಲಾ 2 ಲಕ್ಷ ರೂ. ಪರಿಹಾರ



ಬೆಂಗಳೂರು, ಅ.16– ಧರ್ಮಸ್ಥಳ ಮಂಜುನಾಥ, ಕುಕ್ಕೆ ಸುಬ್ರಹ್ಮಣ್ಯ ದೇಗುಲ ಬಳಿಕ ಹಾಸನಾಂಬೆಯ ದರ್ಶನ ಮಾಡಿ ತಮ್ಮೂರು ಹಾಸನದ ಅರಸೀಕೆರೆಯ ಬಾಣಾವರಕ್ಕೆ ಖುಷಿಯಿಂದ ಇನ್ನೇನು ತಲುಪಬೇಕೆನ್ನುವಷ್ಟರಲ್ಲಿ ಜವರಾಯನ ಕರೆಗೆ ಓಗೊಟ್ಟು ಕಳೆದ ತಡರಾತ್ರಿ ಮೃತಪಟ್ಟ 9 ಮಂದಿಯ ಕುಟುಂಬಸ್ಥರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಲಾ 2 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೃತರ ಕುಟುಂಬಸ್ಥರಿಗೆ ತಲಾ 2 ಲಕ್ಷ ಹಾಗೂ ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡಲು ಆದೇಶ ನೀಡಲಾಗಿದೆ, ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ, ಅಲ್ಲಿನ ಎಸ್ಪಿ ಜೊತೆ ಮಾತನಾಡಿದ್ದೇನೆ ಎಂದರು. ಮೃತರ ಮರಣೋತ್ತರ ಪರೀಕ್ಷೆ ಇಂದು ಬೆಳಗ್ಗೆ ನೆರವೇರಿ ಈಗ ಸ್ವಗ್ರಾಮಕ್ಕೆ ತಲುಪಿದ್ದು ಅಲ್ಲಿ ಕುಟುಂಬಸ್ಥರು, ಬಂಧುಗಳ ಆಕ್ರಂದನ ಮುಗಿಲುಮುಟ್ಟಿದೆ. ಸಾಲಾಪುರ, ದೊಡ್ಡೇನಹಳ್ಳಿ ಮತ್ತು ಬಾಣಾವರ ಅವರವರ ಊರುಗಳಲ್ಲಿ ಅಂತ್ಯಕ್ರಿಯೆ ನಡೆಯಲಿದೆ.


ಕೋಟೆಹುಂಡಿಯಲ್ಲಿ ಮಳೆಗೆ ಕುಸಿದ ಮನೆ



ಮೈಸೂರು: ನಿರಂತರ ಮಳೆಯಿಂದಾಗಿ ಮನೆಯೊಂದು ಕುಸಿದು ಬಿದ್ದಿರುವ ಘಟನೆ ಮೈಸೂರು ತಾಲೂಕು ಜಯಪುರ ಹೋಬಳಿ ಕೋಟೆಹುಂಡಿಯಲ್ಲಿ ಶನಿವಾರ ರಾತ್ರಿ ನಡೆದಿದೆ.

ಎರಡು ದಿನಗಳಿಂದ ಸುರಿದ ಭಾರೀ ಮಳೆಯಿಂದ ಮನೆಯೊಂದು ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಸಾವು ನೋವು ಸಂಭವಿಸಿಲ್ಲ. ವಿಷಯ ತಿಳಿದು ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ರಾಜ್ಯಾಧ್ಯಕ್ಷ ಬಿ.ಶಿವಣ್ಣ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಹರೀಶ್ ಗೌಡ, ಕೆ.ಆರ್.ನಗರ ತಾಲೂಕು ಅಧ್ಯಕ್ಷ ಕೃಷ್ಣಮೂರ್ತಿ ಸ್ಥಳಕ್ಕೆ ಭೇಟಿ ನೀಡಿ, ನೊಂದವರಿಗೆ ಸಾಂತ್ವನ ಹೇಳಿದರಲ್ಲದೆ ಸರ್ಕಾರದಿಂದ ಪರಿಹಾರ ಕೊಡಿಸಲು ಸಹಕರಿಸುವುದಾಗಿ ಭರವಸೆ ನೀಡಿದರು.

ಚಾಮುಂಡಿಬೆಟ್ಟದಿಂದ ಧುಮ್ಮಿಕ್ಕುತ್ತಿರುವ ನೀರು



ಮೈಸೂರು: ಮೈಸೂರಿನ ಚಾಮುಂಡಿ ಬೆಟ್ಟದಿಂದ ನೀರು ಧುಮ್ಮಿಕ್ಕಿ ರಸ್ತೆ ಬದಿಯಲ್ಲಿ ಹರಿಯುತ್ತಿದ್ದು, ನಿಸರ್ಗದ ಸೊಬಗನ್ನು ಇಮ್ಮಡಿಗೊಳಿಸಿದೆ. ಭಾರೀ ಮಳೆ ಪರಿಣಾಮ ಚಾಮುಂಡಿಬೆಟ್ಟದಿಂದ ಉತ್ತನಹಳ್ಳಿ ರಸ್ತೆ ಕಡೆಗೆ ನೀರು ಧುಮ್ಮಿಕ್ಕುತ್ತಿದೆ. ಬಂಡೆಗಳ ಸಂದುಗಳಿಂದ ಹರಿದು ಬರುತ್ತಿರುವ ನೀರು ಜಲಪಾತಗಳಂತೆ ಕಾಣುತ್ತಿವೆ. ರಸ್ತೆ ಬದಿಯ ಸಿಮೆಂಟ್ ಕಟ್ಟೆಯ ಮೇಲೆ ಭಾರೀ ಪ್ರಮಾಣದ ನೀರು ಹರಿಯುತ್ತಿದೆ. ನಿನ್ನೆಗಿಂತ ನೀರಿನ ಪ್ರಮಾಣ ಹೆಚ್ಚಾಗಿದೆ. ಪರಿಣಾಮ ಹಲವು ಜಲಪಾತಗಳು ಹಾಗೂ ಸಾಕಷ್ಟು ಝರಿಗಳನ್ನು ಕಾಣಬಹುದಾಗಿದೆ. ದೇವಿಕೆರೆ ತುಂಬಿ ಹರಿಯುವುದರ ಜೊತೆಗೆ ಮಳೆ ನೀರು ಸೇರಿ ಉತ್ತನಹಳ್ಳಿ ಮಾರ್ಗದ ರಸ್ತೆಯಲ್ಲಿ ಜಲವೈಭವ ಸೃಷ್ಟಿಯಾಗಿದೆ ಎಂದು ಚಾಮುಂಡಿ ಬೆಟ್ಟದ ನಿವಾಸಿಯೊಬ್ಬರು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ತಂದೆ : ರಿಸಲ್ಟ್ ಏನಾಯಿತೋ?
ಮಗ : ಹೆಡ್ ಮಾಸ್ಟರ್ ಮಗನು ಫೇಲ್ ಆಗಿದ್ದಾನೆ.
ತಂದೆ : ನೀನು?
ಮಗ : ಡಾಕ್ಟರ್ ಮಗನೂ ಫೇಲ್
ತಂದೆ : ನಿನ್ನ ರಿಸಲ್ಟ್ ಏನಾಯಿತೋ
ಮಗ : ನೀನೇನು ಸೂಪರ್‌ಸ್ಟಾರ್ ರಜನಿಕಾಂತ್ ಅಂದುಕೊಂಡಿದ್ದೀಯ, ನಿನ್ನ ಮಗನು ಫೇಲ್!!!

ಮೈಸೂರು ಮಿತ್ರ

ಸೋಮವಾರ, 17 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಯಾರ ಸಹಾಯಕ್ಕೂ ಕಾದು ಕುಳಿತುಕೊಳ್ಳಬೇಡಿ. ಮಾನವ ಸಹಾಯಕ್ಕಿಂತಲೂ ಭಗವಂತನ ಸಹಾಯ ಅನಂತ ಪಾಲು ಮಿಗಿಲಲ್ಲವೇ?' – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಳೆ ನೀರಿಗೆ ದೊಣ್ಣೆ ನಾಯಕನ ಅಪ್ಪಣೆ ಬೇಕೇ?

ನಿಮ್ಮ ಪತ್ರಗಳು

ಕಿದ್ವಾಯಿ ಕೇಂದ್ರಕ್ಕೆ ಭೂಮಿ; ಹೊರವಲಯಕ್ಕೆ ಬದಲು ನಗರ ಮಿತಿಯಲ್ಲಿರಲಿ

ಮಾನ್ಯರೆ,

ಮೈಸೂರಿನಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರದ ಶಾಖೆ ಆರಂಭಿಸುವ ವಿಚಾರ ಸಂತಸ ತಂದಿದೆ. ಅ.14ರ 'ಮೈಸೂರು ಮಿತ್ರ' ಪತ್ರಿಕೆ ಸಂಚಿಕೆ ಪ್ರಕಾರ, ಸದರಿ ಶಾಖೆಗೆ ಇಲವಾಲ ಬಳಿ ನಿವೇಶನ ಮಂಜೂರು ಮಾಡಲಾಗುತ್ತಿದೆ.

ಇಲ್ಲಿ ನಿವೇಶನ ಕಲ್ಪಿಸಿದರೆ ಮೈಸೂರು ನಗರಕ್ಕೆ ಹೊರವಲಯವಾಗಲಿದೆ. ಈಗಾಗಲೇ ಸಂಸ್ಥೆಯ ಉಪಶಮನ ಆರೈಕೆ ಕೇಂದ್ರವು ಸಣ್ಣದಾಗಿ ಪಿಕೆಟಿಬಿ ಸ್ಯಾನಿಟೋರಿಯಂ ಆಸ್ಪತ್ರೆ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಆವರಣವು ಸಾಕಷ್ಟು ವಿಸ್ತಾರವಾಗಿರುವುದು ಮಾತ್ರವಲ್ಲದೆ, ನಗರದ ಪರಿಮಿತಿಯಲ್ಲಿದೆ. ಅಲ್ಲದೆ, ಈ ಆವರಣವು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೂ ಸಮೀಪವಾಗಲಿದೆ. ನನ್ನ ಅಭಿಪ್ರಾಯದಲ್ಲಿ ಉದ್ದೇಶಿತ ಕಿದ್ವಾಯಿ ಕೇಂದ್ರವನ್ನು ಇದೇ ಆವರಣದಲ್ಲಿ ಆರಂಭಿಸುವುದು ಸೂಕ್ತ.

ಈ ಕ್ರಮದಿಂದ ಎಲ್ಲಾ ಆರೋಗ್ಯ ಸಂಸ್ಥೆಗಳು ಸಮನ್ವಯದಿಂದ ರೋಗಿಗಳಿಗೆ ಸೇವೆ ನೀಡಲು ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಇಲವಾಲದ ನಿವೇಶನಕ್ಕೆ ಬದಲಾಗಿ ಪಿಕೆಟಿಬಿ ಸ್ಯಾನಿಟೋರಿಯಂ ಆವರಣದಲ್ಲಿ ಉದ್ದೇಶಿತ ಕಿದ್ವಾಯಿ ಕೇಂದ್ರಕ್ಕೆ ಭೂಮಿ ಮಂಜೂರು ಮಾಡಲು ಮೈಸೂರು ಜಿಲ್ಲಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳಲ್ಲಿ ಮನವಿ ಮಾಡುತ್ತೇನೆ. ಹಾಗಾಗಿ ಮರುಪರಿಶೀಲಿಸಿ ನಗರ ಪರಿಮಿತಿಯಲ್ಲಿ ಭೂಮಿ ನೀಡಬೇಕು. ಹೊರವಲಯದಲ್ಲಿ ಭೂಮಿ ನೀಡಿದರೆ ರೋಗಿಗಳು ಹಾಗೂ ಅವರ ಸಂಬಂಧಿಕರಿಗೆ ಅನಾನುಕೂಲವಾಗಲಿದೆ.

– ಚಾರ್ಲ್ಸ್ ಡೇವಿಸನ್, ವಿಜಯನಗರ, ಮೈಸೂರು

ಒಳ್ಳೆಯ ಐಡಿಯಾ ಅಲ್ಲ



ಮಾನ್ಯರೆ,

ಮೈಸೂರಿನ ಒಂಟಿಕೊಪ್ಪಲ್ 19ನೇ ವಾರ್ಡ್‌ನ ರಾಮಕೃಷ್ಣ ಆಶ್ರಮ ಒಂದು ಬದಿಯ ರಸ್ತೆಯಲ್ಲಿ ಕಸ ಸುರಿಯುವ ಬಳಿಯ ಕಾಂಪೌಂಡ್ ಮೇಲಿನ ಚಿತ್ರ ಕಲೆ ಸ್ವಾಗತಾರ್ಹವಾಗಿದೆ. ಆದರೆ, ಟೈರ್ ಮತ್ತು ಸಿಮೆಂಟ್ ಬಳಸಿ ನಿರ್ಮಾಣ ಮಾಡಿರುವ ಪ್ರಾಣಿಗಳ ಆಕೃತಿಯಿಂದ ಪಾದಚಾರಿಗಳು ಅಲ್ಲಿಯವರೆಗೂ ಫುಟ್‌ಪಾತ್ ಮೇಲೆ ನಡೆದುಕೊಂಡು ಬಂದು ನಂತರ ಈ ಸ್ಥಳದಲ್ಲಿ ಮತ್ತೆ ಮುಖ್ಯರಸ್ತೆಗೆ ಬರುವ ಪರಿಸ್ಥಿತಿ ಇದೆ. ಆದರೆ, ಈ ರಸ್ತೆಯಲ್ಲಿ ಸಾಮಾನ್ಯವಾಗಿ ಭಾರೀ ವಾಹನ ದಟ್ಟಣೆ ಇರುವುದರಿಂದ ಅವರ ಜೀವನಕ್ಕೆ ಅಪಾಯಕಾರಿಯಾಗಿದೆ.

–ಮೈಸೂರು ನಾಗರಿಕ

ಹಲೋ ಏಕೆ..., ವಂದೇ ಮಾತರಂ ಓಕೆ

ಮಾನ್ಯರೆ,

ಭಾರತ ದೇಶದಲ್ಲಿ ದೇಶಭಕ್ತಿ ಗೀತೆಗಳಲ್ಲಿ ರಾಷ್ಟ್ರಗೀತೆ ನಂತರದ ಸ್ಥಾನ 'ವಂದೇ ಮಾತರಂ' ಗೀತೆಗೆ ಸಲ್ಲುತ್ತದೆ. 1870 ರಲ್ಲಿ ಬಂಕಿಮ ಚಂದ್ರ ಚಟರ್ಜಿ ವಂದೇ ಮಾತರಂ ಗೀತೆಯನ್ನು ರಚಿಸಿದರು, 1882ರಲ್ಲಿ ಅವರ ಆನಂದ ಮಠ ಕೃತಿಯಲ್ಲಿ ಈ ಗೀತೆಯನ್ನು ಅಳವಡಿಸಲಾಯಿತು.

ಆ ಸಮಯದಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ಉತ್ತುಂಗದಲ್ಲಿತ್ತು. ಅಂದಿನ ಭಾರತವನ್ನು ಒಂದುಗೂಡಿಸಲು ಈ ಗೀತೆಯನ್ನು ಬಳಸಲಾಗುತ್ತಿತ್ತು. ಪ್ರಸ್ತುತ ಮಹಾರಾಷ್ಟ್ರ ಸರ್ಕಾರ ದೂರವಾಣಿ ಕರೆ ಬಂದಾಗ ಆಂಗ್ಲ ಪದವಾದ ಹಲೋ ವನ್ನು ಬಳಸುವ ಬದಲಿಗೆ ವಂದೇ ಮಾತರಂ ಎಂದೂ ಹೇಳಬೇಕೆಂದು ನಾಗರಿಕರಲ್ಲಿ ಮನವಿ ಮಾಡಿಕೊಂಡಿದೆ. ಮಹಾರಾಷ್ಟ್ರ ಸರ್ಕಾರದ ಕ್ರಮ ಉತ್ತಮ ಬೆಳವಣಿಗೆಯಾಗಿದೆ.

ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಲು ಅಥವಾ ಹೊಸ ವ್ಯಕ್ತಿಗಳನ್ನು ಪರಿಚಯಿಸಿಕೊಳ್ಳುವ ಸಮಯದಲ್ಲಿ ಹಲೋ ಪದವನ್ನು ಬಳಸಲಾಗುತ್ತದೆ. ಈ ಹಲೋ ಪದವನ್ನು ಅಕ್ಟೋಬರ್ 18, 1826ರಂದು ನಾರ್ವಿಚ್ ಕೊರಿಯರ್‌ನಲ್ಲಿ ಅಮೆರಿಕ ದೇಶದಲ್ಲಿ ಪ್ರಕಟಿಸಲಾಗಿತ್ತು.

ದೂರವಾಣಿಯಲ್ಲಿ ಮೊದಲ ಬಾರಿಗೆ ಹಲೋ ಪದವನ್ನು ಬಳಸಿದ ಕೀರ್ತಿ ಥಾಮಸ್ ಎಡಿಸನ್‌ಗೆ ಸಲ್ಲುತ್ತದೆ, ಈ ಹಲೋ ಪದದ ಬದಲಿ ದೂರವಾಣಿ ಕರೆ ಸ್ವೀಕರಿಸುವಾಗ ಭಾರತದಲ್ಲಿ ವಂದೇ ಮಾತರಂ ಎಂದೂ ಹೇಳಿದರೆ ದೇಶದ ಬಗೆಗಿನ ಗೌರವಕ್ಕೆ ಗರಿ ಮಾಡಿದಂತಾಗುತ್ತದೆ.

ಮಹಾರಾಷ್ಟ್ರ ಸಂಸ್ಕೃತಿ ಸಚಿವರು ವಂದೇ ಮಾತರಂ ಬದಲಿಗೆ, ಜೈಬೀಮ್, ಜೈಶ್ರೀರಾಮ್ ಅಥವಾ ಪೋಷಕರ ಹೆಸರನ್ನು ಬಳಸಬಹುದೆಂದು, ಆಂಗ್ಲ ಪದವಾದ ಹಲೋವನ್ನು ಬಳಸಬಾರದೆಂದು ಜನರಿಗೆ ಮನವಿ ಮಾಡಿರುವುದು ಸೂಕ್ತವಾಗಿದೆ.ಕರೆ ಬಂದಾಗ ಹಲೋ ಬದಲು ನಮ್ಮ ಪೋಷಕರನ್ನು ನೆನಪಿಸಿಕೊಂಡು ಅವರು ನಮಗಾಗಿ ಮಾಡಿದ ತ್ಯಾಗಕ್ಕೆ ಗೌರವ ಸಲ್ಲಿಸಿದಂತಾಗುತ್ತದೆ.

ಹಲೋ ಬದಲಿಗೆ ಜೈಶ್ರೀರಾಮ್ ಪದ ಬಳಸಿದರೂ ಅಸ್ತಿಕರು ಭಗವಂತನ ನಾಮಸ್ಮರಣೆ ಮಾಡಿದಂತಾಗುತ್ತದೆ ಮತ್ತು ಜೈಬೀಮ್ ಎಂದೂ ಬಳಸಿದರು ನಮ್ಮ ಸಂವಿಧಾನವನ್ನು ರಚಿಸಿದ ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಇದರಿಂದಾಗಿ ಮಹಾನ್ ವ್ಯಕ್ತಿಗಳನ್ನು ದಿನವು ನೆನಪಿಸಿ ಕೊಳ್ಳುತ್ತಾ ಅವರ ಆದರ್ಶವನ್ನು ಪಾಲಿಸಬಹುದಾಗಿದೆ.

ಮಹಾರಾಷ್ಟ್ರ ಸರ್ಕಾರದ ಈ ಕ್ರಮ ಸ್ವಾಗರ್ತಾಹವಾಗಿದ್ದು, ವಂದೇ ಮಾತರಂ ಅಭಿಯಾನ ದೇಶದಲ್ಲೆಲ್ಲಾ ಪ್ರಾರಂಭವಾಗಲೆಂದು ಆಶಿಸೋಣ.

– ರಾಸುಮ ಭಟ್, ಚಿಕ್ಕಮಗಳೂರು.

ರಸ, ರುಚಿ, ಜೀವ ಬೇಕು ಸಂಗೀತಕ್ಕೆ



ಪಂಡಿತ್ ರಾಜೀವ ತಾರಾನಾಥರ ಕುರಿತ ಇಂದಿನ (ಸೋಮವಾರ) ಕಾರ್ಯಕ್ರಮದಲ್ಲಿ ಬಿಡುಗಡೆಯಾಗಲಿರುವ ಪುಸ್ತಕ.

ಅಂತರರಾಷ್ಟ್ರೀಯ ಖ್ಯಾತಿಯ ಸರೋದ್ ವಾದಕರಾದ ಪಂ.ರಾಜೀವ ತಾರಾನಾಥ ಅವರಿಗೆ ಇಂದು ಜನ್ಮದಿನ (ಅಕ್ಟೋಬರ್ 17). ತೊಂಬತ್ತು ವರ್ಷ ತುಂಬಿದ ಪ್ರಯುಕ್ತ ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇಂದು ಅವರಿಗೆ ಗೌರವ ಸಮರ್ಪಣೆ. ಅವರ ಕುರಿತ ಮಾತು, ಅವರ ಕುರಿತ ಪುಸ್ತಕ ಬಿಡುಗಡೆ, ಅವರ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಆಯೋಜಿಸಲಾಗಿದೆ. ಅವರ ಜನ್ಮದಿನದ ಪ್ರಯುಕ್ತ ಅವರದೇ ಮಾತುಗಳನ್ನು ಇಲ್ಲಿ ಹಿಡಿದಿಡಲಾಗಿದೆ.

ನಿರೂಪಣೆ: ಗಣೇಶ ಅಮೀನಗಡ

ತೊಂಬತ್ತು ವರ್ಷ ಮುಗಿದವು ಅಂದ್ರ ಸಾಕಷ್ಟು ಬದುಕೀನಿ ಈ ದುನಿಯಾದಾಗ. 91ನೇ ವರ್ಷಕ್ಕೆ ಕಾಲಿಡುವಾಗ ನಮ್ಮ ತಂದೆ ಪಂಡಿತ್ ತಾರಾನಾಥ, ಗುರುಗಳಾದ ಅಲಿ ಅಕ್ಬರ್ ಖಾನ್ ಸಾಹೇಬರು ನೆನಪಾಗುತ್ತಾರೆ. ಅವರ ಕಾಲೊಳಗೆ ಸಾಕಷ್ಟು ಜೀವನ ಕಳೆದೆ. ಅವರ ಜೊತೆಗೆ ಯಾವಾಗಲೂ ಇರದಿದ್ದರೂ ಅನುಭವಗಳು ಯಾವಾಗಲೂ ಇರ್ತಾವು. ಈಗ ಅವರಿಲ್ಲ; ಅನುಭವಗಳಿವೆ. ನಿಮ್ಮ ಗುರುಗಳು ಎಲ್ಲಿದ್ದಾರೆಂದು ಕೇಳ್ತಾರ. ನಿಮ್ಮ ಹೃದಯದಾಗ ಅದಾರ ಅಂತ ಕೇಳಿದ್ರ ನನ್ನ ಬೆರಳೊಳಗ ಅದಾರ ಅಂತೀನಿ. ಸರೋದ್ ಛಲೋ ಬಾರಿಸಿದ್ರ ಬೆರಳೊಳಗ ಇದ್ದಾರ; ಛಲೋ ಬಾರಿಸದಿದ್ರ ಬೆರಳೊಳಗ ಇಲ್ಲ.

ಸಂಗೀತ ಬ್ಯಾರೆ, ಬದುಕ ಬ್ಯಾರೆ ಅಂತಿಲ್ಲ. ವೈರುಧ್ಯ ಇಲ್ರಿ. ಸಂಗೀತ ಮತ್ತ ಬದುಕು ಬ್ಯಾರೆ ಅಂತ ತಿಳಿದ್ರ ಅದು ತಪ್ಪು ತಿಳಿವಳಿಕೆ. ನನ್ನ ಶೇಕ್ಸ್‌ಪಿಯರ್, ಎಲಿಯಟ್, ಗೋಪಾಲಕೃಷ್ಣ ಅಡಿಗರು, ಪುತಿನ... ಹಿಂಗ ಎಲ್ಲರ ಕೃತಿಗಳನ್ನು ಓದುವೆ. ಪುತಿನ ಅವರು ವಿಷ್ಣುಕ್ರಾಂತಿಯ ಪರಿಮಿತ ನೀಲ ಎನ್ನುವ ಸಾಲು ಬರೆದುದನ್ನು ಮರೆಯಲಾಗದು.

ಆದರೆ ಉಸಿರಾಡುವುದು, ಯೋಚಿಸುವುದು ಸಂಗೀತವನ್ನ. ದೊಡ್ಡ ಸಂಗೀತಗಾರನಿಗೂ, ಈಗ ತಾನೆ ಸಂಗೀತ ಕಲಿತ ಯುವ ಸಂಗೀತಗಾರನಿಗೂ ವ್ಯತ್ಯಾಸ ಹೆಚ್ಚಿರಲ್ಲ. ಸಂಗೀತದ ಕಟ್ಟಳೆಗಳನ್ನು ಒಪ್ಪಿಕೊಂಡು ಮುಂದುವರಿಯಬೇಕು. ಅಂದರೆ ತಂತಿ ಸರಿಪಡಿಸಿಕೊಳ್ಳಬೇಕು. ನಂತರ ತಾಳ, ರಾಗಗಳ ಕಟ್ಟಳೆಗೆ ಒಪ್ಪಿಕೊಂಡು ಅದರೊಳಗೆ ಹೊಸತನ್ನು ಸೃಷ್ಟಿಸಬೇಕು. ಇದರ ಮೇಲೆ ನಿಮ್ಮ ಬೆಲೆ ನಿಂತಿರುತ್ತದೆ.

ಒಳ್ಳೆಯ ಬದುಕು, ಒಳ್ಳೆಯ ಸಂಗೀತ, ಒಳ್ಳೆಯ ಅಡುಗೆಗೆ ಕಟ್ಟಳೆ ಇರ್ತಾವು. ಆದರೆ ಕಟ್ಟಳೆಗೂ ಸ್ವಾತಂತ್ರ್ಯಕ್ಕೂ ಜಗಳವಾಗಬಾರದು. ಪೂರಕವಾಗಿರಬೇಕು. ಕೊಲ್ಕತ್ತಾದ ಶಾಂತಿನಿಕೇತನದಲ್ಲಿ ಸಂಗೀತ ಕಲಿಯುವವರು ಕಟ್ಟಳೆಗಳನ್ನು ಒಪ್ಪಿಕೊಂಡು ಬೆಳೆಯುತ್ತಾರೆ. ಬಂಗಾಳದಲ್ಲಿ ರವೀಂದ್ರನಾಥ ಟ್ಯಾಗೋರ್ ಅವರ ಕಲೆ, ಸಾಹಿತ್ಯ, ಸಂಗೀತ ಭಾಳ ಕ್ರಾಂತಿ ಮಾಡಿತು. ಭದ್ರಲೋಗ್ ಅಂತಾರ ಬಂಗಾಲಿಯಲ್ಲಿ. ಅಂದ್ರ ಒಳ್ಳೆಯವನು, ಸುಸಂಸ್ಕೃತ ಅಂತ. ಮದ್ರಾಸಿನ ಮೈಲಾಪುರದ ಮನೆಮನೆಗಳಲ್ಲಿ ಸಂಗೀತಾಭ್ಯಾಸ ಕೇಳುತ್ತದೆ. ಮಗಳಿಗೆ ಮದುವೆ ಮಾಡಿಕೊಡಬೇಕೆನ್ನುವಾಗ ಸಂಗೀತ ಗೊತ್ತಿರಬೇಕು ಎನ್ನುವವರಿದ್ದಾರೆ. ಇಂಥ ವಾತಾವರಣ ಕರ್ನಾಟಕದಲ್ಲಾಗಬೇಕು.

* * *

ನಮ್ಮ ದೇವ್ರು, ಗುರುಗಳಾದ ಉಸ್ತಾದ್ ಅಲಿ ಅಕ್ಬರ್ ಖಾನ್ ಸಾಹೇಬರ ಬಳಿ ಅಮೆರಿಕೆಯ ಬ್ರೂಸ್ ಹ್ಯಾಮ್, ಕ್ರಿಸ್ಟೋಫರ್ ರೀಶ್, ಡೇವಿಡ್ ಟ್ರೇಸಾಫ್, ಟಿಮ್ ವೈಟ್ ಹಾಗೂ ಜಪಾನಿನ ಸ್ಟೀವ್ ವೋಡಾ ಕಲಿಯುತ್ತಿದ್ದರು. ಒಮ್ಮೆ ಇವರೊಂದಿಗೆ ಮಾತನಾಡುವಾಗ ನೀವು ಬಾರಿಸುವ ಸರೋದ್‌ದಲ್ಲಿ ರಸ, ರುಚಿ, ಜೀವ ಇಲ್ಲವೆಂದೆ. ತಕ್ಷಣ ನೀವೇ ಕಲಿಸಿ ಅಂದರು. ಗುರುಗಳಾದ ಅಲಿ ಅಕ್ಬರ್ ಖಾನ್ ಸಾಹೇಬರು ತೀರಿಕೊಂಡ ನಂತರ ಇವರಿಗೆಲ್ಲ ಸರೋದ್ ಕಲಿಸುವುದನ್ನು ಮುಂದುವರಿಸಿದೆ. ಅವರ ಸಂಗೀತ ಕಲಿಕೆಯ ನಿಷ್ಠೆ ಪ್ರಶ್ನಾತೀತ. ಸಂಗೀತ ಕಲಿಯಬೇಕೆಂದು ಎಲ್ಲ ಬಿಟ್ಟು ಬಂದಿರುತ್ತಾರೆ. ಇವರೆಲ್ಲ 30–32 ವರ್ಷಗಳಿಂದ ಸರೋದ್ ಕಲಿಯುತ್ತಿದ್ದಾರೆ ಅಂದ್ರೆ ನಂಬತೀರಾ?

ಇನ್ನು ಚಾಡ್ ಹ್ಯಾಮೆಲ್, ಲೆಸ್ಲಿ ಶ್ನೈಡರ್ ಅವರು ನನ್ನ ಶಿಷ್ಯರು. ಇವರೊಂದಿಗೆ ಕೊಲ್ಕತ್ತಾದ ಸೌಗತ್ ರಾಯ್ ಚೌಧರಿ, ಅಹ್ಮದಾಬಾದಿನ ಸೋಹನ್ ನೀಲಕಂಠ, ಮೈಸೂರಿನ ಸಚಿನ್ ಹಂಪಿ, ಡಾ.ಕೃಷ್ಣಾ ಮನವಲ್ಲಿ ಇವರೆಲ್ಲ ನನ್ನ ಪ್ರಮುಖ ಶಿಷ್ಯರು.

ಸಂಗೀತದಲ್ಲಿ ನೀವು ಮತ್ತು ಸಂಗೀತ ಒಂದಾಗಬೇಕು. ಟಿ.ಎಸ್. ಎಲಿಯಟ್ ಹೇಳುವ ಹಾಗೆ ಯೂ ಆರ್ ದಿ ಮ್ಯೂಸಿಕ್. ವೈಲ್ ದಿ ಮ್ಯೂಸಿಕ್ ಲಾಸ್ಟ್ಸ್ ಎನ್ನುವ ಹಾಗೆ ನಿಜವಾದ ಸಂಗೀತದಲ್ಲಿ ಮಗ್ನರಾದಾಗ, ತಲ್ಲೀನರಾದಾಗ, ಲೀನರಾದಾಗ ಸಂಗೀತ ಮತ್ತು ಸಂಗೀತಗಾರ ಬ್ಯಾರೆ ಇರಲ್ರಿ. ನಮ್ಮಲ್ಲಿ ಗುರು ಪರಂಪರೆಯ ಭಕ್ತಿ ಕಮ್ಮಿ. ನಮ್ಮ ಗುರುಗಳಾದ ಖಾನ್ ಸಾಹೇಬರ ಕಾಲಿಗೆ ಮುತ್ತಿಡುತ್ತಿದ್ದೆ. ಆದರೆ ನಮ್ಮಲ್ಲಿ ಕಾಲು ಹಿಡಿಯುತ್ತಾರೆ. ಅದು ತೋರಿಕೆಗೆ ಆಗಬಾರದು. ನಮ್ಮಲ್ಲಿ ಕಾಫಿ ಆಯ್ತೆ? ತಿಂಡಿ? ಆಮೇಲೆ? ಇಂಥ ತೋರಿಕೆಯ ಮಾತುಗಳೇ ಹೆಚ್ಚು. ಇದು ಒಳ್ಳೆಯದೊ? ಕೆಟ್ಟದ್ದೋ ಗೊತ್ತಿಲ್ಲ.

ನಮ್ಮ ಗುರು ಉಸ್ತಾದ್ ಅಲಿ ಅಕ್ಬರ್ ಖಾನ್ ಸಾಹೇಬರು ಎಂದರೆ ಬೆಳಕು. ಅವರು ತೋರಿಸಿದ ಬೆಳಕಲ್ಲಿ ಹೊಂಟೀನಿ. ಅವರ ಆಶೀರ್ವಾದ ಇರೂತನ ನಾನಿರತೀನಿ. ಅವರ ಆಶೀರ್ವಾದದಿಂದ ಒಮ್ಮೊಮ್ಮೆ ಸರೋದ್ ಸರಿಯಾಗಿ ನುಡಸ್ತೀನಿ. ಎಷ್ಟೋ ಸಾರಿ ಸರಿಯಾಗಿ ನುಡಿಸಲ್ಲ.

* * *

ಗುರುಗಳೆಂಬ ದೊಡ್ಡ ಮಳೆ ಕಳೆದ ಹತ್ತು ವರ್ಷಗಳಿಂದ ಪಂ.ರಾಜೀವ ತಾರಾನಾಥ ಅವರ ಬಳಿ ಸರೋದ್ ಕಲಿಯುತ್ತಿರುವ ಸಚಿನ್ ಹಂಪಿ ಅವರು ಮಾತುಗಳು ಇಲ್ಲಿವೆ...

ಗೆಳೆಯ ಮಿಲಿಂದ್ ಗುರುಗಳ ಬಳಿ ಕರೆದುಕೊಂಡು ಹೋದ. ಇನ್ನೂ ನೆನಪಿದೆ; ಅವತ್ತು ರಾಗ ಪೂರಿಯಾ, ಕಲ್ಯಾಣ್ ನುಡಿಸ್ತಾ ಇದ್ರು ಗುರುಗಳು. ನಾವು ಅವರೊಂದಿಗೆ ತಬಲಾ ನುಡಿಸಿದೆವು. ಸ್ವಲ್ಪ ಹೊತ್ತಾದ ಮೇಲೆ ನಮ್ಮ ಕೈ ಮಾತ್ರ ತಬಲಾ ಮೇಲೆ ಬೆರಳಾಡುತ್ತಿದ್ದವು ಅಷ್ಟೆ. ಆದರೆ ಶಬ್ದ ಬರುತ್ತಿರಲಿಲ್ಲ. ಆದರೆ ಗುರುಗಳು ಸರೋದ್ ನುಡಿಸುತ್ತಲೇ ಇದ್ದರು. ನಾವು ನುಡಿಸುತ್ತಿದ್ದ ತಬಲಾದಿಂದ ಶಬ್ದ ಬರುತ್ತಿಲ್ಲವೆಂದು ಗುರುಗಳು ಗಮನಿಸಿದರು. ಅಂದು ಅವರ ಬಳಿ ಸರೋದ್ ಕಲಿಯಬೇಕೆಂದು ಬೇಡಿಕೊಂಡೆ. ಅವರು ಒಪ್ಪಿಕೊಂಡರು. ಅದು ಅವರ ಕೃಪೆ, ಅವರು ಕೊಟ್ಟ ಭಿಕ್ಷೆ.

ಇನ್ನು ಅವರ ಪಾಠದ ವಿಷಯ; ದೊಡ್ಡ ಮಳೆಯಲ್ಲಿ ನಿಂತರೆ ಬೊಗಸೆಯಲ್ಲಿ ಎಷ್ಟು ಹಿಡಿದುಕೊಳ್ತಿವೊ ಅಷ್ಟು ಸಿಗುತ್ತದೆ. ಹಾಗೆ ಗುರುಗಳು. ಅವರು ದೊಡ್ಡ ಮಳೆ. ಅವರು ಸಂಗೀತ ಕೊಡುತ್ತಾರೆ. ನಮಗೆ ಸಿಗುವುದು ನಮ್ಮ ಸಾಮರ್ಥ್ಯಕ್ಕೆ ದಕ್ಕಿದಷ್ಟು ಮಾತ್ರ.

ಸಂಗೀತ ಹೊರತುಪಡಿಸಿ ಗುರುಗಳೆಂದರೆ ಅನುಭವ. ಎಚ್ಚರದ ಸ್ಥಿತಿ. ಅಪರೂಪದ ರಾಗಗಳನ್ನು ಅವರು ಅನಾರೋಗ್ಯವಿದ್ದಾಗ ಆಸ್ಪತ್ರೆಯಲ್ಲಿದ್ದಾಗಲೂ ಕಲಿಸಿದ್ದಾರೆ. ರಾತ್ರಿ ಎಚ್ಚರವಾದಾಗ ನೀರು ಕೊಡಲು ಕೇಳುತ್ತಾರೆ. ತಕ್ಷಣ ರಾಗವೊಂದನ್ನು ಕಲಿಸುತ್ತಾರೆ. ಇದರಲ್ಲಿ ಡಾಂಭಿಕತನ, ಅಪ್ರಾಮಾಣಿಕತೆ ವಿಷಯಕ್ಕೆ ಆಸ್ಪದವಿಲ್ಲ. ವಿನಮ್ರತೆ ಇದ್ದರೆ ಕಲಿಕೆ ಸಾಧ್ಯ. ಗುರುಗಳು ಹತ್ತಿರ ಎಷ್ಟು ಸಮಯ ಕಳೆಯಲು ಸಾಧ್ಯವಾಗುತ್ತದೊ ಅವು ಅಮೂಲ್ಯ ದಿನಗಳು, ಕ್ಷಣಗಳು...

ದಸರಾ ವಸ್ತುಪ್ರದರ್ಶನದಲ್ಲಿ ಕಲ್ಕಿ ಅಮ್ಮ ಭಗವಾನ್ ಆಧ್ಯಾತ್ಮಿಕ ಕೇಂದ್ರ ಉದ್ಘಾಟನೆ



ಮೈಸೂರು, ಅ.16– ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿ 'ಕಲ್ಕಿ ಶ್ರೀ ಅಮ್ಮ ಭಗವಾನ್ ಆಧ್ಯಾತ್ಮಿಕ ಮಾಹಿತಿ ಕೇಂದ್ರ'ವನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಭಾನುವಾರ ಉದ್ಘಾಟಿಸಿದರು.


ಬಳಿಕ ಮಾತನಾಡಿದ ಅವರು, ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಮನುಷ್ಯ ಆರ್ಥಿಕತೆ ಬಗ್ಗೆ ಹೆಚ್ಚು ಗಮನ ಹರಿಸುತ್ತಿದ್ದು ಸದಾ ಒತ್ತಡದಲ್ಲಿ ಜೀವನ ನಡೆಸುವಂತಾಗಿದೆ. ಈ ಪರಿಸ್ಥಿತಿಯಲ್ಲಿ ಮನಸ್ಸಿನ ನೆಮ್ಮದಿ ಹಾಗೂ ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಆಧ್ಯಾತ್ಮಿಕ ಹಾದಿ ಪರಿಣಾಮಕಾರಿಯಾಗಿದೆ. ಆಧ್ಯಾತ್ಮ ಎನ್ನುವುದು ಜಾತಿ–ಧರ್ಮ ಮೀರಿದ್ದು. ಧ್ಯಾನ, ಭಜನೆ, ಪ್ರಾರ್ಥನೆ, ಯೋಗ, ಭಕ್ತಿ ಮಾರ್ಗದಲ್ಲಿ ನೆಮ್ಮದಿಯ ಬದುಕು ಕಾಣಬಹುದು ಎಂದು ಹೇಳಿದರು. ಕಲ್ಕಿ ಅಮ್ಮ ಭಗವಾನ್ ಶಿಷ್ಯೆ ನಮೀತದಾಸ ಜೀ ಮಾತನಾಡಿ, ಒತ್ತಡಮಯ ಜೀವನದಲ್ಲಿ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಇದಕ್ಕೆ ದೇವರ ಪ್ರಾರ್ಥನೆ, ಭಜನೆ ಸುಲಭ ಮಾರ್ಗವಾಗಿದೆ. ಇದರಿಂದ ಆತ್ಮಸ್ಥೈರ್ಯ, ಆತ್ಮ ನಂಬಿಕೆಯೂ ವೃದ್ಧಿಯಾಗುತ್ತದೆ. ಹಾಗಾಗಿ ಆಧ್ಯಾತ್ಮಿಕತೆಯ ಬಗ್ಗೆ ಮಾಹಿತಿ ಹಾಗೂ ಅರಿವು ನೀಡುವ ನಿಟ್ಟಿನಲ್ಲಿ ದಸರಾ ವಸ್ತುಪ್ರದರ್ಶನದಲ್ಲಿ ಆಧ್ಯಾತ್ಮಿಕ ಕೇಂದ್ರ ಆರಂಭಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಇಂಜಿನಿಯರ್‌ಗಳಾದ ಶಿವರಾಜ್, ಪ್ರಭಾಕರ್, ಶ್ರೀ ಅಮ್ಮ ಭಗವಾನ್ ಭಕ್ತರಾದ ಯಶಸ್, ಶರತ್, ಪ್ರವೀಣ್, ಯಶೋಧ ನಾರಾಯಣ್, ಭಾಗ್ಯಮ್ಮ, ವಸುದಾ, ಜಯಮ್ಮ, ಸರೋಜಮ್ಮ, ಅಶ್ವಿನಿ, ಮೋಹನ್ ಸಂತೋಷ್, ನಂದೀಶ್, ಪ್ರವೀಣ್ ಮತ್ತಿತರರು ಉಪಸ್ಥಿತರಿದ್ದರು.



ಕುರುಬಾರಹಳ್ಳಿ ಗ್ರಾಮದಲ್ಲಿ ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಮಾಲಮ್ಮ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ, ಸಾಂಪ್ರದಾಯಿಕವಾಗಿ ಜರುಗಿತು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಯಜಮಾನರಾದ ಅಪ್ಪುಗೌಡ, ರವಿ, ನಾಮನಿರ್ದೇಶಿತ ಪಾಲಿಕೆ ಸದಸ್ಯ ಕೆ.ಜೆ. ರಮೇಶ್, ಕುರುಬಾರಹಳ್ಳಿ ಪ್ರಕಾಶ್, ದಿಲೀಪ್ ಮತ್ತಿತರರು ಉಪಸ್ಥಿತರಿದ್ದರು.

ಹನಸೋಗೆಯಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ



ಹೊಸೂರು, ಅ.16– ಕಾರ್ಯಕರ್ತರು ಒಟ್ಟಾಗಿ ದುಡಿದಾಗ ಮಾತ್ರ ಪಕ್ಷವನ್ನು ಅಧಿಕಾರಕ್ಕೆ ತರಲು ಸಾಧ್ಯ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹನಸೋಗೆ ಗ್ರಾಪಂ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 2023ರಲ್ಲಿ ಪಕ್ಷ ಅಧಿಕಾರಕ್ಕೆ ಬರುವ ಎಲ್ಲಾ ಸೂಚನೆಗಳಿದ್ದು, ಕಾರ್ಯಕರ್ತರು ಅಸಮಾಧಾನಗಳನ್ನು ದೊಡ್ಡದು ಮಾಡದೆ ಗ್ರಾಮಗಳಲ್ಲಿ ಮುಖಂಡರ ಮೇಲಿನ ಮುನಿಸನ್ನು ಪಕ್ಷದ ಮೇಲೆ ತೋರದೆ ಕೆಲಸ ಮಾಡಿದರೆ ಗೆಲುವು ಕಷ್ಟವೇನಲ್ಲ ಎಂದರು.

ಸಭೆಯಲ್ಲಿ ಮುಖಂಡರಾದ ಮಧುಚಂದ್ರ, ಬಿ.ರಮೇಶ್, ಕುಚೇಲ, ಪ್ರಕಾಶ್ ನಾಗರಾಜ್, ಯುವ ಜೆಡಿಎಸ್ ಅಧ್ಯಕ್ಷ ಮಧು, ಗ್ರಾಪಂ ಅಧ್ಯಕ್ಷೆ ಭಾಗ್ಯ, ಮಾಜಿ ಅಧ್ಯಕ್ಷ ರಾಜೇಶ್, ಸುರೇಶ್ ರೇಣುಕೇಶ್, ಕಿರಣ ಇತರರಿದ್ದರು.



ಇದೇ ಮೊದಲ ಬಾರಿಗೆ ಬೆಣ್ಣೆ ಅಲಂಕಾರದಲ್ಲಿ ಕಂಗೊಳಿಸುತ್ತಿರುವ ತಿ.ನರಸೀಪುರದ ಆಲಗೂಡಿನ ಶ್ರೀಸಿದ್ದೇಶ್ವರಸ್ವಾಮಿ.

ಲಯನ್ಸ್ ಕ್ಲಬ್ ಜೆಪಿ ನಗರದಿಂದ ಸಾಧಕರಿಗೆ ಸನ್ಮಾನ



ಮೈಸೂರು, ಅ.16(ಎಸ್‌ಪಿಎನ್)– ಸಾರ್ವಜನಿಕರ ನಡುವೆ ಕೆಲಸ ಮಾಡುವ ಅವಕಾಶ ದೊರಕಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತೇನೆ ಎಂದು ಕೆಎಎಸ್‌ನಲ್ಲಿ 3ನೇ ರ್‍ಯಾಂಕ್ ಅಭ್ಯರ್ಥಿ ಕೆ.ಎಸ್.ಕಾವ್ಯ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಜೆ.ಪಿ. ನಗರ ಮೈಸೂರು ವತಿಯಿಂದ ವಿವಿಧ ಕ್ಷೇತ್ರದ ಸಾಧಕರನ್ನು ಅಭಿನಂದಿಸುವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕಷ್ಟಪಟ್ಟು ಅಧ್ಯಯನ ಮಾಡಿದ್ದರಿಂದ ರಾಜ್ಯಕ್ಕೆ(ಕೆಎಎಸ್) 3ನೇ ರ್‍ಯಾಂಕ್ ಬಂದಿರುವುದು ಸಂತೋಷವಾಗುತ್ತಿದೆ. ಹಾಗಾಗಿ ಸಮಾಜದ ಕೆಲಸ ಮಾಡಲು ಧರ್ಮದ ಹಾದಿಯಲ್ಲಿ ಕೆಲಸ ಮಾಡಲು ಪ್ರೇರೇಪಿಸುವಂತೆ ಆ ಭಗವಂತನಲ್ಲಿ ಪಾರ್ಥಿಸುತ್ತೇನೆ. ಅಲ್ಲದೆ, ಅ ಧರ್ಮದಲ್ಲಿ ಕೆಲಸ ಮಾಡದಂತೆ ಎಚ್ಚರವಹಿಸುತ್ತೇನೆ ಎಂದು ಸಂಸ್ಕೃತ ಶ್ಲೋಕವನ್ನು ಉಚ್ಛರಿಸಿ, ವಾಕ್ಯಾರ್ಥಗಳನ್ನು ಹೇಳಿದರಲ್ಲದೆ, ನನ್ನ ಶ್ರಮವನ್ನು ಗುರುತಿಸಿ ಲಯನ್ಸ್ ಸಂಸ್ಥೆಯ ಪದಾಧಿಕಾರಿಗಳು ಸನ್ಮಾನಿಸಿರುವುದಕ್ಕೆ ಸಂತೋಷವಾಗುತ್ತಿದೆ ಎಂದು ತಿಳಿಸಿದರು.

ಈ ವೇಳೆ ಶಿಕ್ಷಕರ ವಿಭಾಗದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕ ಕೆಂಪಣ್ಣ, ಜೆಎಸ್‌ಎಸ್ ಪಿಯು ಕಾಲೇಜು ಉಪನ್ಯಾಸಕ ಎಸ್.ಎಂ.ಗುರುಪಾದಪ್ಪ, ಅರಸನಕೆರೆ ಸರ್ಕಾರಿ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯಶಿಕ್ಷಕಿ ಎಂ.ಶಾರದಮ್ಮ, ಓಂ ಶ್ರೀ ಗುರು ಆಂಗ್ಲೋ ವೇದಿಕೆ ಲಿಟರರಿ ಶಾಲೆಯ ಬಿ.ಎನ್. ಆಶಾರಾಣಿ, ಸಕಲೇಶಪುರ ಸರ್ಕಾರಿ ಪ್ರಾಥಮಿಕ ಶಾಲೆ ನಿವೃತ್ತ ಮುಖ್ಯಶಿಕ್ಷಕಿ ಹೆಚ್.ವಿ.ಷಣ್ಮುಖಯ್ಯ, ಅಭಿಯಂತರರ ವಿಭಾಗದಿಂದ ನಿವೃತ್ತ ರೈಲ್ವೆ ಅಭಿಯಂತರ ಲಯನ್ ವಿ.ಸತ್ಯನಾರಾಯಣ, ಮುಡಾ ಸಹಾಯಕ ನಿರ್ದೇಶಕ ಎಂ.ಕೆ.ಪ್ರಶಾಂತ ಕುಮಾರ್, ಕೆ.ಆರ್.ಆಸ್ಪತ್ರೆಯ ಹಿರಿಯ ವೈದ್ಯ ಡಾ.ಯೋಗೇಶ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಎಸ್‌ಜೆಸಿಇಯ ನಿವೃತ್ತ ಉಪನ್ಯಾಸಕ ಎಂ.ಎಲ್. ರೇಣುಕಪ್ಪ, ಸರೋಜಮ್ಮ, ಸಹಕಾರ ಇಲಾಖೆಯ ನಿವೃತ ಲೆಕ್ಕಪರಿಶೋಧಕ ಹೆಚ್.ಮಂಜಯ್ಯ, ಡಿ.ಬಿ. ಇಂದಿರಾ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಲಯನ್ ಡಾ. ನಾಗರಾಜು, ಲಯನ್ ರತ್ನಮ್ಮ, ನಗರ ಪಾಲಿಕೆ ಸದಸ್ಯೆ ಶಾರದಮ್ಮ ಈಶ್ವರ್, ಲಯನ್ಸ್ ಕ್ಲಬ್ ಜೆ.ಪಿ.ನಗರದ ಅಧ್ಯಕ್ಷ ಬಿ.ಎಂ.ಮಲ್ಲಿಕಾರ್ಜುನ, ಕಾರ್ಯದರ್ಶಿ ಯು.ಎಸ್.ಸದಾಶಿವ, ಡಾ.ನಾಗರಾಜ ವಿ.ಬೈರಿ, ಲಯನ್ ಬಿ. ಮಲ್ಲಿಕಾರ್ಜುನಪ್ಪ, ಲಯನ್ ಎಸ್.ಪಿ.ಶಿವಪ್ರಕಾಶ್, ಲಯನ್ ನಂಜುಂಡಸ್ವಾಮಿ ಉಪಸ್ಥಿತರಿದ್ದರು.

6 ರೋಟರಿ ಮತ್ತು ಲಯನ್ಸ್ ಸಂಸ್ಥೆಗಳು ಅಂತರರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳು. ಈ ಸಂಸ್ಥೆಗಳು ಹಲವು ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಸಮಾಜದ ಬದಲಾವಣೆಗೆ ಶ್ರಮಿಸುತ್ತಿವೆ.

- ತೋಂಟದಾರ್ಯ, ಮಾಜಿ ಸದಸ್ಯರು, ವಿಧಾನಪರಿಷತ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಿ.ಸಿ.ಹೊಸೂರು, ಬೇಗೂರು ವ್ಯಾಪ್ತಿಯಲ್ಲಿ ಮಳೆ ಅವಾಂತರ



ಚಾಮರಾಜನಗರ, ಅ.16–ತಾಲೂಕಿನ ವಿ.ಸಿ.ಹೊಸೂರು ಗ್ರಾಮದಲ್ಲಿ ಶನಿವಾರ ರಾತ್ರಿ ಸುರಿದ ಭಾರೀ ಮಳೆಗೆ ಗ್ರಾಮದ ಹತ್ತಾರು ಮನೆಗಳು ಹಾಗೂ ಧನದ ಕೊಟ್ಟಿಗೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿಯಾಗಿದೆ.

ಪರಿಣಾಮ ಮನೆಯಲ್ಲಿದ್ದ ಪಾತ್ರೆ-ಪಗಡೆ, ಮನೆಯ ಸಾಮಗ್ರಿಗಳು ಚೆಲ್ಲಪಿಲಿಯಾಗಿದ್ದಾವೆ. ಜೊತೆಗೆ ಧನದ ಕೊಟ್ಟಿಗೆಗಳಿಗೆ ನೀರು ನುಗ್ಗಿ ರಾತ್ರಿಯಲ್ಲ ಜಾನುವಾರುಗಳು ನೀರಲ್ಲಿ ನಿಂತಿದ್ದವು. ಅಲ್ಲದೆ ಸಂಗ್ರಹಿದ್ದ ಮೇವು ಸಂಪೂರ್ಣವಾಗಿ ನೀರುಪಾಲಾಗಿದೆ.

ಬೆಳಗಿನ ಜಾವ ಗ್ರಾಮದ ಗ್ರಾಮ ಪಂಚಾಯತಿ ಸದಸ್ಯರು ಗ್ರಾಮಸ್ಥರ ಸಹಾಯದಿಂದ ಬಾಡಿಗೆ ಡೀಸೆಲ್ ಮೋಟಾರ್ ಮೂಲಕ ನೀರನ್ನು ತೆರವು ಮಾಡಲಾಯಿತು.

ಬೇಗೂರು ವರದಿ: ಗುಂಡ್ಲುಪೇಟೆ ತಾಲೂಕಿನ ಬೇಗೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಕೆಲ ದಿನಗಳಿಂದ ಸುರಿಯುತ್ತಿರುವ ಮಳೆ ಸಾಕಷ್ಟು ಅವಾಂತರ ಸೃಷ್ಟಿಸಿದೆ.

ಕೋಟೆಕೆರೆ ಗ್ರಾಮದ ಕೆರೆ ಕೋಡಿ ಬಿದ್ದು ನೀರು ಹರಿದು ಬಂದು ಬೆಳಚಲವಾಡಿ ಗ್ರಾಮದ ಹೊರವಲಯದಲ್ಲಿ ಬಾಲಕಿಯರ ವಿದ್ಯಾರ್ಥಿ ನಿಲಯ, ರೈತ ಸಂಪರ್ಕ ಕೇಂದ್ರ, ಹಾಗೂ ಬೇಗೂರು–ಬೆಳಚಲವಾಡಿ ರಸ್ತೆ ಜಲಾವೃತಗೊಂಡಿದೆ. ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸಾವರರು, ಪಾದಾಚಾರಿಗಳು ಪರದಾಡುವಂತಾಯಿತು. ಬೇಗೂರು ಗ್ರಾಮದ ಗುಂಡಪ್ಪ, ಕಾಳಿಂಗಪ್ಪನವರ ಮನೆಗಳು, ರಸ್ತೆ ಪಕ್ಕದಲ್ಲಿರುವ ಅಂಗಡಿಗಳು ಮಳೆಯ ನೀರಿನಲ್ಲಿ ಜಲಾವೃತವಾಗಿವೆ. ಚಿಕ್ಕಾಟಿ ಗ್ರಾಮದ ಕೆರೆಯೂ ತುಂಬಿ ಕೋಡಿ ಬಿದ್ದಿದೆ. ಕೆರೆಗೆ ಹರಿದು ಬರುತ್ತಿದ್ದ ನೀರಿನ ಕಾಲುವೆಗಳಲ್ಲಿ ಹೂಳು ತುಂಬಿದ್ದರಿಂದ ನೀರು ಸರಾಗವಾಗಿ ಹರಿಯದೆ ಕಾಲುವೆಗಳ ಅಕ್ಕಪಕ್ಕದ 10ಕ್ಕೂ ಹೆಚ್ಚು ನುಗ್ಗಿದೆ. ಇದರಿಂದ ಮನೆಯಲ್ಲಿದ್ದ ದವಸ-ಧಾನ್ಯ ನೀರುಪಾಲಾಗಿದೆ. ಸ್ಥಳೀಯ ಗ್ರಾಪಂ ಅಧಿಕಾರಿಗಳು, ಜನಪ್ರತಿನಿಧಿಗಳು ಹಾನಿ ಸ್ಥಳಗಳಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.



ಕಾವೇರಿ ಚಂಗ್ರಾಂದಿ ಪತ್ತಲೋದಿ ಕಾರ್ಯಕ್ರಮ

ಗೋಣಿಕೊಪ್ಪ, ಅ.16– ತಾವಳಗೇರಿ ಮೂಂದ್‌ನಾಡ್ ಕೊಡವ ಸಮಾಜದಲ್ಲಿ ಟಿ. ಶೆಟ್ಟಿಗೇರಿ ಗೌರಿ–ಗಣೇಶ ಸೇವಾ ಸಮಿತಿ, ಸಂಭ್ರಮ ಪೊಮ್ಮಕ್ಕಡ ಕ್ರೀಡೆ, ಸಾಂಸ್ಕೃತಿಕ ಸಂಸ್ಥೆ, ಕೊಡವ ತಕ್ಕ ಎಳ್‌ತ್‌ಕಾರಡ ಕೂಟ ಸಹಯೋಗದಲ್ಲಿ ಕಾವೇರಿ ಚಂಗ್ರಾಂದಿ ಪತ್ತಲೋದಿ ಕಾರ್ಯಕ್ರಮವನ್ನು ಅ.18 ರಿಂದ ಅ. 27 ರವರೆಗೆ ಆಯೋಜಿಸಲಾಗಿದೆ.

10 ದಿನ ಸಂಜೆ 5 ಗಂಟೆಯಿಂದ ರಾತ್ರಿ 7.30 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದೆ. ಅ. 18 ರಂದು ಕೊಡವ ನೈಟ್ಸ್ ಸಿಂಪೋನಿ ತಂಡದ ಆರ್ಕೆಸ್ಟ್ರಾ, 19 ರಂದು ಪೊನ್ನಂಪೇಟೆ ಕೊಡವ ಸಮಾಜದ ಸಾಂಸ್ಕೃತಿಕ ಕಾರ್ಯಕ್ರಮ, 20 ರಂದು ಗೋಣಿಕೊಪ್ಪ ಕಾವೇರಿ ಕಾಲೇಜು ತಂಡ ಸಾಂಸ್ಕೃತಿಕ ಕಾರ್ಯಕ್ರಮ, ಅ. 21 ಮಂದತ್ತವ್ವ ಟ್ರಸ್ಟ್ ಕಾರ್ಯಕ್ರಮ, ಅ. 22 ರಂದು ಶ್ರೀಮಂಗಲ ಕೊಡವ ಸಮಾಜ ಪೊಮ್ಮಕ್ಕಡ ಕೂಟ್‌ಕಾರಡ ಕಾರ್ಯಕ್ರಮ, 23 ರಂದು ಪಿ ಆಂಡ್ ಜಿ ಸಂಘದ ಫ್ಯಾಷನ್ ಶೋ, 24 ರಂದು ಕಾವೇರಿ ಕಾಲೇಜು ತಂಡದ ಕಾರ್ಯಕ್ರಮ, 25 ರಂದು ಕುರ್ಚಿ, ಬೀರುಗ, ದಕ್ಷಿಣ ಗಂಗೆ ಕೊಡವ ಒಕ್ಕೂಟ ಕಾರ್ಯಕ್ರಮ, 26 ರಂದು ಮಧ್ಯಾಹ್ನ 1.30 ಗಂಟೆಗೆ ತಾವಳಗೇರಿ ನಾಡಿಗೆ ಸೇರಿದ ಗ್ರಾಮಸ್ಥರಿಗೆ ಸ್ಲೋ ಬೈಕ್ ರೇಸ್, ಸಂಜೆ ಕೊಡವ ತೀನಿ ಪೈಪೋಟಿ, ತಳಿಯಪುಟ್ಟ್ ಪಜ್ಜಿ ತ್ಯಯಾರಿ, ಸಂಭ್ರಮ ಪೊಮ್ಮಕ್ಕಡ ತಂಡ ಹಾಗೂ ಅಪ್ಪಚ್ಚಕವಿ ತಂಡದ ಸಾಂಸ್ಕೃತಿಕ ಕಾರ್ಯಕ್ರಮ, ಅ. 27 ರಂದು ಮಧ್ಯಾಹ್ನ 1.30 ಗಂಟೆಗೆ ನಾಡಿಗೆ ಸೇರಿದ ಗ್ರಾಮಸ್ಥರಿಗೆ ಹಗ್ಗಜಗ್ಗಾಟ, ಸಂಜೆ ರೂಟ್ಸ್ ತಂಡದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾವಳಗೇರಿ ಮೂಂದ್‌ನಾಡ್ ಕೊಡವ ಸಮಾಜ ಅಧ್ಯಕ್ಷ ಚೊಟ್ಟೆಯಂಡಮಾಡ ಬೋಸು ವಿಶ್ವನಾಥ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು, ಅ.16–ಅಪರಿಚಿತ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಅಕ್ಟೋಬರ್ 15ರಂದು ಬೆಳಗ್ಗೆ 10.30ರಲ್ಲಿ ಠಾಣೆಗೆ ಬಂದ ಮಾಹಿತಿಯಂತೆ ಪೊಲೀಸರು ಸಿದ್ಧಾರ್ಥನಗರದ ಸ್ಕೇಟಿಂಗ್ ಪಾರ್ಕ್ ಬಳಿ ತೆರಳಿ ನೋಡಿದಾಗ ಅಲ್ಲಿ 55 ರಿಂದ 60 ವರ್ಷದ ವಯೋಮಾನದ ವ್ಯಕ್ತಿ ಸಾವನ್ನಪ್ಪಿರುವುದು ಕಂಡು ಬಂದಿದೆ. ಈತ ಅಸ್ವಸ್ಥತೆಯಿಂದಲೋ ಅಥವಾ ಅನಾರೋಗ್ಯದಿಂದಲೋ ಮೃತಪಟ್ಟಿರ ಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಈತನ ವಾರಸುದಾರರು ನಜರ್‌ಬಾದ್ ಠಾಣೆ ದೂರವಾಣಿ ಸಂಖ್ಯೆ: 2418308 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಗೃಹಣಿ ನಾಪತ್ತೆ

ಮೈಸೂರು, ಅ.16–ಗೃಹಿಣಿಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ವಿವಿ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿವಿ ಮೊಹಲ್ಲಾದ ಶ್ರೀನಿವಾಸ್ ಎಂಬುವರ ಪತ್ನಿ ಮಂಜು(47) ಅಕ್ಟೋಬರ್ 10ರಂದು ಬೆಳಗ್ಗೆ 10 ಗಂಟೆ ಸುಮಾರಿನಲ್ಲಿ ಮನೆಯಿಂದ ಹೊರ ಹೋದವರು ಈವರೆವಿಗೂ ವಾಪಸ್ಸಾಗಿಲ್ಲ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಮಾಹಿತಿ ಇರುವವರು ವಿವಿ ಪುರಂ ಠಾಣೆ ದೂರವಾಣಿ ಸಂಖ್ಯೆ: 0821–2418314 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ತಿಳಿಸಿದೆ.

ಮಲೈ ಮಹದೇಶ್ವರರ ಕುಂಭಮೇಳಕ್ಕೆ ವರ್ಣರಂಜಿತ ತೆರೆ

● ಪ್ರತಿ 12 ವರ್ಷಕ್ಕೊಮ್ಮೆ ತ್ರಿವೇಣಿ ಸಂಗಮದಲ್ಲಿ ಸರ್ಕಾರದಿಂದ ಕುಂಭಮೇಳ ಆಚರಣೆ ● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಹತ್ವದ ಘೋಷಣೆ

ಎಂ.ಕೆ.ಮೋಹನ್‌ರಾಜ್



ತ್ರಿವೇಣಿ ಸಂಗಮ(ಮಂಡ್ಯ),ಅ.16– ಪ್ರತಿ 12 ವರ್ಷಕ್ಕೊಮ್ಮೆ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕಿನ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳ ನಡೆಯುವಂತೆ ಸರ್ಕಾರಿ ಆದೇಶ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಭಾನುವಾರ ಕೆ.ಆರ್.ಪೇಟೆ ತಾಲೂಕಿನ ಅಂಬಿಗರಹಳ್ಳಿ, ಸೋಮನಹಳ್ಳಿ, ಪುರ, ಸಂಗಾಪುರ ಗ್ರಾಮದ ಬಳಿಯಿರುವ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ತ್ರಿವೇಣಿ ಸಂಗಮದಲ್ಲಿ ಮಲೈ ಮಹದೇಶ್ವರರ ಮಹಾಕುಂಭಮೇಳದ ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತದಾದ್ಯಂತ ಮಹಾನದಿಗಳು ಸಂಗಮವಾದ ಸ್ಥಳವನ್ನು ಮಹಾ ಕುಂಭಮೇಳವನ್ನಾಗಿ ಆಚರಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಅದರಲ್ಲೂ ನಮ್ಮ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಮೂರು ನದಿಗಳು ಕೂಡುವುದು ವಿಶೇಷ. ಹತ್ತಾರು ಕೆರೆ, ಹಳ್ಳಗಳಲ್ಲಿ ಸಂಗ್ರಹವಾದ ನೀರಿಗೆ ಚಲನಾಶಕ್ತಿ ಇದ್ದು, ಅವು ಸಮುದ್ರವನ್ನು ಸೇರುತ್ತವೆ. ಅದಕ್ಕೂ ಮುನ್ನ ನದಿಗಳಾಗಿ ಜೋಡಣೆಯಾಗುತ್ತವೆ. ಈ ನಿಟ್ಟಿನಲ್ಲಿ ನದಿ ನೀರು ಬಹಳ ಪವಿತ್ರವಾದದ್ದು ಎಂದು ಅಭಿಪ್ರಾಯಪಟ್ಟರು.

ಮನುಷ್ಯನ ಜೀವನ ಸಹ ನದಿಯಂತೆ. ಹಲವು ವಿಚಾರಗಳು, ಅನುಭವಗಳು ಸಂಗಮವಾಗಿ ಅದನ್ನು ಚಲನಾಶಕ್ತಿಯಿಂದ ನಾವು ಜೀವನದಲ್ಲಿ ಒಳ್ಳೆಯ ಬೆಳವಣಿಗೆಯನ್ನು ಮೈಗೂಡಿಸಿಕೊಂಡು ಹೋದರೆ ಪ್ರತಿಯೊಬ್ಬ ಮನುಷ್ಯ ಸಹ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ ಎಂದರು.

ದೈವಸಂಕಲ್ಪ ಇರುವ ವ್ಯಕ್ತಿ ತಪ್ಪು ಮಾಡುವ ಸಾಧ್ಯತೆ ಕಡಿಮೆ ಇರುತ್ತದೆ. ಆದ್ದರಿಂದ ಬದುಕಿರುವ ವೇಳೆ ಮನುಷ್ಯ ದೈವಸಂಕಲ್ಪದ ಹಾದಿಯಲ್ಲಿ ಒಳ್ಳೆಯ ಕೆಲಸ ಮಾಡಬೇಕು. ನದಿ ಹೇಗೆ ಸಮುದ್ರದಲ್ಲಿ ಲೀನವಾಗುತ್ತದೋ ಹಾಗೆ ಮನುಷ್ಯ ಸಹ ಸೃಷ್ಟಿಕರ್ತನ ಬಳಿ ಲೀನವಾಗುತ್ತಾನೆ. ಪ್ರತಿಯೊಬ್ಬ ಮನುಷ್ಯನಲ್ಲಿ ಶುದ್ಧ ಅಂತಃಕರಣವಿದ್ದರೆ ಆತನಲ್ಲಿ ಪ್ರತಿಯೊಬ್ಬರನ್ನೂ ಪ್ರೀತಿಸುವ ಗುಣವಿರುತ್ತದೆ. ಇದನ್ನು ಅರ್ಥೈಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕೆಂದು ಕರೆ ನೀಡಿದರು.

ಹಿಂದೂ ಧರ್ಮ ಪ್ರಚಾರಕ ಶ್ರೀ ಶಂಕರಾಚಾರ್ಯರು ಹಿಂದೂ ಧರ್ಮದ ಸ್ಪಷ್ಟತೆ, ನಿಖರತೆ, ಒಳ ಅರ್ಥವನ್ನು ನಾಡಿಗೆ ತಿಳಿಸಿಕೊಟ್ಟರು. ಶಂಕರಾಚಾರ್ಯರು ಇಲ್ಲದಿದ್ದರೆ ಹಿಂದೂ ಧರ್ಮದ ಬೆಳವಣಿಗೆ ಬಹಳ ಕಷ್ಟವಾಗುತ್ತಿತ್ತು. ಅವರ ಧರ್ಮ ಪ್ರಚಾರದಿಂದ ಸಮಾಜದಲ್ಲಿ ಸಂಸ್ಕೃತಿ–ಸಂಸ್ಕಾರ ಹೆಚ್ಚಾಯಿತು ಎಂದು ಹೇಳಿದರು.

ಬೆಳೆ ನಾಶಕ್ಕೆ 2.30 ಕೋಟಿ ರೈತರಿಗೆ ಪರಿಹಾರ: ಕರ್ನಾಟಕದ ಉದ್ದಗಲಕ್ಕೂ ಮಳೆ ಆಗುತ್ತಿದೆ. ಕೆರೆಕಟ್ಟೆಗಳು ತುಂಬಿವೆ. ಆದರೆ ಕೆಲವು ಕಡೆ ಪ್ರವಾಹ ಆಗಿದೆ. ಜನವಸತಿಗೆ ತೊಂದರೆಯಾಗಿದ್ದು, ಸಮಸ್ಯೆ ನಿವಾರಣೆಗೆ ಕ್ರಮ ವಹಿಸಿದೆ. ಮಂಡ್ಯಕ್ಕೆ ಸಂಬಂಧಿಸಿದಂತೆ ವೀಡಿಯೊ ಸಂವಾದದಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಬೆಳೆ ನಾಶಕ್ಕೆ 2.30 ಕೋಟಿ ರೈತರಿಗೆ ಪರಿಹಾರವನ್ನು ಒದಗಿಸಲಾಗಿದೆ. ಅದರ ಜೊತೆಗೆ ಇಬ್ಬರು ಮರಣ ಹೊಂದಿದವರಿಗೆ ತಲಾ 5 ಲಕ್ಷ ರೂ.ಗಳ ಪರಿಹಾರ ನೀಡಿದೆ. ಬಿದ್ದುಹೋಗಿದ್ದ 304 ಮನೆಗಳಿಗೆ 100ಕ್ಕೆ 100 ಪರಿಹಾರ ನೀಡಲಾಗಿದೆ. ಮತ್ತೆ ಒಂದು ವಾರದಿಂದ ಆಗುತ್ತಿರುವ ಮಳೆಗೆ ಕೂಡಲೇ ಬೆಳೆ ನಾಶ, ಮನೆಗಳಿಗೆ ಸಂಬಂಧಿಸಿದಂತೆ ವರದಿ ನೀಡಿದರೆ ಕೂಡಲೇ ಪರಿಹಾರ ನೀಡಲಾಗುವುದು ಎಂದರು.

ರಾಷ್ಟ್ರೀಯ ಹೆದ್ದಾರಿ ಸಮಸ್ಯೆ ಬಗ್ಗೆ ಶೀಘ್ರ ಕ್ರಮ: ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಇದೇ ವಾರದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ, ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಪದೇ ಪದೇ ನೀರು ನಿಂತು ತೊಂದರೆಯಾಗುತ್ತಿದ್ದು, ಇದರಲ್ಲಿ ವಿನ್ಯಾಸದ ಸಮಸ್ಯೆಯೋ ಅಥವಾ ನಿರ್ವಹಣೆಯ ಸಮಸ್ಯೆಯೇ ಎಂದು ಪರಿಶೀಲಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಯಾವುದೇ ನೀರು ಬರದಂತೆ ವಿಶೇಷ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೇಬಿ ಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಶ್ರೀವಿನಯ್ ಗುರೂಜಿ, ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಪಾದಂಗಳವರು, ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠದ ಡಾ.ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಗುಜರಾತ್‌ನ ಹಿಂದೂ ಧರ್ಮ ಆಚಾರ್ಯ ಸಭಾದ ಶ್ರೀ ಪರಮಾತ್ಮಾನಂದ ಸರಸ್ವತಿ ಸ್ವಾಮೀಜಿ, ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ವಿದ್ಯಾಶಂಕರ ಗುರೂಜಿ ಸಾನ್ನಿಧ್ಯ ವಹಿಸಿದ್ದರು.

ಸಚಿವರಾದ ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಸಿ.ಟಿ.ರವಿ, ಬಿ.ಸಿ.ನಾಗೇಶ್, ಭೈರತಿ ಬಸವರಾಜು, ಸಂಸದೆ ಸುಮಲತಾ ಅಂಬರೀಶ್, ಶಾಸಕರಾದ ಸಿ.ಎಸ್.ನಿರಂಜನ್ ಕುಮಾರ್, ಹರ್ಷವರ್ಧನ್, ಮಾಜಿ ಸಚಿವ ಬಿ.ಸೋಮಶೇಖರ್, ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್, ಮಾಜಿ ಶಾಸಕ ಡಿ.ಮಾದೇಗೌಡ, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು. ಸಿದ್ದಲಿಂಗಸ್ವಾಮಿ, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿ.ಪಂ. ಸಿಇಒ ಶಾಂತಾ ಎಲ್.ಹುಲ್ಮನಿ, ಉಪ ವಿಭಾಗಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಬಿಜೆಪಿ ಮುಖಂಡರಾದ ಡಾ.ಸಿದ್ದರಾಮಯ್ಯ, ಎಸ್.ಜೆ.ಅಶೋಕ್ ಜಯರಾಮ್, ಜಿ.ಪಂ. ಮಾಜಿ ಉಪಾಧ್ಯಕ್ಷ ಶೀಳನೆರೆ ಅಂಬರೀಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಹತ್ಯೆಗೊಳಗಾದ ಮಳವಳ್ಳಿ ಬಾಲಕಿ ಕುಟುಂಬಕ್ಕೆ ಹತ್ತು ಲಕ್ಷ ರೂ. ಪರಿಹಾರ

ತ್ರಿವೇಣಿ ಸಂಗಮ: ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಮೃತಪಟ್ಟ ಬಾಲಕಿಯ ಕುಟುಂಬದವರಿಗೆ 10 ಲಕ್ಷ ರೂ. ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಭಾನುವಾರ ಮಹಾಕುಂಭಮೇಳದ ಸಮಾರೋಪ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಳವಳ್ಳಿ ಘಟನೆ ಬಗ್ಗೆ ಎಲ್ಲರೂ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿ ಎಂದಿಗೂ ಇಂಥದ್ದು ನಡೆಯಬಾರದು. ಅತ್ಯಂತ ಅಮಾನುಷ ಕೃತ್ಯವಿದು. ಈಗಾಗಲೇ ಅಧಿಕಾರಿಗಳು ಕ್ರಮ ತೆಗೆದುಕೊಂಡು ಆರೋಪಿಯನ್ನು ಬಂಧಿಸಿದ್ದಾರೆ. ಎಲ್ಲಾ 302, 307, ಪೋಕ್ಸೋ ಸೆಕ್ಷನ್‌ಗಳನ್ನು ಹಾಕಿದ್ದಾರೆ. ನಮ್ಮ ಪೊಲೀಸ್ ಮಹಾನಿರ್ದೇಶಕರಿಗೆ ಅಂದೇ ಸೂಚನೆ ನೀಡಿ ಕೂಡಲೇ ತನಿಖೆಯಾಗಿ ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸಬೇಕೆಂದು ಸೂಚಿಸಿದ್ದೇನೆ ಎಂದರು.



ಮಂಡ್ಯ ತಾಲೂಕಿನ ಹುಲ್ಲುಕೆರೆ ಕೊಪ್ಪಲು ಗ್ರಾಮದಲ್ಲಿ ವಿದ್ಯುತ್ ಅದಾಲತ್ ಕಾರ್ಯಕ್ರಮ ಎಕ್ಸಿಕ್ಯೂಟಿವ್ ಇಂಜಿನಿಯರ್ ರುದ್ರೇಶ್ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಸ್ಥಳದಲ್ಲಿ ನೂರಕ್ಕೂ ಹೆಚ್ಚು ಗ್ರಾಮಸ್ಥರು ಹಾಜರಿದ್ದು ತಮ್ಮ ಕುಂದುಕೊರತೆಗಳನ್ನು ಮಂಡಿಸಿದರು. ನಂತರ ಸ್ಪಂದಿಸಿ ಸಮಸ್ಯೆಗಳನ್ನು ಪರಿಹರಿಸಿದರು.

ಮನುಷ್ಯ ನದಿಯಂತೆ ಸಾಗಬೇಕು: ಚುಂಚಶ್ರೀ



ತ್ರಿವೇಣಿ ಸಂಗಮ(ಮಂಡ್ಯ),ಅ.16– ಮನುಷ್ಯನಿಗೆ ಕಷ್ಟ ಬರುವುದು ಸಹಜ. ಕಷ್ಟದ ಸಮಯದಲ್ಲಿ ನಿಂತಲ್ಲೇ ನಿಲ್ಲದೆ ನದಿಯ ನೀರಿನಂತೆ ಮುಂದೆ ಸಾಗಿದರೆ ಕಷ್ಟ ಪರಿಹಾರವಾಗಲಿದೆ. ಮನುಷ್ಯ ಪಂಚಭೂತಗಳಿಂದ ನಿರ್ಮಾಣವಾಗಿದ್ದಾನೆ. ಹಾಗಾಗಿ ಪ್ರಕೃತಿಯನ್ನು ಪೂಜಿಸುತ್ತ ಬಂದಿದ್ದಾನೆ. ಪ್ರಕೃತಿಯನ್ನು ಪೂಜಿಸಿದರೆ ನಮ್ಮ ಬದುಕು ಸ್ವಚ್ಛವಾಗಿರುತ್ತದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಕೆ.ಆರ್.ಪೇಟೆ ತಾಲೂಕಿನ ತ್ರಿವೇಣಿ ಸಂಗಮದಲ್ಲಿ ಭಾನುವಾರ ಮುಕ್ತಾಯಗೊಂಡ ನಾಲ್ಕು ದಿನಗಳ ಮಹಾಕುಂಭಮೇಳದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಇಲ್ಲಿನ ಮೂರು ನದಿಗಳು ಕಣ್ಣಿಗೆ ಕಾಣುತ್ತವೆ. ಇದು ಪುಣ್ಯ ಕ್ಷೇತ್ರವಾಗಿದೆ. ಅತಿವೃಷ್ಟಿಯಾದರೂ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದರ ಹಿನ್ನೆಲೆ ಧಾರ್ಮಿಕತೆ, ಆಧ್ಯಾತ್ಮಿಕತೆ ಶಕ್ತಿಯಿಂದ ಭಕ್ತರು ಬಂದಿದ್ದಾರೆ. ಬೇರೆ, ಬೇರೆ ದೇಶಗಳಿಗೆ ಬೇರೆ, ಬೇರೆ ಶಕ್ತಿಯಾದರೆ, ಭಾರತಕ್ಕೆ ಆಧ್ಯಾತ್ಮಿಕತೆ, ಧಾರ್ಮಿಕತೆಯೇ ಶಕ್ತಿ. ಮಹಾದೇಶ್ವರರ ತಪೋಭೂಮಿ ಪುಣ್ಯಭೂಮಿಯಾಗಿದೆ ಎಂದರು.

ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಪಾದಶ್ರೀ ಮಾತನಾಡಿ, ಪ್ರಕೃತಿಯನ್ನು ಮಾತೆಯಂತೆ ಪೂಜಿಸುವುದು ನಮ್ಮ ಸಂಸ್ಕೃತಿ. ಅದು ಯಾವಾಗಲೂ ಜಾಗೃತವಾಗಿಟ್ಟುಕೊಳ್ಳಬೇಕು. ನೆಲ, ಜಲವನ್ನು ತಾಯಿಯಂತೆ ಪ್ರೀತಿಸಬೇಕು. ಶರೀರದ ಕೊಳೆ ಹೋಗುವಂತೆ ಮನದ ಕೊಳೆಯೂ ತೊಳೆದುಕೊಳ್ಳಬೇಕು. ಎಲ್ಲರೂ ಸಂತೋಷದಿಂದಿರಬೇಕು ಎಂದು ಬಯಸುತ್ತೇವೆ. ಬಡವರಿಗೆ ಸಹಾಯ ಮಾಡಲು ಸಮಾಜದಲ್ಲಿ ಎಲ್ಲರೂ ಸ್ಪಂದಿಸಬೇಕು. ಅವರ ಸಮಸ್ಯೆಗೆ ನಾವು ಉತ್ತರವಾಗಿರಬೇಕು. ತೀರ್ಥಕ್ಷೇತ್ರದಲ್ಲಿ ಮಿಂದು ಹೋಗುವಾಗ ತೀರ್ಥದ ಒಂದು ಗುಣವನ್ನು ಧಾರಣೆ ಮಾಡಿಕೊಂಡಾಗ ಸಾರ್ಥಕತೆ ಆಗಲಿದೆ ಎಂದು ಹೇಳಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಧರ್ಮ, ರಾಜಕಾರಣ, ಸಾರ್ವಜನಿಕರು ಸೇರಿರುವುದರಿಂದ ಸಭೆಯೂ ತ್ರಿವೇಣಿ ಸಂಗಮವಾಗಿದೆ. ಭಗವಂತನ ಕಡೆ ಮನಸು ಒಲಿದಾಗ ಮಾತ್ರ ಭಕ್ತಿ ಪ್ರಾಪ್ತಿ ಆಗುತ್ತದೆ. ಮಗು ತಾಯಿ ಮೇಲೆ ಹೇಗೆ ವಿಶ್ವಾಸವಿಡುತ್ತದೆಯೋ, ಹಾಗೆ ಭಕ್ತರು ಭಗವಂತನಲ್ಲಿ ವಿಶ್ವಾಸವಿಟ್ಟರೆ ತಾಯಿ ಮಗುವನ್ನು ಕಾಪಾಡುವಂತೆ ಭಗವಂತ ಭಕ್ತರನ್ನು ಕಾಪಾಡುತ್ತಾನೆ. ಪ್ರಕೃತಿಯನ್ನು ಭಗವಂತನ ಭಾವನೆಯಿಂದ ನೋಡುವುದು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬಂದಿದೆ ಎಂದು ಹೇಳಿದರು.

ಪಾಂಡವಪುರದಲ್ಲಿ ಮನೆ ಗೋಡೆ ಕುಸಿತ

ಪಾಂಡವಪುರ,ಅ–16– ತಾಲೂಕಿನಾದ್ಯಂತ ಕಳೆದ ರಾತ್ರಿ ಸುರಿದ ಭಾರೀ ಮಳೆಗೆ ವಿವಿಧ ಗ್ರಾಮಗಳಲ್ಲಿ ಹಲವು ಮನೆಗಳ ಗೋಡೆಗಳು ಕುಸಿತಗೊಂಡಿವೆ.



ಪಟ್ಟಣದ ಆನಂದ್ ಎಂಬುವರಿಗೆ ಸೇರಿದ ಮನೆಯ ಗೋಡೆ ಮಳೆಯಿಂದಾಗಿ ಕುಸಿದಿದ್ದು, ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ನಾಶವಾಗಿದೆ. ಆದರೆ, ಅದೃಷ್ಟವಶಾತ್ ಮನೆಯಲ್ಲಿದ್ದ ಯಾರಿಗೂ ತೊಂದರೆಯಾಗಿಲ್ಲ. ಮನೆಯ ಗೋಡೆಯ ಪಕ್ಕದಲ್ಲಿ ಪಕ್ಕದ ಮನೆಯ ಗೋಬಿ ಅಂಗಡಿ ಮಾಲೀಕರು ತಳ್ಳುವ ಗಾಡಿಯನ್ನು ನಿಲ್ಲಿಸಿದ್ದರು. ಕುಸಿದ ಗೋಡೆ ಗಾಡಿಯ ಮೇಲೆಬಿದ್ದು ಗಾಡಿಯೂ ಸಹ ಸಂಪೂರ್ಣವಾಗಿ ನಾಶವಾಗಿದೆ. ಘಟನೆಯಿಂದ ಮೂರ್‍ನಾಲ್ಕು ಲಕ್ಷ ರೂ. ನಷ್ಟ ಉಂಟಾಗಿದೆ. ಮನೆಯ ಗೋಡೆ ಕುಸಿತದಿಂದ ಕುಟುಂಬ ಸಾಕಷ್ಟು ತೊಂದರೆಗೆ ಸಿಲುಕಿದ್ದು ವಾಸಕ್ಕೂ ಮನೆ ಇಲ್ಲದಂತಾಗಿದೆ. ಹಾಗಾಗಿ ಸಂಬಂಧಪಟ್ಟ ಶಾಸಕರು, ಜಿಲ್ಲಾಧಿಕಾರಿಗಳು, ಪುರಸಭೆ ಅಧಿಕಾರಿ ಭೇಟಿಕೊಟ್ಟು ಸೂಕ್ತಪರಿಹಾರ ದೊರಕಿಸಿಕೊಡುವಂತೆ ಕುಟುಂಬಸ್ಥರು ಮನವಿ ಮಾಡಿದರು.

ತಾಲೂಕಿನ ಚಿಕ್ಕಬ್ಯಾಡರಹಳ್ಳಿ–ತಿರುಮಲಾಪುರ ಗ್ರಾಮದಲ್ಲಿ ಪುಟ್ಟಸ್ವಾಮಿ ಎಂಬುವರಿಗೆ ಸೇರಿದ ಮನೆಯ ಗೋಡೆ ಕುಸಿತಗೊಂಡಿದೆ. ಆದರೆ, ಅದೃಷ್ಟವಶಾತ್ ಯಾವುದೇ ತೊಂದರೆಗಳು ಸಂಭವಿಸಿಲ್ಲ. ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿಕೊಟ್ಟು ಪರಿಶೀಲನೆ ಮಾಡಿದ್ದಾರೆ.

ಭಾರೀ ಮಳೆಗೆ ಹುಣಸೂರಿನ ಹಲವು ಬಡಾವಣೆ ಜಲಾವೃತ

ಮಳೆ ಹಾನಿ ಪ್ರದೇಶಕ್ಕೆ ಡಿಸಿ, ಶಾಸಕರ ಭೇಟಿ; ಪರಿಶೀಲನೆ







ಹುಣಸೂರು, ಅ.16– ಭಾರೀ ಮಳೆಗೆ ನಗರದ ಹಲವು ಬಡಾವಣೆಗಳು ಜಲಾವೃತಗೊಂಡು ಅಪಾರ ನಷ್ಟ ಸಂಭವಿಸಿದೆ.

ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್, ಮಂಜುನಾಥ ಬಡಾವಣೆ, ನ್ಯೂ ಮಾರುತಿ ಬಡಾವಣೆ, ಸಾಕೇತ ಬಡಾವಣೆಗಳು ಮಳೆ ನೀರಿನಿಂದ ಜಲಾವೃತಗೊಂಡು, ಅಪಾರ ಹಾನಿ ಸಂಭವಿಸಿದೆ. ಈ ಹಿನ್ನೆಲೆಯಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್, ಡಿಸಿ ಡಾ.ಬಗಾದಿ ಗೌತಮ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಶನಿವಾರ ರಾತ್ರಿ ಸುರಿದ ಭಾರೀ ಮಳೆಗೆ ಹೌಸಿಂಗ್ ಬೋರ್ಡ್ ಕಾಲೋನಿಯ ತಗ್ಗು ಪ್ರದೇಶದ ನೂರಾರು ಮನೆಗಳಿಗೆ ನೀರು ನುಗ್ಗಿ ದಿನಬಳಕೆಯ ವಸ್ತುಗಳು, ಆಹಾರ ಪದಾರ್ಥ, ಬಟ್ಟೆ, ಪೀಠೋಪಕರಣಗಳು, ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲಿ ಮುಳುಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಅಲ್ಲದೇ ರಾತ್ರಿ ಇಡೀ ಕಾಲೋನಿಯ ಮಕ್ಕಳು, ಮಹಿಳೆಯರು, ಹಿರಿಯರು ಸೇರಿದಂತೆ ಜನತೆ ಮಳೆ ನೀರಿನಿಂದ ತೊಯ್ದರಲ್ಲದೇ ಮನೆಯಿಂದ ಹೊರಬಂದು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ನಿರಂತರ ಮಳೆಯಿಂದಾಗಿ ಇಲ್ಲಿನ ಅಯ್ಯಪ್ಪಸ್ವಾಮಿ ಬೆಟ್ಟದ ಕಡೆಯಿಂದ ಹರಿದು ಬರುವ ನೀರು ಗುರುಗಳ ಕಟ್ಟೆಗೆ ಬರುತ್ತದೆ. ಕಟ್ಟೆ ಬಹುತೇಕ ಒತ್ತುವಾರಿಯಾಗಿದ್ದು, ಹೆಚ್ಚುವರಿ ನೀರು ಹೌಸಿಂಗ್ ಬೋರ್ಡ್ ಕಾಲೋನಿಯ ತಗ್ಗು ಪ್ರದೇಶಗಳಿಗೆ ನುಗ್ಗುತ್ತಿದೆ. ಈ ಸಂಬಂಧ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಇಲ್ಲಿನ ನಿವಾಸಿಗಳು ಆರೋಪಿಸಿದರು.

ಅದೇ ರೀತಿ ಮಂಜುನಾಥ ಬಡಾವಣೆ, ಸಾಕೇತ ಬಡಾವಣೆ, ನ್ಯೂ ಮಾರುತಿ ಬಡಾವಣೆಗಳಿಗೂ ಮಳೆ ನೀರು ನುಗ್ಗಿ ನಷ್ಟ ಸಂಭವಿಸಿದೆ. ಜಲಾವೃತಗೊಂಡ ಪ್ರದೇಶಗಳಿಗೆ ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ ಪರಿಹಾರ ಕಾರ್ಯ ಕೈಗೊಂಡಿದ್ದಾರೆ. ಮಳೆ ಹಾನಿ ಪ್ರದೇಶಗಳಿಗೆ ಶಾಸಕ ಹೆಚ್.ಪಿ.ಮಂಜುನಾಥ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಸಿ ವಣೀತ್ ನೇಗಿ, ತಹಸೀಲ್ದಾರ್ ಡಾ. ಅಶೋಕ್ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೇ ಸ್ಥಳದಲ್ಲೇ ಕೆಲವರಿಗೆ ಪರಿಹಾರಧನ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಡಿಸಿ ಬಗಾದಿ ಗೌತಮ್, ಈ ಹಿಂದೆ ಮಳೆಯಿಂದ ಹಾನಿಗೊಳಗಾದವರಿಗೆ 3250 ರೂ. ಪರಿಹಾರ ನೀಡಲಾಗುತ್ತಿತ್ತು. ಶಾಸಕರ ಒತ್ತಾಯದ ಮೇರೆಗೆ 10 ಸಾವಿರ ರೂ. ಪರಿಹಾರ ಧನ ನೀಡಲಾಗುತ್ತಿದೆ. ಕೂಡಲೇ ಒತ್ತುವರಿ ತೆರವುಗೊಳಿಸಿ, ನೀರು ಸರಾಗವಾಗಿ ಹರಿದು ಹೋಗಲು ಚರಂಡಿ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ 3 ದಿನಗಳಿಂದ ಸುರಿದ ಭಾರೀ ಮಳೆಗೆ ಕಲ್ಕುಣಿಕೆ ಹೌಸಿಂಗ್ ಬೋರ್ಡ್, ಮಂಜುನಾಥ ಬಡಾವಣೆ, ಶಬ್ಬೀರ್ ನಗರ, ಲಾಲ್‌ಬಂದ್ ಬೀದಿ, ಬನ್ನಿಬೀದಿ, ಸಾಕೇತ ಬಡಾವಣೆ, ಮಾರುತಿ ಬಡಾವಣೆ, ಸರಸ್ವತಿಪುರಂ, ಸ್ಟೋರ್ ಬೀದಿ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ 43ಕ್ಕೂ ಹೆಚ್ಚು ಮನೆಗಳು ಸಂಪೂರ್ಣ ಹಾಳಾಗಿದ್ದು, 283 ಮನೆಗಳು ಭಾಗಶಃ ಹಾನಿ, 500ಕ್ಕೂ ಹೆಚ್ಚು ಮನೆ ಗಳಿಗೆ ನೀರು ನುಗ್ಗಿದೆ ಎಂದು ನಗರಸಭೆ ಕಂದಾಯ ನಿರೀಕ್ಷಕ ಸಿದ್ದರಾಜು ತಿಳಿಸಿದರು. ಇದೇ ವೇಳೆ ನಗರದ ಅರಣ್ಯ ಇಲಾಖೆ ಬಳಿ ನೆಲಕ್ಕುರುಳಿದ ಭಾರೀ ಗಾತ್ರದ ಮರವನ್ನು ತೆರವುಗೊಳಿಸಲಾಯಿತು.

ಈ ವೇಳೆ ನಗರಸಭಾ ಅಧ್ಯಕ್ಷೆ ಗೀತಾ, ಮಾಜಿ ಉಪಾಧ್ಯಕ್ಷ ದೇವನಾಯ್ಕ, ಸದಸ್ಯರಾದ ಸ್ವಾಮಿಗೌಡ, ರಘು, ಚಂದ್ರಶೇಖರ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್, ನಗರಸಭೆ ಪ್ರಭಾರ ಪೌರಾಯುಕ್ತೆ ರೂಪ, ಸಹಾಯಕ ಅಭಿಯಂತರರಾದ ಶರ್ಮಿಳಾ, ಆರೋಗ್ಯ ನಿರೀಕ್ಷಕರಾದ ಸತೀಶ್, ಶಶಿ, ಸಿಬ್ಬಂದಿಗಳಾದ ಕೃಷ್ಣೇಗೌಡ, ಮಹದೇವು ಸೇರಿದಂತೆ ಇನ್ನಿತರರಿದ್ದರು.

ಮನೆ ಗೋಡೆ ಕುಸಿತ



ಮೂಗೂರು, ಅ.16– ಕಳೆದ 3 ದಿನಗಳಿಂದ ಎಡೆಬಿಡದೆ ಸುರಿದ ಭಾರೀ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಮೂಗೂರು ಮೋಳೆ ಗ್ರಾಮದಲ್ಲಿ ಜರುಗಿದೆ.

ವಾಟಾಳು ಗ್ರಾ.ಪಂ ವ್ಯಾಪ್ತಿಯ ಮೂಗೂರು ಮೋಳೆ ಗ್ರಾಮದ ನಿವಾಸಿ ಸಿದ್ದಮ್ಮ ಎಂಬುವರ ಮನೆ ಭಾನುವಾರ ಮುಂಜಾನೆ ಕುಸಿದು ಬಿದ್ದಿದ್ದು, ಮನೆಯಲ್ಲಿದ್ದರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಲ್ಲಿ ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಗಿದ್ದು, ಸೂಕ್ತ ಪರಿಹಾರ ಕಲ್ಪಿಸುವಂತೆ ಅವರು ಮನವಿ ಮಾಡಿದ್ದಾರೆ.

ಶಾಲಾ ಹೆಚ್ಚುವರಿ ಕೊಠಡಿ ಕಾಮಗಾರಿಗೆ ಚಾಲನೆ



ಮೂಗೂರು, ಅ.16– ಗ್ರಾಮದ ಕೆಪಿಎಸ್ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಮೂಗೂರು ಗ್ರಾಮವನ್ನು ಶೈಕ್ಷಣಿಕವಾಗಿ ಪ್ರಗತಿಗೊಳಿಸುವ ಉದ್ದೇಶದಿಂದ ಈ ಶಾಲೆಯನ್ನು ಆಯ್ಕೆ ಮಾಡಲಾಗಿದ್ದು, ಈ ಶಾಲೆಯ ಶಿಥಿಲ ಕಟ್ಟಡಗಳನ್ನು ಕೆಡವಿ 11 ಕೊಠಡಿಗಳನ್ನು ನಿರ್ಮಿಸಲಾಗುವುದು ಎಂದ ಅವರು, 3 ಕೋಟಿ ರೂ. ವೆಚ್ಚದಲ್ಲಿ ಮೂಗೂರು ಪೊಲೀಸ್ ಠಾಣೆಯಿಂದ ವಾಟಾಳುಪುರದ ಕಾಲುವೆವರೆಗೆ ಜನತೆಯ ಆಶೋತ್ತರಗಳಿಗೆ ಪೂರಕವಾಗಿ ರಸ್ತೆ ಅಭಿವೃದ್ಧಿಪಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಎಸ್‌ಡಿಎಂಸಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಎಂ.ಕೆ.ಸಿದ್ದರಾಜು, ಪ್ರಾಂಶುಪಾಲೆ ರಾಜಶ್ರೀ, ಗೌಡರ ಜಗದೀಶ್ ಮೂರ್ತಿ, ಎಂ.ಚಂದ್ರಶೇಖರ್, ಎಂ.ಆರ್. ಸುಂದರ್, ಎಂ.ಎಂ.ಜಗದೀಶ್, ನಾಗೇಂದ್ರ, ಶಿವಮೂರ್ತಿ, ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಜಯಪಾಲ ಭರಣಿ, ರಮೇಶ್, ಎಂ.ಆರ್. ಸೋಮಣ್ಣ, ಎಂ.ಎಂ.ಬಸವಣ್ಣ ಸೇರಿದಂತೆ ಮತ್ತಿತರರಿದ್ದರು.

ಜಿಲ್ಲಾ ಮಟ್ಟದ 14 ವರ್ಷದೊಳಗಿನ ಬಾಲಕರ ಕಬಡ್ಡಿ ಪಂದ್ಯಾವಳಿ

ಮೈಸೂರು ತಂಡದ ವಿರುದ್ಧ ಹೆಚ್.ಡಿ.ಕೋಟೆಗೆ ಭರ್ಜರಿ ಜಯ



ಮೈಸೂರು, ಅ.16– ಹೂಟಗಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ 14 ವರ್ಷದೊಳಗಿನ ಬಾಲಕರ ಕಬಡ್ಡಿ ಪಂದ್ಯಾವಳಿ ಫೈನಲ್ ಪಂದ್ಯದಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಬಾಲಕರ ತಂಡವು ಮೈಸೂರು ಉತ್ತರ ತಂಡದ ವಿರುದ್ಧ 52–16 ಅಂತರದಲ್ಲಿ ಭರ್ಜರಿ ಜಯ ದಾಖಲಿಸಿದೆ.

ಲೀಗ್ ಹಾಗೂ ಸೆಮಿಫೈನಲ್‌ನಲ್ಲಿ ಕ್ರಮವಾಗಿ ಪಿರಿಯಾಪಟ್ಟಣ ಹಾಗೂ ಕೆ.ಆರ್.ನಗರ ತಂಡಗಳ ವಿರುದ್ಧ ಹೆಚ್ಚಿನ ಅಂತರದಲ್ಲಿ ಗೆದ್ದ ಹೆಚ್.ಡಿ.ಕೋಟೆ ಬಾಲಕರ ತಂಡ ಫೈನಲ್ ಪಂದ್ಯದಲ್ಲೂ ಗೆಲ್ಲುವ ಮೂಲಕ ಚಾಂಪಿಯನ್ ಆಗಿ ಹೊರಹೊಮ್ಮಿತು. ಮೈಸೂರಿನ ಎಲ್ಲಾ ತಾಲೂಕಿನ 9 ತಂಡಗಳು ಭಾಗವಹಿಸಿ ತಮ್ಮದೇ ಆದ ಶೈಲಿಯಲ್ಲಿ ಆಟವಾಡಿದವು. ಕೋಟೆ ತಾಲೂಕಿನ ಬಿಜಿಎಸ್ ಶಾಲೆಯ ನಾಲ್ವರು, ಸ.ಹಿ.ಪ್ರಾ ಶಾಲೆ ಕೊಳ್ಳೇಗಾಲದ ಇಬ್ಬರು, ತಾರಕ ವಿದ್ಯಾ ಸಂಸ್ಥೆಯ ಓರ್ವ ಹಾಗೂ ಮೈಸೂರು ಉತ್ತರ ತಂಡದ ಐವರು ಮಕ್ಕಳು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದು, ವಿದ್ಯಾರ್ಥಿಗಳ ಸಾಧನೆಗೆ ಈ ಮೂರು ಶಾಲೆಗಳ ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಪೋಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಶಂಖಹಳ್ಳಿಯಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮ



ಸರಗೂರು, ಅ.16– ತಾಲೂಕಿನ ಶಂಖಹಳ್ಳಿ ಗ್ರಾಮದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ' ಕಾರ್ಯಕ್ರಮವನ್ನು ತಹಸೀಲ್ದಾರ್ ಚಲುವರಾಜು ಉದ್ಘಾಟಿಸಿದರು.

ಗ್ರಾಮದ ಮುಖಂಡ ನಂಜಪ್ಪ ಮಾತನಾಡಿ, ಗ್ರಾಮದಲ್ಲಿ ಸ್ಮಶಾನವಿಲ್ಲದ ಕಾರಣ ನಿಧನರಾದವರ ಅಂತ್ಯಕ್ರಿಯೆಗೆ ತೊಂದರೆಯಾಗಿದೆ. ಹೀಗಾಗಿ ಕೂಡಲೇ ಸ್ಮಶಾನಕ್ಕೆ ಜಾಗ ಮಂಜೂರು ಮಾಡಿಕೊಡಬೇಕು. ಗ್ರಾಮದ ಶಾಲೆಗೆ ಹೆಚ್ಚುವರಿ ಕೊಠಡಿ ಅವಶ್ಯಕತೆ ಇದ್ದು, ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕೆ ಮುಂದಾಗಬೇಕು. ಶಂಖಹಳ್ಳಿ ಹೊಸ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ, ರಸ್ತೆ ಅಭಿವೃದ್ಧಿಗೊಳಿಸಬೇಕು. , ಸರಗೂರು ಪೊಲೀಸ್ ಠಾಣೆ ಗ್ರಾಮದಿಂದ 30 ಕಿ.ಮೀ ಇರುವುದರಿಂದ 3 ಕಿ.ಮೀ ಇರುವ ಹಂಪಾಪುರ ಠಾಣೆಯಲ್ಲಿ ಗ್ರಾಮಸ್ಥರು ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲು ಅನುವು ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ತಹಸೀಲ್ದಾರ್ ಚಲುವರಾಜು ಮಾತನಾಡಿ, ಕಚೇರಿಗಳಿಗೆ ಗ್ರಾಮಸ್ಥರು ಅಲೆಯಬಾರದೆಂದು 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮವನ್ನು ಪ್ರತಿ ತಿಂಗಳ 3ನೇ ಶನಿವಾರ ಆಯ್ದ ಗ್ರಾಮಗಳಲ್ಲಿ ನಡೆಸಲಾಗುತ್ತಿದೆ. ಇಂದಿನ ಕಾರ್ಯಕ್ರಮದಲ್ಲೂ ಹಲವು ಅರ್ಜಿಗಳು ಬಂದಿದ್ದು, ಅಧಿಕಾರಿಗಳು ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಸಾಗುವಳಿ, ಪೌತಿ ಖಾತೆ, ಪಿಂಚಣಿ, ಅಂಗನವಾಡಿ ಸಮಸ್ಯೆ ಸೇರಿದಂತೆ ಇನ್ನಿತರ ಸಮಸ್ಯೆಗಳು ಕೇಳಿಬಂದವು. ಸ್ಥಳದಲ್ಲಿದ್ದ ಇಲಾಖಾಧಿಕಾರಿಗಳು ಸ್ಥಳದಲ್ಲೇ ಹಲವು ಸಮಸ್ಯೆಗಳನ್ನು ಬಗೆಹರಿಸಿದರು. ಇನ್ನು ಕೆಲವು ಸಮಸ್ಯೆ ಪರಿಹಾರಕ್ಕಾಗಿ ಗಡುವು ಪಡೆದುಕೊಂಡರು.

ಇದೇ ವೇಳೆ ತಹಸೀಲ್ದಾರ್ ಚಲುವರಾಜು ಗ್ರಾಮದ ಕಪಿಲಾ ನದಿ ಸೇತುವೆ ಬಳಿ ಸ್ಮಶಾನಕ್ಕಾಗಿ ಸರ್ಕಾರಿ ಜಾಗ ಪರಿಶೀಲನೆ ನಡೆಸಿದರು. ಅಲ್ಲದೇ ಗ್ರಾಮದ ಸರ್ಕಾರಿ ಶಾಲೆ, ರಸ್ತೆಗಳು, ಅಂಗನವಾಡಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಈ ವೇಳೆ ಇಓ ಸುಷ್ಮ, ಎಇಇ ಉಷಾ, ಪಶು ಇಲಾಖೆ ಉಪ ನಿರ್ದೇಶಕ ವೈ.ಡಿ. ರಾಜಣ್ಣ, ಕಂದಾಯ ಇಲಾಖಾಧಿಕಾರಿ ಸುನೀಲ್, ಗುರುರಾಜು, ಮುಜೀಫ್, ಎಪಿಎಂಸಿ ಕಾರ್ಯದರ್ಶಿ ವಸಂತ ಕುಮಾರ್, ಪಿಡಿಓ ನಾಗರಾಜು, ಗೌಡಿಕೆ ರಾಜಪ್ಪ, ಮಹದೇವಪ್ಪ, ಯಜಮಾನರಾದ ತಿಮ್ಮನಾಯಕ, ಸಣ್ಣತಿಮ್ಮನಾಯಕ, ಶೇಷನಾಯಕ, ಕೆ.ಬೆಳತ್ತೂರು ಗ್ರಾಪಂ ಅಧ್ಯಕ್ಷ ಕೃಷ್ಣಮೂರ್ತಿ, ಉಪಾಧ್ಯಕ್ಷ ಮಂಜುಳಾ, ಸದಸ್ಯರಾದ ಪ್ರೀತಿ, ವರದನಾಯಕ, ಲಕ್ಷ್ಮಿ, ವಿಶಾಲಕ್ಷಿ, ರತ್ನ, ಮಹದೇವಮ್ಮ, ಸವಿತಾ, ರವಿನಂದನ್, ಶಿವಶಂಕರ್, ಚಿಕ್ಕಕಾಳನಾಯಕ, ರುದ್ರಯ್ಯ, ಭರತ್, ರತ್ನಮ್ಮ, ನಾಗರಾಜು, ಕೆಂಡಗಣ್ಣ, ಲಕ್ಷ್ಮಿ, ಜ್ಯೋತಿ, ಮುಖಂಡರಾದ ಗಿರಿನಾಯಕ, ಬೆಟ್ಟನಾಯ, ಶಿವಣ್ಣ, ಸಿದ್ದನಾಯಕ, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ರಾಮು, ಮುಖ್ಯ ಶಿಕ್ಷರಾದ ಮಮತ, ಕಲ್ಪನಾ, ಅಂಗನವಾಡಿ ಕಾರ್ಯಕರ್ತೆ ಜ್ಯೋತಿ ಇತರರಿದ್ದರು.

ಚಿರತೆ ದಾಳಿಗೆ ಹಸು ಬಲಿ

ಮಲ್ಕುಂಡಿ, ಅ.16– ಚಿರತೆ ದಾಳಿಗೆ ಹಸು ಬಲಿಯಾಗಿರುವ ಘಟನೆ ಸಮೀಪದ ಕಗ್ಗಲೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ನಾಗಶೆಟ್ಟಿ ಎಂಬುವರ ಹಸು ಚಿರತೆ ದಾಳಿಗೆ ಬಲಿಯಾಗಿರುವುದು. ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುವಿನ ಮೇಲೆ ಶನಿವಾರ ರಾತ್ರಿ ದಾಳಿ ಮಾಡಿರುವ ಚಿರತೆ ಅರೆಬರೆ ತಿಂದು ಪರಾರಿಯಾಗಿದೆ. ಭಾನುವಾರ ಬೆಳಗ್ಗೆ ನಾಗಶೆಟ್ಟಿ ಅವರು ಕೊಟ್ಟಿಗೆಗೆ ಹೋದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ ಹಸು ಮಾಲೀಕ ನಾಗಶೆಟ್ಟಿ ಮಾತನಾಡಿ, ಚಿರತೆ ದಾಳಿಯಿಂದ ಗ್ರಾಮದ ಜನತೆ ಭಯಗೊಂಡಿದ್ದಾರೆ. ಕಷ್ಟಪಟ್ಟು ಸಾಕಿದ ಪ್ರಾಣಿಗಳು ಕಾಡುಪ್ರಾಣಿಗಳ ಪಾಲಾಗುತ್ತಿದ್ದು, ರೈತರು ಬದುಕುವುದೇ ಕಷ್ಟವಾಗುತ್ತದೆ. ಹೀಗಾಗಿ ಅರಣ್ಯಾಧಿಕಾರಿಗಳು ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.



ಇಂದು ತಲಕಾವೇರಿಯಲ್ಲಿ ತೀರ್ಥೋದ್ಭವ

ಸಿಂಗಾರಗೊಂಡಿರುವ ಭಾಗಮಂಡಲ, ತಲಕಾವೇರಿ ಕ್ಷೇತ್ರ

ಮಡಿಕೇರಿ,ಅ.16– ಪವಿತ್ರ ತಲಕಾವೇರಿ ತೀರ್ಥೋದ್ಭವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಜಾತ್ರೆಗೆ ಸಂಪೂರ್ಣ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸೋಮವಾರ (ಅ.17) ರಾತ್ರಿ ಕಾವೇರಿ ತೀರ್ಥೋದ್ಭವವಾಗಲಿದ್ದು, ಭಾಗಮಂಡಲದ ಶ್ರೀ ಭಗಂಡೇಶ್ವರ ಸನ್ನಿಧಿ ಹಾಗೂ ಶ್ರೀ ತಲಕಾವೇರಿ ಕ್ಷೇತ್ರಗಳನ್ನು ಬಣ್ಣಬಣ್ಣದ ಹೂವು ಹಾಗೂ ವಿದ್ಯುತ್ ಬೆಳಕಿನ ಮೂಲಕ ಸಿಂಗರಿಸಲಾಗಿದೆ.



ರಾತ್ರಿ 7.21ಕ್ಕೆ ತೀರ್ಥ ರೂಪಿಣಿ ದರ್ಶನ

ಸಪ್ತ ಋಷಿಗಳ ತಪೋಭೂಮಿ ತಲಕಾವೇರಿಯ ಪವಿತ್ರ ಕುಂಡಿಕೆಯಲ್ಲಿ ಮಾತೇ ಕಾವೇರಿ ತೀರ್ಥ ರೂಪಿಣಿಯಾಗಿ ತನ್ನ ಭಕ್ತರಿಗೆ ದರ್ಶನ ನೀಡಲಿದ್ದಾಳೆ. ಅ.17ರ ರಾತ್ರಿ 7 ಗಂಟೆ 21 ನಿಮಿಷಕ್ಕೆ ಸಲ್ಲುವ ಮೇಷ ಲಗ್ನದಲ್ಲಿ ಶ್ರೀ ಮೂಲ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವದ ಪುಣ್ಯ ಕಾಲ ನೆರವೇರಲಿದೆ. ಸಹಸ್ರ ಭಕ್ತರ ಹರ್ಷೋದ್ಗಾರದ ನಡುವೆ ಕಾವೇರಿ ಸಂಕ್ರಮಣ ಜಾತ್ರೆ ನಡೆಯಲಿದೆ.

ತೀರ್ಥೋದ್ಭವದ ಸಂದರ್ಭ ಭಕ್ತರು ಕೊಳಕ್ಕೆ ಧುಮುಕಲು ಪ್ರಯತ್ನಿಸುವುದು ಸಹಜವಾಗಿದ್ದು, ತಲಕಾವೇರಿ ದೇವಾಲಯದ ಪ್ರವೇಶ ದ್ವಾರದಲ್ಲಿ ಭಕ್ತರನ್ನು ನಿಯಂತ್ರಿಸಲು ಸಾಧ್ಯವಾಗುವಂತೆ ಬ್ಯಾರಿಕೇಡ್ ಮತ್ತು ಬಿದಿರನ್ನು ಬಳಸಿ ತಾತ್ಕಾಲಿಕ ತಡೆ ವ್ಯವಸ್ಥೆ ಮಾಡಲಾಗಿದೆ. ಆಯಕಟ್ಟಿನ ಸ್ಥಳಗಳು ಮತ್ತು ಭಾಗಮಂಡಲ, ತಲಕಾವೇರಿ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹೆಚ್ಚುವರಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ.

ಇನ್ನು ಭಾಗಮಂಡಲದಲ್ಲಿ ಪಿಂಡ ಪ್ರದಾನ, ಕೇಶ ಮುಂಡನಕ್ಕೆ ಪ್ರತ್ಯೇಕ ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಪುಣ್ಯ ಸ್ನಾನಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ ಈಗಾಗಲೇ ತ್ರಿವೇಣಿ ಸಂಗಮದಲ್ಲಿ ಮರಳು ಮಿಶ್ರಿತ ಹೂಳನ್ನು ತೆಗೆಯಲಾಗಿದ್ದು, ಸೇತುವೆ ಬಳಿ ಮರದ ಹಲಗೆಗಳನ್ನು ಬಳಸಿ ನೀರನ್ನು ತಡೆ ಹಿಡಿಯಲಾಗಿದೆ. ಭಾಗಮಂಡಲದಿಂದ ತಲಕಾವೇರಿವರೆಗಿನ 8 ಕಿ.ಮೀ ರಸ್ತೆ ಉದ್ದಕ್ಕೂ ವಿದ್ಯುತ್ ಬೆಳಕಿನ ವ್ಯವಸ್ಥೆ ಮಾಡಲಾಗಿದ್ದು, ನಡೆದುಕೊಂಡು ಕ್ಷೇತ್ರಕ್ಕೆ ಬರುವ ಭಕ್ತರಿಗೆ ಅನುಕೂಲವಾಗಲಿದೆ. ರಸ್ತೆ ಬದಿಯಲ್ಲಿ ಬೆಳೆದಿದ್ದ ಕುರುಚಲು ಕಾಡುಗಳನ್ನು ತೆರವು ಮಾಡಲಾಗಿದ್ದು, ದಟ್ಟ ಮಂಜು ಮುಸುಕುವ ವಾತಾವರಣದ ನಡುವೆ ವಾಹನ ಸವಾರರು ಸಂಚರಿಸಲು ಅನುಕೂಲ ಕಲ್ಪಿಸಲಾಗಿದೆ. ಕ್ಷೇತ್ರಕ್ಕೆ ಬರುವ ಭಕ್ತರಿಗೆ ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.

ಎಲ್ಲರಿಗೂ ಮುಕ್ತ ಅವಕಾಶ: ಕಳೆದ 3 ವರ್ಷಗಳಿಂದ ಪ್ರಾಕೃತಿಕ ವಿಕೋಪ, ಕೋವಿಡ್ ಮತ್ತಿತರ ಕಾರಣಗಳಿಂದ ತಲಕಾವೇರಿ ಜಾತ್ರೆಗೆ ಕೆಲವೊಂದು ನಿರ್ಬಂಧಗಳನ್ನು ಹೇರಲಾಗಿತ್ತು. ಆದರೆ ಈ ಬಾರಿ ಎಲ್ಲರಿಗೂ ಮುಕ್ತ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದರು. ಪವಿತ್ರ ಕೊಳದಲ್ಲಿ ತೀರ್ಥ ಸ್ನಾನಕ್ಕೂ ಅವಕಾಶವಿದೆ. ಈಗಾಗಲೇ ಕಾವೇರಿ ನೀರಾವರಿ ನಿಗಮ 60 ಲಕ್ಷ ರೂ.ಗಳನ್ನು ಜಾತ್ರೆಗೆ ಬಿಡುಗಡೆ ಮಾಡಿದೆ. ಭಕ್ತರ ಅನುಕೂಲಕ್ಕಾಗಿ ಭಾಗಮಂಡಲದಿಂದ ತಲಕಾವೇರಿಗೆ ನಿರಂತರ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆಯೂ ಇರಲಿದ್ದು, ಈ ಬಾರಿಯ ತೀರ್ಥೋದ್ಭವಕ್ಕೆ 25 ಸಾವಿರ ಮಂದಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ ಎಂದು ಹೇಳಿದರು. ರಾತ್ರಿ ವೇಳೆ ಮಳೆ ಸುರಿಯುವ ಸಾಧ್ಯತೆ ಇರುವ ಕಾರಣ ಭಾಗಮಂಡಲದಲ್ಲಿ 1 ಎನ್‌ಡಿಆರ್‌ಎಫ್ ತಂಡ, ನುರಿತ ಈಜುಗಾರರನ್ನು ಕರ್ತವ್ಯಕ್ಕೆ ನಿಯೋಜಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಗಣ್ಯರ ಉಪಸ್ಥಿತಿ: ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಕೆ.ಜಿ. ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್. ಬೋಜೇಗೌಡ, ಆಯನೂರು ಮಂಜುನಾಥ್, ಸಂಸದ ಪ್ರತಾಪ್ ಸಿಂಹ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ, ಉಪವಿಭಾಗಾಧಿಕಾರಿ ಡಾ. ಯತೀಶ್ ಉಲ್ಲಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಮಡಿಕೇರಿ ತಹಶೀಲ್ದಾರ್ ಪಿ.ಎಸ್. ಮಹೇಶ್, ಭಗಂಡೇಶ್ವರ–ತಲಕಾವೇರಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ. ಕೃಷ್ಣಪ್ಪ, ಭಾಗಮಂಡಲ ಗ್ರಾ.ಪಂ. ಅಧ್ಯಕ್ಷೆ ಪೆಮಿತ, ಉಪಾಧ್ಯಕ್ಷ ಹೊಸೂರು ಸತೀಶ್ ಕುಮಾರ್, ದೇವಾಲಯ ತಕ್ಕ ಮುಖ್ಯಸ್ಥರು ಪಾಲ್ಗೊಳ್ಳಲಿದ್ದಾರೆ.

ಪೆಟ್ರೋಲ್ ಬಾಂಬ್ ಸ್ಫೋಟಿಸುವ ಆಡಿಯೋ ವೈರಲ್ ಪ್ರಕರಣ

ನಗರಸಭಾ ಸದಸ್ಯ ಸೇರಿ ಇಬ್ಬರಿಗೆ ಜಾಮೀನು



ಮುಸ್ತಾಫ



ಅಬ್ದುಲ್ಲ

ಮಡಿಕೇರಿ,ಅ.16– ಮಡಿಕೇರಿ ಸೇರಿದಂತೆ ಕೊಡಗಿನ ವಿವಿಧೆಡೆ ಪೆಟ್ರೋಲ್ ಬಾಂಬ್ ಸ್ಫೋಟಿಸುವ ಆಡಿಯೋ ವೈರಲ್ ಪ್ರಕರಣದ ಇಬ್ಬರು ಆರೋಪಿಗಳಿಗೆ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಇಬ್ಬರು ಆರೋಪಿಗಳನ್ನು ಪೊಲೀಸರು ಭಾನುವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ತದನಂತರ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಬಳಿಕ ನ್ಯಾಯಾಲಯ ಇಬ್ಬರು ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿದೆ.

ಜೆಡಿಎಸ್‌ನ ಮಡಿಕೇರಿ ನಗರಸಭಾ ಸದಸ್ಯ ಮುಸ್ತಾಫ ಅಲಿಯಾಸ್ ಮುಸ್ತು ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಬೆಟ್ಟಗೇರಿಯ ಅಬ್ದುಲ್ಲ ಎಂಬ ಇಬ್ಬರು ಆರೋಪಿಗಳು ವಿವಿಧ ಸೆಕ್ಷನ್ 153, 153ಎ, 505/2 ಅಡಿ ಪ್ರಕರಣ ದಾಖಲಿಸಿ ಜೈಲಿಗೆ ತಳ್ಳಲಾಗಿತ್ತು. ಈ ಪೆಟ್ರೋಲ್ ಬಾಂಬ್ ಮೊಬೈಲ್ ಮಾತುಕತೆ ಪ್ರಕರಣದಲ್ಲಿ ಬೆಟ್ಟಗೇರಿ ನಿವಾಸಿ ಅಬ್ದುಲ್ಲ ಎಂಬಾತ ಪ್ರಮುಖ ಆರೋಪಿಯಾಗಿದ್ದು, ಜೆಡಿಎಸ್ ನಗರಸಭಾ ಸದಸ್ಯ ಮುಸ್ತಾಫ 2ನೇ ಆರೋಪಿಯಾಗಿದ್ದಾನೆ.

ಗಂಭೀರವಾಗಿ ಪರಿಗಣನೆ: ಈ ಪ್ರಕರಣವನ್ನು ರಾಜ್ಯ ಸರಕಾರ ಮತ್ತು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಘಟನೆಯ ಕುರಿತು ಎನ್‌ಐಎಗೂ ಮಾಹಿತಿ ನೀಡಿರುವುದಾಗಿ ಶಾಸಕ ಕೆ.ಜಿ. ಬೋಪಯ್ಯ ಮಾಹಿತಿ ನೀಡಿದ್ದಾರೆ. ಭಾಗಮಂಡಲದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಪೆಟ್ರೋಲ್ ಬಾಂಬ್ ಆಡಿಯೋ ವೈರಲ್ ಪ್ರಕರಣದಲ್ಲಿ ಅವರ ಮನಸ್ಥಿತಿ ಆಶ್ಚರ್ಯ ಮತ್ತು ಆತಂಕವನ್ನು ಉಂಟುಮಾಡಿದೆ. ಕೊಡಗಿನಲ್ಲಿ ಪಿಎಫ್‌ಐ ಹಾಗೂ ದೇಶದ್ರೋಹಿ ಶಕ್ತಿಗಳು ಈ ಹಿಂದಿನಿಂದಲೂ ಚಟುವಟಿಕೆಯಲ್ಲಿವೆ ಎಂಬ ಸುದ್ದಿ ಇತ್ತು. ಇದರ ಹಿಂದೆ ಕೇರಳದೊಂದಿಗೆ ನಂಟಿರುವ ದೊಡ್ಡ ಶಕ್ತಿಗಳು ಇರಬಹುದು, ಹೀಗಾಗಿ ಉನ್ನತ ಮಟ್ಟದ ತನಿಖೆಯಾಗಬೇಕೆಂದು ಬೋಪಯ್ಯ ಒತ್ತಾಯಿಸಿದರು.

ಸುದ್ದಿ ತಿರುಚಲಾಗಿದೆ: ಈ ಘಟನೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ. ಗಣೇಶ್, ಆಡಿಯೋ ಸಂಭಾಷಣೆ ಕುರಿತು ತನಿಖೆಯಾಗಬೇಕು. 5 ತಿಂಗಳ ಹಿಂದಿನ ಘಟನೆ ಇಂದು ವೈರಲ್ ಆಗಿರುವ ಬಗ್ಗೆ ಸಾಕಷ್ಟು ಸಂಶಯಗಳಿವೆ. ಹೀಗಾಗಿ ದೂರುದಾರರನ್ನು ಕೂಡ ವಿಚಾರಣೆಗೆ ಒಳಪಡಿಸಬೇಕು ಎಂದು ಪೊಲೀಸ್ ಇಲಾಖೆಯನ್ನು ಆಗ್ರಹಿಸಿದ್ದಾರೆ. ಈ ಆಡಿಯೋ ವೈರಲ್ ಪ್ರಕರಣದ ಕುರಿತು ಜೆಡಿಎಸ್ ವರಿಷ್ಠರು ಹಾಗೂ ರಾಜ್ಯಾಧ್ಯಕ್ಷರ ಗಮನಕ್ಕೆ ತರಲಾಗಿದೆ. ಹೈಕಮಾಂಡ್ ಏನು ನಿರ್ಧಾರ ತೆಗೆದುಕೊಳ್ಳುತ್ತದೆಯೋ ಅದಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ ಎಂದರು.

ಇಂದು ಮದ್ಯ ಮಾರಾಟ ನಿಷೇಧ

ಮಡಿಕೇರಿ, ಅ.16– ತಲಕಾವೇರಿ ತೀರ್ಥೋದ್ಭವದ ಸಂಬಂಧ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಅ.17ರ ಬೆಳಗ್ಗೆ 6 ಗಂಟೆಯಿಂದ ಅ.18 ರ ಮಧ್ಯ ರಾತ್ರಿ 12 ಗಂಟೆಯವರೆಗೆ ತಲಕಾವೇರಿ, ಭಾಗಮಂಡಲ ಪಟ್ಟಣ ಮತ್ತು ಚೇರಂಬಾಣೆ ಗ್ರಾಮದ ಸುತ್ತಮುತ್ತ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ.

ಹಾತೂರು ಯೋಗ ಕೇಂದ್ರ ಕಟ್ಟಡ ಕಾಮಗಾರಿ ಕಳಪೆ

ಕಟ್ಟಡ ಕೆಡವಿ ಮರು ನಿರ್ಮಾಣ ಕಾಮಗಾರಿ ಆರಂಭ



ಗೋಣಿಕೊಪ್ಪ, ಅ.16– ಕಳಪೆ ಗುಣಮಟ್ಟದಿಂದ ಕೂಡಿದ್ದ ಹಾತೂರು ಯೋಗ ಕೇಂದ್ರ ಕಟ್ಟಡವನ್ನು ಕೆಡವಿ ಮರು ನಿರ್ಮಾಣ ಕಾಮಗಾರಿ ನಡೆಸಲು ಮುಂದಾಗಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಡುವಂತಾಗಿದೆ.

ಹೋರಾಟಕ್ಕೆ ಮಣಿದು ಕಟ್ಟಡದ ಮರು ನಿರ್ಮಾಣ ಕಾಮಗಾರಿ 5 ದಿನಗಳಿಂದ ಆರಂಭಿಸಲಾಗಿದೆ. ಅಡಿಪಾಯ ಹೊರತುಪಡಿಸಿ ಮುಖ್ಯ ಕಂಬ, ಗೋಡೆ ಎಲ್ಲವೂ ಹೊಸದಾಗಿ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

ಹಾತೂರು ಗ್ರಾಮದಲ್ಲಿ ಆರೋಗ್ಯ ಇಲಾಖೆ ವತಿಯಿಂದ ನಿರ್ಮಿಸುತ್ತಿದ್ದ ಯೋಗ ಕೇಂದ್ರ ಕಟ್ಟಡ ತೀರಾ ಕಳಪೆಯಾಗಿದ್ದು, ಕಾಮಗಾರಿಯನ್ನು ತಕ್ಷಣ ತಡೆಹಿಡಿಯುವಂತೆ ಗ್ರಾಮಸ್ಥರು ಒತ್ತಾಯಿಸಿದ್ದರು. ಸುಮಾರು 4 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸುತ್ತಿದ್ದ ಕಟ್ಟಡ, ಕಳಪೆ ಗುಣಮಟ್ಟ ಹೊಂದಿದೆ. ಗುಣಮಟ್ಟ ಪರಿಶೀಲನೆಗೆ ಕ್ರಮಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದರು.

27 ಚದರ ಮೀಟರ್ ಸುತ್ತಳತೆಯ ಕಟ್ಟಡದ ಅಡಿಪಾಯವನ್ನು ಒಂದೇ ದಿನ ಕಟ್ಟಲಾಗಿದೆ. ತರಾತುರಿಯಲ್ಲಿ ನಿರ್ಮಿಸಿರುವ ಕಂಬದಲ್ಲಿ 9ಕ್ಕೂ ಹೆಚ್ಚು ಬಿರುಕುಗಳಿವೆ. ಗೋಡೆ ಮುಟ್ಟಿದ ತಕ್ಷಣ ಕುಸಿಯುತ್ತಿದೆ. ಒಳಭಾಗದ ನೆಲದಲ್ಲಿರುವ ಮರದ ಬುಡವನ್ನು ತೆಗೆಯದೆ ನೆಲಹಾಸು ಹಾಕಲು ಮುಂದಾಗಿದ್ದಕ್ಕೆ ಆಕ್ಷೇಪ ವ್ಯಕ್ತವಾಗಿತ್ತು.

ಸ್ಥಳೀಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಳಪೆ ಗುಣಮಟ್ಟದ ಕಟ್ಟಡ ಎಂದು ಲಿಖಿತವಾಗಿ ಆರೋಗ್ಯ ಇಲಾಖೆಗೆ ತಿಳಿಸಿದ್ದಾರೆ. ಕಟ್ಟಡ ನಿರ್ಮಾಣಕ್ಕೆ ತಡೆ ಹಿಡಿಯಬೇಕೆಂದು ಗ್ರಾಮಸ್ಥರಾದ ಕೇಳಪಂಡ ರಾಕೇಶ್ ಅಪ್ಪಯ್ಯ, ಕೊಕ್ಕಂಡ ಗಿಣಿ ಗಣಪತಿ, ಪ್ರಮುಖರಾದ ಪುಲಿಯಂಡ ರೋಶನ್ ಕಳಪ್ಪ, ಕೊಂಗಾಂಡ ಎಸ್. ದೇವಯ್ಯ, ವಿನೇಶ್ ಒತ್ತಾಯಿಸಿದ್ದರು. ಇದೀಗ ಮರು ನಿರ್ಮಾಣ ನಡೆಯುತ್ತಿದೆ.

ಕಾಡಾನೆ ದಾಳಿ: ಭತ್ತದ ಬೆಳೆ ನಾಶ



ಗೋಣಿಕೊಪ್ಪ, ಅ.16– ಕುಟ್ಟಂದಿ ಗ್ರಾಮದಲ್ಲಿ ಕಾಡಾನೆ ಉಪಟಳಕ್ಕೆ ಭತ್ತದ ಬೆಳೆ ನಾಶವಾಗುತ್ತಿದೆ. ಕೃಷಿಕರಾದ ಕೊಲ್ಲೀರ ಬೋಪಣ್ಣ, ಪೂಣಚ್ಚ, ಚೇರಂಡ ಜಗನ್ ಅವರಿಗೆ ಸೇರಿದ ಗದ್ದೆಗಳಿಗೆ ಕಾಡಾನೆ ಹಿಂಡು ಮೂರು ದಿನಗಳಿಂದ ನಿರಂತರವಾಗಿ ದಾಳಿ ಮಾಡುತ್ತಿದ್ದು, ಭತ್ತ ನಾಶವಾಗುತ್ತಿದೆ. ಭತ್ತ ಬೆಳೆ ಗರ್ಭಾವಸ್ಥೆ ಸ್ಥಿತಿಯಲ್ಲಿದ್ದು, ರಾತ್ರಿ ಹೊತ್ತು ಹೆಚ್ಚು ದಾಳಿ ಮಾಡುತ್ತಿದೆ ಎಂದು ಕೃಷಿಕರು ನೋವು ಹಂಚಿಕೊಂಡಿದ್ದಾರೆ.

ತಿತಿಮತಿ ಗ್ರಾಪಂಗೆ ಸರಸ್ವತಿ ಅಧ್ಯಕ್ಷೆ

ಗೋಣಿಕೊಪ್ಪ, ಅ.16– ತಿತಿಮತಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕೆ. ಸರಸ್ವತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಅಧ್ಯಕ್ಷೆ ಆಶಾ ಪುಟ್ಟಸ್ವಾಮಿ ರಾಜೀನಾಮೆ ನೀಡಿದ ಹಿನ್ನೆಲೆ, ಅಧ್ಯಕ್ಷರ ಆಯ್ಕೆ ಮಾಡಲಾಯಿತು. ಸದಸ್ಯರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು. ಚುನಾವಣಾಧಿಕಾರಿಯಾಗಿ ತಾಲೂಕು ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿ ಗುರುಶಾಂತಪ್ಪ ಕಾರ್ಯನಿರ್ವಹಿಸಿದರು.

ಭ್ರೂಣಹತ್ಯೆಯಿಂದ ಹೆಣ್ಣು ಸಂತತಿ ಕಡಿಮೆ

ಜಿಲ್ಲಾ 2ನೇ ಸತ್ರ ನ್ಯಾಯಾಧೀಶರಾದ ಎಸ್.ಸುಜಾತ ಕಳವಳ



ವಿರಾಜಪೇಟೆ, ಅ.16– ಭ್ರೂಣಹತ್ಯೆಯಿಂದ ದೇಶದಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಇತ್ತೀಚೆಗೆ ಕಡಿಮೆ ಆಗುತ್ತಿರುವುದು ಕಳವಳಕಾರಿ ಸಂಗತಿಯಾಗುತ್ತಿದೆ ಎಂದು ಜಿಲ್ಲಾ 2ನೇ ಸತ್ರ ನ್ಯಾಯಾಧೀಶರಾದ ಎಸ್.ಸುಜಾತ ಹೇಳಿದರು

'ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನ"ದ ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ವಿರಾಜಪೇಟೆ ವಕೀಲರ ಸಂಘ ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಸಮಿತಿ ರಾಷ್ಟ್ರೀಯ ಸೇವಾ ಯೋಜನೆ ಘಟಕ, ರೇಂಜರ್ಸ್–ರೋವರ್ಸ್ ಮತ್ತು ರೆಡ್ ಕ್ರಾಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿದ ನ್ಯಾಯಾಧೀಶೆ ಸುಜಾತ ಮಾತನಾಡಿ, ಹೆಣ್ಣೆಂಬ ಕಾರಣಕ್ಕೆ ಭ್ರೂಣ ಹತ್ಯೆ ನಡೆಸುವುದನ್ನು ಹೆಣ್ಣು ಮಕ್ಕಳು ಕೈಬಿಡಬೇಕು. ಲಿಂಗ ತಾರತಮ್ಯವನ್ನು ತೊಡೆದುಹಾಕಬೇಕು. ಇತ್ತೀಚಿನ ದಿನಗಳಲ್ಲಿ 12 ರಿಂದ 18ನೇ ವಯೋಮಿತಿಯವರಲ್ಲಿ ಗರ್ಭಧಾರಣೆ ನಂತರ ಗರ್ಭಪಾತ ಹೆಚ್ಚಾಗುತ್ತಿರುವುದರಿಂದ ಇದರ ಬಗ್ಗೆ ಜಾಗೃತಿ ಮೂಡಬೇಕಿದೆ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಅಪರ ಸಿವಿಲ್ ನ್ಯಾಯಾಧೀಶರಾದ ಸಿ.ಮಹಾಲಕ್ಷ್ಮೀ ಅವರು ಮಾತನಾಡಿ, ಹೆಣ್ಣೆಂದರೆ ಆಕೆ ಎರಡನೆ ದರ್ಜೆ ಪ್ರಜೆ ಎಂಬ ಮನೋಭಾವನೆ ಕಾಣುತ್ತಿದ್ದೇವೆ. ಹೆಣ್ಣು ಎಂದರೆ ಮನೆ ಕೆಲಸ ಮಾಡುವಳೆಂಬ ಪ್ರವೃತಿಯನ್ನು ಇಂದಿನದಿನದಲ್ಲಿ ಕಾಣುತ್ತೇವೆ. ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯ ರೂಪಿಸಿಕೊಳ್ಳಲು ಸಹಕಾರ ನೀಡಬೇಕು. ಹಾಗೆ ಪೋಷಕರು ಹೆಣ್ಣು ಮಕ್ಕಳನ್ನು ಕಾಲೇಜಿಗೆಂದು ಕಳಿಸುತ್ತಾರೆ. ಆದರೆ ಕೆಲವು ಹೆಣ್ಣು ಮತ್ತು ಗಂಡು ಮಕ್ಕಳು ಕಾಲೇಜಿಗೆ ಹೋಗದೆ ಅನ್ಯದಾರಿ ತುಳಿಯುವುದು ಸರಿಯಲ್ಲ. ಗುರುಹಿರಿಯರಿಗೆ ಗೌರವ ನೀಡುವ ಮೂಲಕ ಸಾಧನೆಯ ಗುರಿ ಮುಟ್ಟುವಂತಾಗಬೇಕು ಎಂದರು.

ಗಣಿಗಾರಿಕೆ ತಡೆಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಅ.16–ತಾಲೂಕಿನ ಬಿಸಲವಾಡಿಯಲ್ಲಿ ಹೊಸದಾಗಿ ಬಿಳಿಕಲ್ಲು ಗಣಿಗಾರಿಕೆಗೆ ಅನುಮತಿ ನೀಡಬಾರದು ಹಾಗೂ ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ಕನ್ನಡ ಚಳವಳಿಗಾರ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಅವರು ಬಿಸಲವಾಡಿ ಗ್ರಾಮಸ್ಥರೊಂದಿಗೆ ನಗರದಲ್ಲಿ ಭಾನುವಾರ ಪ್ರತಿಭಟಿಸಿದರು.



ನಗರದ ಶ್ರೀಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಮಳೆಯಲ್ಲೇ ಕೆಲಕಾಲ ಪ್ರತಿಭಟಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ವಾಟಾಳ್‌ನಾಗರಾಜ್ ಮಾತನಾಡಿ, ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮ ರಾಜ್ಯದ ಗಡಿಯಂಚಿನಲ್ಲಿದ್ದು, ಈಗಾಗಲೇ ಮೂರು, ನಾಲ್ಕು ಗಣಿಗಾರಿಕೆಗಳಿಗೆ ಅನುಮತಿ ನೀಡಿದ್ದಾರೆ. ಈಗ ಹೊಸದಾಗಿ ಮತ್ತೊಂದು ಬಿಳಿಕಲ್ಲು ಗಣಿಗಾರಿಕೆಗೆ ಗ್ರಾಮ ಪಂಚಾಯಿತಿಯವರು ಅನುಮತಿ ಕೊಟ್ಟಿದ್ದಾರೆ. ಇದನ್ನು ವಿರೋಧಿಸಿ ಬಿಸಲವಾಡಿ ಗ್ರಾಮ ಸೇರಿದಂತೆ ಸುತ್ತಮುತ್ತಲ ಗ್ರಾಮದ ಯವಕರು, ಗ್ರಾಮಸ್ಥರು ಈ ಪಂಚಾಯಿತಿ ನೀತಿಯನ್ನು ವಿರೋಧಿಸಿ ಇಂದು ಪ್ರತಿಭಟನೆ ನಡೆಸಿದ್ದಾರೆ. ಗ್ರಾಮದಲ್ಲಿ ಹೊಸದಾಗಿ ಗಣಿಗಾರಿಕೆಗೆ ಅನುಮತಿ ನೀಡಬಾರದೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ, ಭೂವಿಜ್ಞಾನ ಇಲಾಖೆಗೆ ಮನವಿ ಸಲ್ಲಿಸಿದ್ದಾರೆ. ಜಿಲ್ಲಾಡಳಿತ ಯಾವುದೇ ಕಾರಣಕ್ಕೂ ಬಿಸಲವಾಡಿಯಲ್ಲಿ ಹೊಸದಾಗಿ ಗಣಿಗಾರಿಕೆಗೆ ಅನುಮತಿ ನೀಡಬಾರದು. ನಾನು ಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇನೆ. ಎಲ್ಲರೂ ಹೋರಾಟ ಮಾಡಿ ಜೈಲಿಗೆ ಹೋದರೂ ಚಿಂತೆಯಿಲ್ಲ ಎಂದು ಎಚ್ಚರಿಸಿದರು.

ಚಾಮರಾಜನಗರ ಸುತ್ತಮುತ್ತ ಗಣಿಗಾರಿಕೆ ದೊಡ್ಡಲೂಟಿ, ದರೋಡೆ ನಡೆಯುತ್ತಿದೆ ಇದನ್ನೂ ಹೇಳುವವರು, ಕೇಳುವವರು ಯಾರೂ ಇಲ್ಲ. ನಿಸರ್ಗ ಸಂಪತ್ತು ಪೂರ್ಣ ನಾಶವಾಗುತ್ತಿದೆ. ಅಲ್ಲಿ ಸಿಡಿಸುವ ಸಿಡಿಮದ್ದುಗಳು, ಅವರು ತೆಗೆಯುವ ದೊಡ್ಡದೊಡ್ಡ ಅಳಗಳಿಂದ ತೊಂದರೆಯಾಗುತ್ತಿದೆ. ಲಾರಿಯಲ್ಲಿ ಹೆಚ್ಚುಭಾರದ ಕಲ್ಲುಗಳ ಸಾಗಾಣಿಕೆಯಿಂದ ರಸ್ತೆಗಳು ಹಾಳಾಗುತ್ತಿದೆ. ಅಕ್ಕಪಕ್ಕದ ಜಮೀನುಗಳಲ್ಲಿ ಬೆಳೆ ನಾಶವಾಗುತ್ತಿದೆ. ಆದರಿಂದ ಚಾಮರಾಜನಗರ ಸುತ್ತ ನಡೆದಿರುವ ಸಮಗ್ರ ಕಲ್ಲುಗಣಿಗಾರಿಕೆ, ಜಲ್ಲಿಕಲ್ಲು ಸೇರಿದಂತೆ ಎಲ್ಲವನ್ನು ರಾಜ್ಯ ಸರ್ಕಾರ ಉನ್ನತ ಮಟ್ಟದ ತನಿಖೆ ಮಾಡಬೇಕು ಎಂದು ವಾಟಾಳ್ ನಾಗರಾಜ್ ಆಗ್ರಹಿಸಿದರಲ್ಲದೆ ಬಿಸಲವಾಡಿ ಗ್ರಾಮ ಪಂಚಾಯಿತಿಯವರ ಗಣಿಗಾರಿಕೆ ಅನುಮತಿ ನಿರ್ಣಯವನ್ನು ರದ್ದು ಪಡಿಸಬೇಕು ಇಲ್ಲದಿದ್ದರೆ ಜಿಲ್ಲಾಡಳಿತಕ್ಕೆ ಮುತ್ತಿಗೆ ಹಾಕುವುದಾಗಿ ವಾಟಾಳ್‌ನಾಗರಾಜ್ ಎಚ್ಚರಿಸಿದರು.

ಅನಿಲ್, ಬಸವರಾಜು, ಬಸವಣ್ಣ ಶಿವುಸಪ್ಪ ಬ್ಯಾಡಮೂಡ್ಲು ಬಸವಣ್ಣ ಬ.ಮ.ಕೃಷ್ಣಮೂರ್ತಿ, ಅಜಯ್, ಹುಂಡಿಬಸವಣ್ಣ, ಶಿವಲಿಂಗಮೂರ್ತಿ, ಚಾ.ರಾ.ಕುಮಾರ್, ಎಂಡಿಆರ್ ಸ್ವಾಮಿ, ವರದರಾಜು, ಗೋಪಾಲ್‌ನಾಯಕ, ನಾಗರಾಜಪ್ಪ, ಕುಮಾರ್, ವರದನಾಯಕ, ಕರಿನಾಯಕ ಇತರರು ಭಾಗವಹಿಸಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ 78 ಕೋಟಿ ರೂ. ಪ್ರಸ್ತಾವನೆ

ಚಾಮರಾಜನಗರ, ಅ.16–ಪ್ರಸಕ್ತ ಸಾಲಿನಲ್ಲಿ ಕಾವೇರಿ ಜಲಾನಯನ ಯೋಜನಾ ವ್ಯಾಪ್ತಿಯಲ್ಲಿ ಆಗಿರುವ ವ್ಯಾಪಕ ಮಳೆಯಿಂದ ಆಗಿರುವ ಬೆಳೆಹಾನಿಗೆ ಪರಿಹಾರ ಸೇರಿದಂತೆ ವಿವಿಧ ಕಾಮಗಾರಿಗಳ ಅಭಿವೃದ್ಧಿಗಾಗಿ ಸರ್ಕಾರಕ್ಕೆ 78 ಕೋಟಿ ರೂ.ಗಳ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಜಿ.ನಿಜಗುಣರಾಜು ತಿಳಿಸಿದರು.



ಚಾ.ನಗರ ಪ್ರವಾಹ ಪೀಡಿತ ಪ್ರದೇಶಗಳಿಗೆ ಕಾಡಾ ಅಧ್ಯಕ್ಷ ನಿಜಗುಣರಾಜು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಸತತ ಮಳೆಯಿಂದ ಉಂಟಾಗಿರುವ ಹಾನಿ ಹಾಗೂ ಕೈಗೊಂಡಿರುವ ಪರಿಹಾರ ಕ್ರಮಗಳ ಕುರಿತು ಕಾವೇರಿ ಅಚ್ಚುಕಟ್ಟು ಪ್ರಾಧಿಕಾರ, ಜಿಪಂ, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆಯಿಂದ ಹಾನಿಗೊಳಗಾಗಿರುವ ಕೆರೆಗಳ ಒತ್ತುವರಿ ತೆರವುಗೊಳಿಸುವುದು ಸೇರಿದಂತೆ ರಸ್ತೆ ಕಾಲುವೆ, ನಾಲೆ, ತೂಬು, ಸೇತುವೆ ನಿರ್ಮಾಣ ಕಾಮಗಾರಿಗಳ ಅಭಿವೃದ್ಧಿಗೆ 78 ಕೋಟಿ ರೂ. ಅನುದಾನದ ಅಗತ್ಯವಿದೆ. ಈ ಸಂಬಂಧ ಕ್ರಿಯಾಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. ಅನುದಾನ ನೀಡುವುದಾಗಿ ಮುಖ್ಯಮಂತ್ರಿಗಳೂ ಭರವಸೆ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ವ್ಯಾಪಕ ಮಳೆಯಿಂದ ರಾಮಸಮುದ್ರ–ಬಸವನಪುರ ರಸ್ತೆ, ರಾಮಸಮುದ್ರ ಸಿರುಗನಪಾಲ ರಸ್ತೆ, ರಾಮಸಮುದ್ರ–ಪಂಚಮ್ಮ ಓಣಿ, ಹರಳುಕೋಟೆ ಆಂಜನೇಯ ದೇವಾಲಯದಿಂದ ದೊಡ್ಡಕೆರೆ ಅಚ್ಚುಕಟ್ಟು ಪ್ರದೇಶ ಮೂಲಕ ಹಾದು ಹೋಗುವ 5 ಕಿಮೀ ರಸ್ತೆಗಳು ಹಾನಿಗೊಳಗಾಗಿದ್ದು, ನರೇಗಾದಡಿ ದುರಸ್ತಿ ಪಡಿಸಲು ಜಿಪಂ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾನಯನ ವ್ಯಾಪ್ತಿಯ ಹಾನಿಯಾಗಿರುವ ರಸ್ತೆಗಳನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ದುರಸ್ತಿ ಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿಜಗುಣರಾಜು ಸೂಚಿಸಿದರು.

ಕಾವೇರಿ ಅಚ್ಚುಕಟ್ಟು ಪ್ರಾಧಿಕಾರದಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸಲ್ಲಿಸಿರುವ ಪ್ರಸ್ತಾವನೆಯ ಅನುದಾನದಲ್ಲಿ ಜಿಲ್ಲೆಗೆ 10 ಕೋಟಿ ರೂ. ಅನುದಾನ ಮೀಸಲಿಡಲಾಗುವುದು ಎಂದರು.

ಸಭೆ ಬಳಿಕ ತಾಲೂಕಿನ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಕಾಡಾ ಅಧ್ಯಕ್ಷರು ಪ್ರವಾಹ ಪರಿಸ್ಥಿತಿ ವೀಕ್ಷಿಸಿದರು.

ಸಭೆಯಲ್ಲಿ ಪ್ರಾಧಿಕಾರದ ಜಂಟಿ ನಿರ್ದೇಶಕಿ ಹೆಚ್.ಟಿ. ಚಂದ್ರಕಲಾ, ಎಇ ಧ್ರುವಕುಮಾರ್, ಎಇಇ ಬಾಲಚಂದ್ರನ್, ಜಯಭಾರತಿ, ಎಇ ಸಬೀನಾ, ಜಿಪಂ ಇಂಜಿನಿಯರಿಂಗ್ ವಿಭಾಗದ ಎಇ ಹರೀಶ್, ಮಹದೇವಸ್ವಾಮಿ, ಸಣ್ಣ ನೀರಾವರಿ ಇಲಾಖೆ ಇಂಜಿನಿಯರ್ ಚಂದ್ರಶೇಖರ್, ತಾಲೂಕು ಕಚೇರಿಯ ರವೀಂದ್ರ, ರೈತರು ಸಭೆಯಲ್ಲಿದ್ದರು.

ಎಸ್‌ಪಿ ಕಚೇರಿ ಬಳಿ ಬೈಕ್ ವ್ಹೀಲಿಂಗ್ ಮಾಡಿದ್ದ ಇಬ್ಬರ ಬಂಧನ

ಚಾಮರಾಜನಗರ, ಅ.16–ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಮುಖ್ಯದ್ವಾರದ ಮುಂಭಾಗ ಬೈಕ್ ವ್ಹೀಲಿಂಗ್ ಮಾಡಿದ್ದ ಇಬ್ಬರು ಯುವಕರನ್ನು ಬಂಧಿಸಿರುವ ಪೊಲೀಸರು, ಬೈಕ್ ಅನ್ನು ವಶಕ್ಕೆ ಪಡೆಸಿಕೊಂಡಿದ್ದಾರೆ. ನಗರದ ಗಾಳೀಪುರ ಬಡಾವಣೆಯ ಮಹಮ್ಮದ್ ಸುಹೇಲ್ ಉ.ಮಿನಾರ್ ಹಾಗೂ ಮಹಮ್ಮದ್ ಉಸ್ಮಾನ್ ಬಂಧಿತರು.

ವ್ಹೀಲಿಂಗ್‌ಗೆ ಬಳಸಿದ್ದ ಬೈಕ್ ಸುಜಿಕಿ ಫಿಯರೋ(ಕೆಎ 10, 4–2288) ವಶಪಡಿಸಿಕೊಳ್ಳಲಾಗಿದೆ. ಇವರಿಬ್ಬರು ಅ.4ರಂದು ತಡರಾತ್ರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಮುಖ್ಯದ್ವಾರದ ಮುಂಭಾಗವೇ ಬೈಕ್‌ನಲ್ಲಿ ವ್ಹೀಲಿಂಗ್ ಮಾಡಿದ್ದರು. ಇದು ಸಾಮಾಜಿಕ ಜಾಲತಾಣ ಹಾಗೂ ವಾಟ್ಸಪ್ ಗ್ರೂಪ್‌ಗಳಲ್ಲಿ ಹರಿದಾಡಿತ್ತು. ಪೊಲೀಸರ ಕಾರ್ಯವೈಖರಿ ಬಗ್ಗೆ ಟೀಕೆಗಳು ವ್ಯಕ್ತವಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಅವರು ವ್ಹೀಲಿಂಗ್‌ನಲ್ಲಿ ತೊಡಗಿದ್ದವರ ಪತ್ತೆಗೆ ವಿಶೇಷ ಆಸಕ್ತಿ ವಹಿಸಿದ್ದರು. ವ್ಹೀಲಿಂಗ್‌ಗೆ ಬಳಸಿದ್ದ ಬೈಕ್‌ನ್ನು ಮೊದಲಿಗೆ ಪತ್ತೆ ಹಚ್ಚಿದ ಪೊಲೀಸರು ನಂತರ ಸವಾರರನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದರು. ಬಂಧಿತರ ವಿರುದ್ಧ 91/2022ರ ಕಲಂ 279, 336, ಐಪಿಸಿ ಕೆ/ವಿ 184, 189 ಐಎಂಎ ಆಕ್ಟ್‌ನಡಿ ಪ್ರಕರಣ ದಾಖಲಿಸಲಾಗಿದೆ ಎಂದು ಎಸ್‌ಪಿ ಟಿ.ಪಿ.ಶಿವಕುಮಾರ್ ತಿಳಿಸಿದ್ದಾರೆ.

ಮಲ್ಲಮ್ಮ ನಿಧನ

ಚಾಮರಾಜನಗರ, ಅ.16–ಗುಂಡ್ಲುಪೇಟೆ ತಾಲೂಕಿನ ಬಾಚಹಳ್ಳಿ ಗ್ರಾಮದ ನಿವಾಸಿ ಮಲ್ಲಮ್ಮ(62) ಹೃದಯಾಘಾತದಿಂದ ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಮೃತರು ಪತಿ ನಿವೃತ್ತ ಗ್ರಾಮಲೆಕ್ಕಾಧಿಕಾರಿ ಸಿ.ಎಂ. ನಾಗರಾಜಮೂರ್ತಿ, ಪುತ್ರ ರಾಜೇಂದ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮ ಬಾಚಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಗುಡ್ಡ ಕುಸಿತ: ಅಂತರ್ ರಾಜ್ಯಕ್ಕೆ ಸಂಪರ್ಕ ಸ್ಥಗಿತ

ಹನೂರು, ಅ.16–ನಿರಂತರ ಮಳೆಯಿಂದಾಗಿ ಅಂತರ್‌ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಮಧ್ಯ ಹಲವೆಡೆ ಗುಡ್ಡ ಕುಸಿದಿದ್ದು, ರಸ್ತೆ ಸಂಚಾರ ಸ್ಥಗಿತಗೊಂಡಿದೆ.

ತಾಲೂಕಿನ ರಾಮಾಪುರದಿಂದ ಬರಗೂರಿಗೆ ತೆರಳುವ ಮಾರ್ಗ ಮಧ್ಯದಲ್ಲಿ ಹಲವೆಡೆ ಗುಡ್ಡ ಕುಸಿದಿದ್ದು, ರಸ್ತೆ ಸಂಚಾರ ಸಂಪೂರ್ಣವಾಗಿ ಬಂದ್ ಆಗಿದೆ. ಗುಡ್ಡ ಕುಸಿತದಿಂದ ಗಿಡ–ಮರಗಳು ರಸ್ತೆಯ ಮಧ್ಯದಲ್ಲಿ ಬಿದ್ದಿರುವುದರಿಂದ ವಾಹನ ಸಂಚಾರರು ಸಂಚರಿಸಲಾಗದ ಸ್ಥಿತಿ ನಿರ್ಮಾಣವಾಗಿದೆ.

ಕೃಷಿಗೆ ನೀಡಿರುವಂತೆ ನೇಕಾರಿಕೆಗೆ ಉತ್ತೇಜನ ನೀಡಬೇಕು

ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಮಹದೇವ ಬಿದರಿ ಒತ್ತಾಯ



> ದೇವಾಂಗ ಜನಾಂಗದವರು ತಮ್ಮ ಕುಲಕಸುಬಾದ ಕೈಮಗ್ಗ ನೆಯ್ಗೆ ದಿನೇದಿನೆ ನಶಿಸುತ್ತಿರುವುದ್ದರಿಂದ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ನಾನು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಈ ವಿಚಾರವನ್ನು ಅವರ ಗಮನಕ್ಕೆ ತಂದಾಗ ಕೃಷಿ ಹಾಗೂ ಕೈಮಗ್ಗ ರಾಜ್ಯದ ಅಭಿವೃದ್ಧಿಯ ಎರಡು ಕಣ್ಣುಗಳು ಇದ್ದಂತೆ ಎಂದು ತಿಳಿಸಿ, ಸಮಗ್ರ ಅಭಿವೃದ್ಧಿ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ ಕೃಷಿಗೆ ಸಿಕ್ಕಂತಹ ಮಾನ್ಯತೆ ಕೈಮಗ್ಗಕ್ಕೆ ಸಿಕ್ಕಿಲ್ಲ. ಈಗಿರುವ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ, ಯಡಿಯೂರಪ್ಪ ಅವರು ಕೊಟ್ಟ ಭರವಸೆಯನ್ನು ಈಡೇರಿಸಬೇಕು.
>
> – ಎಂ.ಡಿ. ಲಕ್ಷ್ಮಿ ನಾರಾಯಣ, ಮಾಜಿ ಶಾಸಕ.

ಕೊಳ್ಳೇಗಾಲ,ಅ.16–ಜವಳಿ ಮತ್ತು ರೇಷ್ಮೆ ಉದ್ಯಮದಲ್ಲಿ ಕೊಳ್ಳೇಗಾಲ ಒಳ್ಳೆಯ ಹೆಸರು ಮಾಡಿದ್ದು, ಪ್ರಸ್ತುತ ಕೊಳ್ಳೇಗಾಲ ರೇಷ್ಮೆ ಉದ್ಯಮ ನಶಿಸುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಕೃಷಿಗೆ ನೀಡಿದಷ್ಟೇ ಪ್ರಾತಿನಿಧ್ಯವನ್ನು ನೇಕಾರಿಕೆಗೂ ನೀಡುವ ಅಗತ್ಯವಿದೆ ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ್ ಮಹದೇವ ಬಿದರಿ ಹೇಳಿದರು.

ನಗರದ ರಾಜರಾಜೇಶ್ವರಿ ದೇವಾಂಗ ಮಹಾಸಭಾದ ರಾಜರಾಜೇಶ್ವರಿ ಕಲ್ಯಾಣ ಮಂಟಪ ಟ್ರಸ್ಟ್ ಆಯೋಜಿಸಿದ್ದ ರಜತ ಮಹೋತ್ಸವ, ಗಣ್ಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇವಾಂಗ, ನೇಕಾರ ಸಮಾಜ ಅತ್ಯಂತ ಪ್ರಮಾಣಿಕರು, ಸ್ವಾಭಿಮಾನಿಗಳು, ಪರಿಶ್ರಮಿಗಳಾಗಿದ್ದು, ಇತಿಹಾಸ ಪುಟದಲ್ಲಿ ದೇವಾಂಗ ಸಮಾಜ ನೇಕಾರಿಕೆ ಮೂಲಕ ನೆನಪಿನಲ್ಲುಳಿದಿದೆ. ಸರ್ಕಾರ ವಿಶೇಷ ಸೌಲಭ್ಯಗಳನ್ನು ನೀಡುವ ಮೂಲಕ ಸಮಾಜದ ಅಭ್ಯುದಯಕ್ಕೆ ಮುಂದಾಗಬೇಕಿದೆ. ಕೃಷಿಯಂತೆ ನೇಕಾರಿಕೆಗೂ ಹೆಚ್ಚಿನ ಉತ್ತೇಜನ ನೀಡುವ ಅಗತ್ಯವಿದೆ ಎಂದು. 4 ದಶಕಗಳಿಂದಲೂ ಕೊಳ್ಳೇಗಾಲಕ್ಕೂ, ನನಗೂ ಅವಿನಾಭಾವ ಸಂಬಂಧವಿದ್ದು, 1980 ರಿಂದ ಪ್ರಾರಂಭವಾದ ಕೊಳ್ಳೇಗಾಲದ ಸಂಬಂಧ ಇಂದಿನ ತನಕ ಮುಂದುವರೆದಿದೆ ಎಂದರು.

ಮಾಜಿ ಶಾಸಕರೂ ಆದ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಎಂ.ಡಿ.ಲಕ್ಷ್ಮಿನಾರಾಯಣ ಉದ್ಘಾಟಿಸಿ ಮಾತನಾಡಿ, ರಾಜ್ಯದಲ್ಲಿ ಬೀದರ್‌ನಿಂದ ಚಾ.ನಗರ ಜಿಲ್ಲೆ ತನಕ 60 ಲಕ್ಷ ನೇಕಾರಿಕೆ–ದೇವಾಂಗ ಸಮಾಜ ಜನರಿದ್ದರು. ಆದರೆ ಈ ವೃತ್ತಿಯಲ್ಲಿನ ನೇಕಾರರ ಆದಾಯ ದಿನದಿಂದ ಕ್ಷೀಣಿಸುತ್ತಿದೆ. ಸರ್ಕಾರ ಈ ಸಮಾಜದ ಅಭ್ಯುದಯಕ್ಕೆ ಮುಂದಾಗಬೇಕಿದೆ ಎಂದರು.

ಮಾಜಿ ಶಾಸಕ ಎಸ್.ಬಾಲರಾಜು, ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ಕಾರ್ಯದರ್ಶಿ ನಿರಂಜನ್ ರವೀಂದ್ರ, ಚೌಡೇಶ್ವರಿ ಕಲ್ಯಾಣ ಮಂಟಪದ ಅಧ್ಯಕ್ಷ ಚಿಂತು ಪರಮೇಶ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ಅರುಣಾಚಲ ಟ್ರಸ್ಟ್ ಅಧ್ಯಕ್ಷ ಸುಂದರೇಶ ಕುಮಾರ್, ಕೃಷ್ಣಮೂರ್ತಿ, ಸತೀಶ್, ನಗರಸಭೆ ಸದಸ್ಯ ಮಧುಚಂದ್ರ, ಶಾಸಕರ ಆಪ್ತಕಾರ್ಯದರ್ಶಿ ಗಿರೀಶ್‌ಬಾಬು, ಜಿ.ಎನ್.ಲೋಕೇಶ್, ರಮೇಶ್ ಟೆಕ್ಸ್‌ಟೈಲ್ಸ್ ಮಾಲೀಕ ಚೇತನ್, ಸಿ.ಡಿ.ಬಾಬು, ಟ್ರಸ್ಟ್ ಪದಾಧಿಕಾರಿಗಳಾದ ನಾಗಾರ್ಜುನ, ಪಾಂಡುರಂಗಯ್ಯ, ನಾಗಲಿಂಗಸ್ವಾಮಿ, ರಾಮಸ್ವಾಮಿ, ರಾಜು, ಕುಮಾರಸ್ವಾಮಿ, ಶಾಂತರಾಜು, ಶ್ರೀಧರ್, ಪ್ರದೀಪ್, ಭುವನೇಶ್ವರಯ್ಯ, ರಂಗಸ್ವಾಮಿ, ಎನ್.ಶ್ರೀನಿವಾಸ, ರಮೇಶ, ಸುರೇಶ್, ನಾಗೇಂದ್ರಸ್ವಾಮಿ, ಪಿ.ಎನ್.ಶಿವಕುಮಾರ್,ವಎ.ಸಿ.ಪ್ರಭಾಕರ್ ಇತರರು ಹಾಜರಿದ್ದರು.

ಸಿಡಿಲು ಬಡಿದು ಮಹಿಳೆಗೆ ಗಾಯ

ಹನೂರು, ಅ.16–ಸಿಡಿಲು ಬಡಿದು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆ ಗಾಯಗೊಂಡಿರುವ ಘಟನೆ ತಾಲೂಕಿನ ಪೊನ್ನಾಚಿ ಸಮೀಪದ ರಾಮೇಗೌಡನದೊಡ್ಡಿಯಲ್ಲಿ ಭಾನುವಾರ ನಡೆದಿದೆ.



ಗ್ರಾಮದ ಜಡೇಮಾದಮ್ಮ ಗಾಯಗೊಂಡವರಾಗಿದ್ದು, ಇವರು ಇಂದು ಬೆಳಗ್ಗೆ ಜಮೀನಿನಲ್ಲಿ ಕಳೆ ತೆಗೆಯುವ ಕೆಲಸದಲ್ಲಿದ್ದರು. ಈ ವೇಳೆ ಸಿಡಿಲು ಬಡಿದಿದೆ. ಪರಿಣಾಮ ಜಡೇಮಾದಮ್ಮ ಕೈ, ಕಾಲು ಸ್ವಾಧೀನ ಕಳೆದುಕೊಂಡು ನಿತ್ರಾಣಗೊಂಡರು. ಬಳಿಕ ಕುಟುಂಬಸ್ಥರು ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಕೊಳ್ಳೇಗಾಲ ಸರ್ಕಾರಿ ಉಪ ವಿಭಾಗೀಯ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಾಸಕ ಭೇಟಿ: ಸುದ್ದಿ ತಿಳಿದು ಶಾಸಕ ಆರ್.ನರೇಂದ್ರ ಆಸ್ಪತ್ರೆಗೆ ಭೇಟಿ ನೀಡಿ, ಕುಟುಂಬಸ್ಥರಿಂದ ಮಾಹಿತಿ ಪಡೆದು ಆರೋಗ್ಯ ವಿಚಾರಿಸಿದರು. ಅಗತ್ಯ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಸೂಚಿಸಿದರು. ಜಡೇಮಾದಮ್ಮ ಸದ್ಯ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವೈದ್ಯರು ತಿಳಿಸಿದರು.

ಕೊಳ್ಳೇಗಾಲ ನಗರಸಭೆ ಉಪಚುನಾವಣೆ

7 ಮಂದಿ ಅನರ್ಹರಿಗೂ ಬಿಜೆಪಿ ಟಿಕೆಟ್

ಕೊಳ್ಳೇಗಾಲ, ಅ.16–ಬಿಎಸ್‌ಪಿಯಿಂದ ಗೆದ್ದು, ಶಾಸಕ ಎನ್.ಮಹೇಶ್ ಜೊತೆ ಗುರುತಿಸಿಕೊಂಡು ಬಿಜೆಪಿ ಸೇರಿ ವ್ಹಿಪ್ ಉಲ್ಲಂಘಿಸಿದ್ದ ಆರೋಪದ ಮೇರೆಗೆ ಸದಸ್ಯತ್ವದಿಂದ ಅನರ್ಹಗೊಂಡಿದ್ದ ಏಳು ಮಂದಿಗೂ ಅ.28 ರಂದು ನಡೆಯುವ ನಗರಸಭೆ ಉಪಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಅಂತಿಮಗೊಳಿಸಿದೆ.

ಬಿಜೆಪಿ ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಅವರು ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ್ದು, ವಾರ್ಡ್ 2ರಿಂದ ಗೋಪಾಲ್ ಪತ್ನಿ ನಾಗಮಣಿ, ವಾರ್ಡ್ 7ರಿಂದ ನಾಸೀರ್ ಷರೀಫ್, ವಾರ್ಡ್ 13ರಿಂದ ಪವಿತ್ರ ರಮೇಶ್, ವಾರ್ಡ್ 21ರಿಂದ ಶಂಕನಪುರ ಪ್ರಕಾಶ್, ವಾರ್ಡ್ 25ರಿಂದ ರಾಮಕೃಷ್ಣ, ವಾರ್ಡ್ 26ರಿಂದ ನಾಗಸುಂದ್ರಮ್ಮ ಜಗದೀಶ್ ಹಾಗೂ ವಾರ್ಡ್ 6ರಿಂದ ಮಾಜಿ ಅಧ್ಯಕ್ಷೆ ಗಂಗಮ್ಮ ವರದರಾಜು ಅವರಿಗೆ ಟಿಕೆಟ್ ಅಂತಿಮಗೊಳಿಸಲಾಗಿದೆ. ಸೋಮವಾರ(ಅ.17) 7 ಮಂದಿಯೂ ನಾಮಪತ್ರ ಸಲ್ಲಿಸಲಿದ್ದಾರೆ. ಒಮ್ಮತದಿಂದ 7 ಮಂದಿಗೂ ಟಿಕೆಟ್ ಪ್ರಕಟಿಸಲಾಗಿದೆ ಎಂದು ತಿಳಿಸಿದ್ದಾರೆ.

ಭಾರತ್ ಜೋಡೋ ಯಾತ್ರೆ ಅಲ್ಲ... ಡಿಕೆಶಿ–ಸಿದ್ದು ಜೋಡಿಸುವ ಯಾತ್ರೆ

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ವಾಗ್ದಾಳಿ



ಮೈಸೂರು, ಅ.16(ಆರ್‌ಕೆಬಿ)– ರಾಹುಲ್‌ಗಾಂಧಿ ಕೈಗೊಂಡಿರುವ ಭಾರತ್ ಜೋಡೋ ಯಾತ್ರೆ, ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರನ್ನು ಜೋಡಿಸುವ ಯಾತ್ರೆ ಅಷ್ಟೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದರು. ಮೈಸೂರಿನಲ್ಲಿ ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಹುಲ್ ಗಾಂಧಿಯವರು ಕರ್ನಾಟಕದಲ್ಲಿ 21 ದಿನಗಳ ಜಾತ್ರೆ ಕೈಗೊಂಡಿದ್ದು, ನಿಮ್ಮ ಜಿಲ್ಲೆಯಲ್ಲೂ ಭಾರತ್ ಜೋಡೋ ಯಾತ್ರೆ ಮಾಡಿದ್ದಾರೆ. ಇದರಿಂದ ನಿಮಗೇನಾದರೂ ಹಿನ್ನಡೆಯಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಇದು ಭಾರತ್ ಜೋಡೋ ಯಾತ್ರೆ ಅಲ್ಲ. ಡಿಕೆಶಿ–ಸಿದ್ದು ಜೋಡೋ ಯಾತ್ರೆ ಎಂದು ಹೇಳಿದರು. ಎಸ್‌ಸಿ ಮತ್ತು ಎಸ್‌ಟಿಗಳಿಗೆ ಮೀಸಲಾತಿ ಹೆಚ್ಚಳ ಮಾಡಿದ್ದಾರೆ. ಒಳಮೀಸಲಾತಿ ಸಹ ಜಾರಿಯಾಗುತ್ತಾ? ಎಂಬ ಪ್ರಶ್ನೆಗೆ, ಮುಖ್ಯಮಂತ್ರಿಗಳು ಮೀಸಲಾತಿ ವಿಚಾರ ಚರ್ಚೆ ಮಾಡಿದ ದಿನವೇ ಸರ್ವ ಪಕ್ಷಗಳ ಸಭೆಯಲ್ಲಿ ಚರ್ಚಿಸಿದ್ದಾರೆ. ಸಿದ್ದರಾಮಯ್ಯರನ್ನು ಬಿಟ್ಟು ಬೇರೆ ಎಲ್ಲರೂ ಒಳಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದಾರೆ. ಮುಂದಿನ ಅಧಿವೇಶನದಲ್ಲಿ ಸದಾಶಿವ ಆಯೋಗ ವರದಿ ಜಾರಿ ಬಗ್ಗೆ ಸುದೀರ್ಘ ಚರ್ಚೆಯಾಗಲಿದೆ ಎಂದರು.

ಇಂದು ಪಿಎಂ ಕಿಸಾನ್ ಯೋಜನೆಯ 12ನೇ ಕಂತು ಜಮೆ

ಬೆಂಗಳೂರು, ಅ.16– ರೈತರಿಗೆ ಆರ್ಥಿಕವಾಗಿ ನೆರವಾಗುವ ನಿಟ್ಟಿನಲ್ಲಿ 'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ' (ಪಿಎಂ ಕಿಸಾನ್) ಯಡಿ ನೀಡಲಾಗುತ್ತಿರುವ 2,000 ರೂ ಹಣವನ್ನು ದೀಪಾವಳಿಗೆ ನೀಡುವುದಾಗಿ ಸೋಮವಾರ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ದೀಪಾವಳಿಗೆ ಮುನ್ನ ರೈತರಿಗೆ ಕೇಂದ್ರ ಸರ್ಕಾರ ಸಿಹಿ ಸುದ್ದಿಯೊಂದನ್ನು ನೀಡಿದ್ದು, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ' ಫಲಾನುಭವಿಗಳ ಖಾತೆಗೆ ಅಕ್ಟೋಬರ್ 17ರಂದು ಯೋಜನೆಯ 12ನೇ ಕಂತು ಜಮಾ ಆಗಲಿದೆ. ಸೋಮವಾರ ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಸಮ್ಮೇಳನ ಸಮಾರಂಭ ನಡೆಯಲಿದ್ದು, ಅಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಎರಡು ಸಾವಿರ ರೂ. ಹಣವನ್ನು ಬಿಡುಗಡೆಗೊಳಿಸಲಿದ್ದಾರೆ ಎಂದು ತಿಳಿದು ಬಂದಿದೆ. ಈ ವರೆಗೆ ದೇಶದಲ್ಲಿ 'ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ' ಫಲಾನುಭವಿ ರೈತರು ಒಟ್ಟು 11 ಕಂತು ಪಡೆದಿದ್ದಾರೆ. ಕಳೆದ ಮೇ 30 ರಂದು ಯೋಜನೆಯ 11 ಕಂತಿನ ರೂ 2,000 ಅನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿತ್ತು. ಅದಕ್ಕಾಗಿ ಒಟ್ಟು 10 ಕೋಟಿ ಹಣ ಕೇಂದ್ರ ಬಿಡುಗಡೆ ಮಾಡಿತ್ತು. ಕೇಂದ್ರ ಸರ್ಕಾರ ಪ್ರತಿ ನಾಲ್ಕು ತಿಂಗಳಿಗೊಮ್ಮೆ ಯೋಜನೆಯ ಪ್ರಯೋಜನಗಳನ್ನು ರೈತರಿಗೆ ತಲುಪಿಸುತ್ತಿದೆ. ಈ ಬಾರಿಯ ಕಂತನ್ನು ಪಡೆಯಲು ಸೂಕ್ತ ಮಾಹಿತಿ, ಕೆವೈಸಿ ಮಾಡಿಕೊಳ್ಳುವಂತೆ ಈಗಾಗಲೇ ಕೇಂದ್ರವು ಸೂಚಿಸಿತ್ತು.

ಬಳ್ಳಾರಿಯ ಸಂಗನಕಲ್ ಗ್ರಾಮದಿಂದ ಪಾದಯಾತ್ರೆ ಆರಂಭಿಸಿದ ರಾಹುಲ್ ಗಾಂಧಿ

ಬಳ್ಳಾರಿ, ಅ.16– ಬಳ್ಳಾರಿಗೆ ಕಾಲಿಟ್ಟಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾರತ ಐಕ್ಯತಾ ಪಾದಯಾತ್ರೆ ಭಾನುವಾರ ಸಂಗನಕಲ್ ಗ್ರಾಮದಿಂದ ಮತ್ತೆ ಆರಂಭವಾಯಿತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ ಐಕ್ಯತಾ ಯಾತ್ರೆ ಗಣಿನಾಡು ಬಳ್ಳಾರಿ ಪ್ರವೇಶ ಮಾಡಿದ್ದು, ಶುಕ್ರವಾರ ರಾಹುಲ್ ಗಾಂಧಿ ಬಳ್ಳಾರಿ ಪ್ರವೇಶಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತ ಕೋರಿದ್ದರು. ಈ ಬಾರಿ ಕರ್ನಾಟಕದಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ತರೋ ನಿಟ್ಟಿನಲ್ಲಿ ಬಳ್ಳಾರಿಯಿಂದಲೇ ಚುನಾವಣಾ ರಣಕಹಳೆ ಮೊಳಗಿಸಲು ಕಾಂಗ್ರೆಸ್ ಮುಂದಾಗಿದೆ. ಬಳ್ಳಾರಿಯಲ್ಲಿ ನಡೆಯುವ ಸಮಾವೇಶಕ್ಕೆ ಪ್ರಿಯಾಂಕಾ ಗಾಂಧಿ ಆಗಮಿಸುವ ಸಾಧ್ಯತೆಗಳಿವೆ. ಇನ್ನು ಇಂದಿನ ಕಾರ್ಯಕ್ರಮದಲ್ಲಿ ಬೆಳಗ್ಗೆ 11 ಗಂಟೆಗೆ ಬಳ್ಳಾರಿಯ ಮೋಕಾ ಹತ್ತಿರ ಇರುವ ಹನಿ ಫಂಕ್ಷನ್ ಹಾಲ್‌ನಲ್ಲಿ ನಾಯಕರು ಬೆಳಗಿನ ವಿರಾಮ ಪಡೆಯಲಿದ್ದಾರೆ. ಬಳಿಕ ಅಲ್ಲಿಂದ ಪಾದಾಯಾತ್ರೆ ಸಾಗಿ ಕರ್ನಾಟಕ ಆಂಧ್ರ ಪ್ರದೇಶ ಗಡಿಯಲ್ಲಿ ಸಂಜೆ ವಿರಾಮ ಪಡೆಯಲಿದ್ದಾರೆ. ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಚತ್ರಗುಡಿ ಹನುಮಾನ್ ದೇಗುಲದಲ್ಲಿ ನಾಯಕರು ವಿರಾಮ ಪಡೆಯಲಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಕರ್ನಾಟಕ ಕಾಂಗ್ರೆಸ್ ಘಟಕ, 'ಬಳ್ಳಾರಿಯ ಯಶಸ್ವಿ ಸಮಾವೇಶದ ನಂತರ ಭಾರತ ಐಕ್ಯತಾ ಯಾತ್ರೆ ಹೆಚ್ಚಿನ ಹುಮ್ಮಸ್ಸಿನೊಂದಿಗೆ ನಾಳೆ ಮುಂದುವರೆಯಲಿದೆ.

ಒಂದನೇ ಪುಟದಿಂದ

ಮುಂದಿನ ಸಿಎಂ ಅಭ್ಯರ್ಥಿ

ಸಾಮಾನ್ಯ ವ್ಯಕ್ತಿ ಎಂದು ಕರ್ನಾಟಕದ ಜನರು ಭಾವಿಸುತ್ತಿದ್ದಾರೆ ಎಂದು ಹೇಳಿದರು. ಯಡಿಯೂರಪ್ಪ ಕರ್ನಾಟಕದಲ್ಲಿ ಎತ್ತರದ ನಾಯಕ ಮತ್ತು ಬಿಜೆಪಿ ಅವರ ಮಾರ್ಗದರ್ಶನವನ್ನು ಹೊಂದಿದೆ. ಯಡಿಯೂರಪ್ಪ ಪಕ್ಷದ ಕಾರ್ಯಕರ್ತರಿಗೆ ಶಕ್ತಿ ತುಂಬಲು ರಾಜ್ಯ ಪ್ರವಾಸ ಮಾಡುತ್ತಿದ್ದಾರೆ ಮತ್ತು 150 ಸ್ಥಾನಗಳನ್ನು ಗೆಲ್ಲಲು ಮತ ಕೇಳುತ್ತಿದ್ದಾರೆ. ಇದು ದೊಡ್ಡ ವಿಷಯ ಎಂದು ಸಿಂಗ್ ಹೇಳಿದರು.

ಕಾಂಗ್ರೆಸ್ ಮತ್ತು ಜೆಡಿಎಸ್‌ನ ಸಾಂಪ್ರದಾಯಿಕ ಭದ್ರಕೋಟೆಗಳಾದ ಹಳೇ ಮೈಸೂರು ಪ್ರದೇಶದಲ್ಲಿ (ಮಂಡ್ಯ, ರಾಮನಗರ ಮತ್ತು ಹಾಸನ ಜಿಲ್ಲೆಗಳನ್ನು ಒಳಗೊಂಡಿರುವ) ಪಕ್ಷವು ತನ್ನ ನೆಲೆಯನ್ನು ಬಲಪಡಿಸಲು ಕೆಲಸ ಮಾಡುತ್ತಿದೆ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಬಿಜೆಪಿಗೆ ಬೆಂಬಲ ವ್ಯಕ್ತವಾಗಿದೆ. ನಮ್ಮ ಶಕ್ತಿ ಗಣನೀಯವಾಗಿ ಆ ಪ್ರದೇಶದಲ್ಲಿ ಹೆಚ್ಚಾಗಿದೆ ಎಂದು ಅವರು ಹೇಳಿದರು. ನಾವು ಈ ಬಾರಿ ಹಳೇ ಮೈಸೂರು ಭಾಗದಲ್ಲಿ ಚಮತ್ಕಾರ (ಪವಾಡ) ಮಾಡಲಿದ್ದೇವೆ. ಹಳೇ ಮೈಸೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿನ (ಬೀದರ್, ರಾಯಚೂರು ಮತ್ತು ಕಲಬುರಗಿ) ಕಾಂಗ್ರೆಸ್ ಮತ್ತು ಜೆಡಿಎಸ್‌ನ ಅನೇಕ ನಾಯಕರು ಬಿಜೆಪಿ ಸೇರಲು ಮುಂದಾಗಿದ್ದಾರೆ. ಏಕೆಂದರೆ, ಬಿಜೆಪಿಯೇ ಸರ್ಕಾರ ರಚಿಸಲಿದೆ ಮತ್ತು ಬಿಜೆಪಿಯೊಂದಿಗೆ ಭವಿಷ್ಯವಿದೆ ಎಂಬುದನ್ನು ಅವರು ಅರಿತಿದ್ದಾರೆ' ಎಂದು ಅವರು ಹೇಳಿದ್ದಾರೆ.

ಹತ್ತು ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಸ್ಥಾಪನೆ

ಸ್ತ್ರೀರೋಗಗಳಿಗೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸಾ ಸೌಲಭ್ಯ ದೊರಕುವುದಿಲ್ಲ. ಅಲ್ಲದೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪುರುಷ ರೋಗಿಗಳು ಆಗಮಿಸುವುದರಿಂದ ಮಹಿಳಾ ರೋಗಿಗಳು ತಪಾಸಣೆಗೊಳಪಡಲು ಹಿಂಜರಿಯುವ ಸಾಧ್ಯತೆ ಹೆಚ್ಚಾಗಿತ್ತು. ಇದರಿಂದ ಸ್ತ್ರೀರೋಗ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದ ಅನೇಕ ಮಹಿಳೆಯರು ಸೂಕ್ತ ಚಿಕಿತ್ಸೆ ಪಡೆದುಕೊಳ್ಳದೆ ಖಿನ್ನತೆಗೆ ಒಳಗಾಗುತ್ತಿದ್ದರು. ಇದನ್ನು ಪ್ರಮುಖವಾಗಿಟ್ಟುಕೊಂಡು ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ತೆರೆದು ಸ್ತ್ರೀರೋಗ ಸಂಬಂಧಿಸಿದ ಸಮಸ್ಯೆಗೆ ತುತ್ತಾಗಿರುವ ಮಹಿಳೆಯರಿಗೆ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಮಾರ್ಗದರ್ಶನ: ಮಹಿಳೆಯರು, ಹೆಣ್ಣು ಮಕ್ಕಳಲ್ಲಿ ಕಾಡುವ ಹದಿಹರೆಯದ ಸಮಸ್ಯೆ, ಮಾತೃತ್ವ, ಋತುಚಕ್ರ ಸೇರಿದಂತೆ ಹಲವು ಸಮಸ್ಯೆಗಳು ಕಾಡುತ್ತವೆ. ಇದೇ ವೇಳೆ ಹಂತ ಹಂತವಾಗಿ ಕಾಡುವ ದೈಹಿಕ ಬದಲಾವಣೆ, ಹಾರ್ಮೋನ್‌ಗಳ ಅಸಮತೋಲನ ಹಾಗೂ ಇನ್ನಿತರ ಸಮಸ್ಯೆಗಳಿಂದ ಮಾನಸಿಕವಾಗಿ ಕುಗ್ಗುವಿಕೆ, ಖಿನ್ನತೆ, ಶುಚಿತ್ವದ ಕೊರತೆಯಿಂದ ವಿವಿಧ ಖಾಯಿಲೆಗಳಿಗೆ ತುತ್ತಾಗುವ ಸಂದರ್ಭ ಹೆಚ್ಚಾಗಿದೆ. ಇದನ್ನು ಮನಗಂಡು ಮಹಿಳಾ ಸ್ವಾಸ್ಥ್ಯ ಕ್ಲಿನಿಕ್‌ನಲ್ಲಿ ಮಹಿಳೆಯರಿಗೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವುದರೊಂದಿಗೆ ಶುಚಿತ್ವ ಕಾಪಾಡಿಕೊಳ್ಳಬೇಕಾದ ಅನಿವಾರ್ಯತೆ, ಖಿನ್ನತೆಯಿಂದ ದೂರ ಮಾಡುವ ಸಂಬಂಧ ಮಾರ್ಗದರ್ಶನ ನೀಡಲಾಗುತ್ತದೆ.

ಮಹಿಳೆಯರನ್ನೇ ಹೆಚ್ಚಾಗಿ ಕಾಡುವ ಸಮಸ್ಯೆ: ವಿಶ್ವ ಆರೋಗ್ಯ ಸಂಸ್ಥೆ ಸಮೀಕ್ಷೆ ಮಾಡಿದ್ದು, ಅದರಲ್ಲಿ ಮಹಿಳೆಯರನ್ನು ಕಾಡುವ ಆರೋಗ್ಯ ಸಮಸ್ಯೆಗಳ ಪಟ್ಟಿ ಮಾಡಿದೆ. ಅದರಲ್ಲೂ ಅನಾರೋಗ್ಯ ಪೀಡಿತ ಮಹಿಳೆಯರ ಸಾವಿಗೆ ಪ್ರಮುಖ ಕಾರಣವನ್ನು ಅವಲೋಕಿಸಿದೆ. ಈ ವರದಿ ಅನುಸಾರ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್‌ನಲ್ಲಿ ಮಹಿಳೆಯರ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸೆ ನೀಡುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಪ್ರಮುಖವಾಗಿ ಹೃದಯ ರಕ್ತನಾಳದ ಖಾಯಿಲೆಗಳು(ಸಿವಿಡಿಎಸ್) ರೋಗಿಗಳ ಸಾವಿಗೆ ಪ್ರಮುಖ ಕಾರಣವಾಗುತ್ತಿದೆ. ಕ್ಯಾನ್ಸರ್ ಖಾಯಿಲೆಯಿಂದ ಸಾವಾಗುತ್ತಿರುವ ಪ್ರಕರಣಗಳು ಎರಡನೇ ಸ್ಥಾನ ಪಡೆದಿದ್ದು, ಮಹಿಳೆಯರಲ್ಲಿ ಸ್ತನ, ಶ್ವಾಸಕೋಶ, ಗರ್ಭಕಂಠ,ಕೋಲೋ ರೆಕ್ಟಲ್, ಥೈರಾಯ್ಡ್ ಕ್ಯಾನ್ಸರ್ ಸಮಸ್ಯೆಗಳು ಹೆಚ್ಚಾಗಿ ಕಾಡುತ್ತಿವೆ. ಈ ಆರೋಗ್ಯ ಸಮಸ್ಯೆಗಳನ್ನು ಪ್ರಾಥಮಿಕ ಹಂತದಲ್ಲೇ ಪತ್ತೆ ಮಾಡಿದರೆ, ರೋಗಿಗಳ ಸಾವಿನ ಪ್ರಮಾಣ ನಿಯಂತ್ರಿಸಬಹುದಾಗಿದೆ. ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಸ್ಥಾಪಿಸಲಾಗುತ್ತಿದೆ.

ಪಿಂಕ್ ಬಣ್ಣದ ಕೊಠಡಿ ಹಾಗೂ ಉದ್ದೇಶ : ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಅನ್ನು ಆರಂಭಿಸಲಾಗುತ್ತಿದೆ. ಮಹಿಳೆಯರಿಗಾಗಿಯೇ ಮೀಸಲಾಗಿರುವ ಹಿನ್ನೆಲೆಯಲ್ಲಿ ಕೊಠಡಿಗೆ 'ಪಿಂಕ್' ಬಣ್ಣ ಬಳಿಯಲಾಗಿದೆ. ಈ ಕ್ಲಿನಿಕ್‌ನಲ್ಲಿ ಮಹಿಳೆಯರು ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಲಾಗುತ್ತದೆ. ಹದಿಹರೆಯದವರಿಗೆ ದೈಹಿಕ ಬದಲಾವಣೆ, ನೈರ್ಮಲ್ಯ, ಸಂತಾನೋತ್ಪತ್ತಿ ಕುರಿತು ಅರಿವು ಮೂಡಿಸಿ, ಆಪ್ತ ಸಮಾಲೋಚನೆ ನಡೆಸಲಾಗುತ್ತದೆ. 30 ವರ್ಷ ಮೇಲ್ಪಟ್ಟವರಿಗೆ ಅಸಾಂಕ್ರಾಮಿಕ ರೋಗಗಳ ಬಗ್ಗೆ ತಪಾಸಣೆ ನಡೆಸಲಾಗುತ್ತದೆ. ತುರ್ತು ಸಂದರ್ಭದಲ್ಲಿ ತಜ್ಞ ವೈದ್ಯರ ಸೇವೆ ಕಂಡು ಬಂದರೆ ರೆಫರಲ್ ಸೇವೆ ಒದಗಿಸಲಾಗುತ್ತದೆ. ಯೋಗ, ಧ್ಯಾನ, ಆಹಾರ ಪದ್ಧತಿ, ಉತ್ತಮ ಜೀವನ ಶೈಲಿ ಕುರಿತಂತೆಯೂ ಜಾಗೃತಿ ಮೂಡಿಸಲಾಗುತ್ತದೆ. ಉತ್ತಮ ಉದ್ದೇಶದಿಂದ ಸ್ಥಾಪನೆ ಮಾಡುತ್ತಿರುವ ಮಹಿಳಾ ಸ್ವಾಸ್ಥ್ಯ ಕ್ಲಿನಿಕ್ ಮಹಿಳಾ ಸ್ನೇಹಿ ಕ್ಲಿನಿಕ್ ಆಗಿ ಪರಿಣಮಿಸಲಿದೆ.

ಕರ್ನಾಟಕ ಬ್ಯಾಂಕ್ ಡಿಜಿಟಲ್ ಬ್ಯಾಂಕಿಂಗ್ ಘಟಕಕ್ಕೆ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಚಾಲನೆ

ಗ್ರಾಹಕರಿಗಾಗಿ ಸುಲಭ ರೀತಿಯ ವಿವಿಧ ಸೌಲಭ್ಯಗಳು ಇಲ್ಲಿ ಲಭ್ಯ

ಮೈಸೂರು, ಅ.16(ಆರ್‌ಕೆಬಿ)– ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಜಯಚಾಮರಾಜೇಂದ್ರ ರಸ್ತೆಯಲ್ಲಿ ಕರ್ನಾಟಕ ಬ್ಯಾಂಕ್‌ನ 892ನೇ ಡಿಜಿಟಲ್ ಬ್ಯಾಂಕಿಂಗ್ ಘಟಕವನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಭಾನುವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ನಗರಪಾಲಿಕೆ ಸದಸ್ಯ ಎಂ.ಯು.ಸುಬ್ಬಯ್ಯ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕರ್ನಾಟಕ ಬ್ಯಾಂಕ್ ಮಹಾ ಪ್ರಬಂಧಕ ಅನಂತ ಪದ್ಮನಾಭ, ಮೈಸೂರು ವಲಯ ಕಚೇರಿ ಮುಖ್ಯಸ್ಥ ರಮೇಶ್‌ರಾವ್, ಎಸ್.ಗಾಯತ್ರಿ, ಡಿಜಿಟಲ್ ಬ್ಯಾಂಕಿಂಗ್ ಘಟಕದ ಹಿರಿಯ ಶಾಖಾ ಪ್ರಬಂಧಕ ಕೆ.ಎಸ್.ಅಪ್ಪಚ್ಚು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಯಚಾಮರಾಜೇಂದ್ರ ರಸ್ತೆಯಲ್ಲಿ ಕರ್ನಾಟಕ ಬ್ಯಾಂಕ್‌ನ 892ನೇ ಡಿಜಿಟಲ್ ಬ್ಯಾಂಕಿಂಗ್ ಘಟಕವನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿದರು. ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಬ್ಯಾಂಕ್‌ನ ಮಹಾಪ್ರಬಂಧಕ ಅನಂತ ಪದ್ಮನಾಭ, ಹಿರಿಯ ಶಾಖಾ ಪ್ರಬಂಧಕ ಕೆ.ಎಸ್.ಅಪ್ಪಚ್ಚು ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಕರ್ನಾಟಕ ಬ್ಯಾಂಕ್ ಡಿಜಿಟಲ್ ಬ್ಯಾಂಕಿಂಗ್ ಘಟಕದಲ್ಲಿನ ಸೌಲಭ್ಯಗಳು

ಕರ್ನಾಟಕ ಬ್ಯಾಂಕ್ ಡಿಜಿಟಲ್ ಬ್ಯಾಂಕಿಂಗ್ ಘಟಕದಲ್ಲಿ ಉಳಿತಾಯ ಬ್ಯಾಂಕ್ ಖಾತೆ ತೆರೆಯುವಿಕೆ, ಎಟಿಎಂ ಮೂಲಕ ನಗದು ಹಿಂಪಡೆಯುವಿಕೆ, ನಗದು ಠೇವಣಿ ಯಂತ್ರಗಳ ಮೂಲಕ ನಗದು ಠೇವಣಿ, ನೆಫ್ಟ್, ಐಎಂಪಿಎಸ್ ಬೆಂಬಲದಡಿ ಹಣ ವರ್ಗಾವಣೆ, ಮೊಬೈಲ್ ಅಪ್ಲಿಕೇಶನ್/ಇಂಟರ್ನೆಟ್ ಬ್ಯಾಂಕಿಂಗ್ ಸಕ್ರಿಯಗೊಳಿಸುವಿಕೆ, ನೋಂದಣಿ, ಗ್ರಾಹಕರ ದೂರು, ಕುಂದುಕೊರತೆಗಳ ನಿರ್ವಹಣೆ, ಪಾಸ್‌ಬುಕ್ ಮುದ್ರಣ, ತ್ವರಿತ ಡೆಬಿಟ್ ಕಾರ್ಡ್ ವಿತರಣೆ, ಕ್ರೆಡಿಟ್, ಡೆಬಿಟ್ ಕಾರ್ಡ್ ಬ್ಲಾಕ್ ಮಾಡುವುದು ಮತ್ತು ತೆರೆಯುವುದು, ವಿವಿಧ ಸ್ಥಾಯಿ ಸೂಚನೆಗಳ ರಸೀದಿ ಮತ್ತು ಆನ್‌ಲೈನ್ ಪ್ರಕ್ರಿಯೆ, ಕೆವೈಸಿ ವಿವರಗಳ ನವೀಕರಣ, ಗ್ರಾಹಕರ ಪ್ರತಿಕ್ರಿಯೆ ಮತ್ತು ಸಮೀಕ್ಷೆ, ಅಟಲ್ ಪಿಂಚಣಿ ಯೋಜನೆ (ಎಪಿವೈ), ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ (ಪಿಎಂಜೆಜೆಬಿವೈ), ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆ (ಪಿಎಂಎಸ್‌ಬಿವೈ)ಗಾಗಿ ವಿಮಾ ಆನ್–ಬೋರ್ಡಿಂಗ್, ಎಸ್‌ಎಂಎಸ್ ಬ್ಯಾಂಕಿಂಗ್ ಸೌಲಭ್ಯ, ಚಿಲ್ಲರೆ ಮತ್ತು ಎಂಎಸ್‌ಎಂಇ ಸಾಲಗಳಿಗೆ ಸಲಹೆ, ಸೂಚನೆ, ಸಾಲಗಳಿಗೆ ಅರ್ಜಿ, ವೈಯಕ್ತಿಕ ಸಾಲ, ವಾಹನ ಸಾಲಗಳು ಕಿಯೋಸ್ಕ್‌ನಲ್ಲಿ ತಾತ್ವಿಕ ಮಂಜೂರಾತಿ, ಅನುಮೋದನೆ, ವೈಯಕ್ತಿಕ ಸಾಲ ಪ್ರಕ್ರಿಯೆ ಲಭ್ಯವಿದೆ.

ಇದಿಷ್ಟೇ ಅಲ್ಲದೆ ಫಾಸ್ಟ್‌ಟ್ಯಾಗ್ ನೀಡಿಕೆ, ಡೀಮ್ಯಾಟ್ ಮತ್ತು ಆನ್‌ಲೈನ್ ಟ್ರೇಡಿಂಗ್ ಖಾತೆ ತೆರೆಯುವಿಕೆ, ಕರ್ನಾಟಕ ಬ್ಯಾಂಕ್ ಇನ್‌ಸ್ಟಾ–ಪೇ ಬಿಲ್ ಪಾವತಿ (ಮುನ್ಸಿಪಲ್ ತೆರಿಗೆ, ಆಸ್ಪತ್ರೆ, ತೆರಿಗೆ ಪಾವತಿಗಳು, ಮೊಬೈಲ್ ಪೋಸ್ಟ್–ಪೇಯ್ಡ್, ಎಲ್‌ಪಿಜಿ ಸಿಲಿಂಡರ್, ವಿದ್ಯುತ್, ವಿಮಾ ಪ್ರೀಮಿಯಮ್, ಫಾಸ್ಟ್‌ಟ್ಯಾಗ್, ವಾಟರ್ ಬಿಲ್ ಇತ್ಯಾದಿ.). ಆನ್‌ಲೈನ್ ಸಾಲ ಮರುಪಾವತಿ, ಕೆಬಿಎಲ್ ಶಾಲಾ ಶುಲ್ಕ ಪಾವತಿ ಆನ್‌ಲೈನ್, ಚೆಕ್‌ಗಳಿಗೆ ಧನಾತ್ಮಕ ಪಾವತಿ ವ್ಯವಸ್ಥೆ, 15ಹೆಚ್'ಜಿ ಆನ್‌ಲೈನ್ ಸಲ್ಲಿಕೆ, ಆನ್‌ಲೈನ್ ಭದ್ರತಾ ಠೇವಣಿ ಲಾಕರ್, ಕರ್ನಾಟಕ ಬ್ಯಾಂಕ್ ಸಹ–ಬ್ರಾಂಡೆಡ್ ಕ್ರೆಡಿಟ್ ಕಾರ್ಡ್.

ಡಿಜಿಟಲ್ ಬ್ಯಾಂಕಿಂಗ್ ಘಟಕಗಳಲ್ಲಿ ಕಿಯೋಸ್ಕ್ ಇದೆ: ಖಾತೆ ತೆರೆಯುವಿಕೆಯೊಂದಿಗೆ ಮಲ್ಟಿ–ಫಂಕ್ಷನ್ ಕಿಯೋಸ್ಕ್, ಡೆಬಿಟ್ ಕಾರ್ಡ್ ನೀಡುವಿಕೆ, ವೈಯಕ್ತಿಕ ಸಾಲ, ವಾಹನ ಸಾಲ, ಗೃಹ ಸಾಲ ಮತ್ತು ಎಂಎಸ್‌ಎಂಇ ತಾತ್ವಿಕ ಮಂಜೂರಾತಿ. ವೈಫೈ ಸಕ್ರಿಯ ವ್ಯವಸ್ಥೆ. ಪಾಸ್‌ಬುಕ್ ಪ್ರಿಂಟಿಂಗ್ ಕಿಯೋಸ್ಕ್ ಸೇರಿದಂತೆ ಅನೇಕ ಸೇವೆಗಳು ಲಭ್ಯವಿದೆ.

> ಆಜಾದಿ ಕಾ ಅಮೃತ್ ಮಹೋತ್ಸವ 75ನೇ ವರ್ಷದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ದೇಶದ ಸುಮಾರು 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಪ್ರಾರಂಭಿಸಿದ್ದು, ದೇಶದ ಮೂಲೆ ಮೂಲೆಗೂ ಡಿಜಿಟಲ್ ವ್ಯವಸ್ಥೆಯನ್ನು ತಲುಪಿಸುವುದು ಪ್ರಧಾನಿಯವರ ಉದ್ದೇಶವಾಗಿದೆ. ಕಚೇರಿಗಳಲ್ಲಿ ಬಯೋಮೆಟ್ರಿಕ್ ಮತ್ತು ಬ್ಯಾಂಕ್ ಮತ್ತು ಇತರೆ ಎಲ್ಲಾ ವ್ಯವಹಾರಗಳಲ್ಲಿ ಆಧಾರ್ ಕಾರ್ಡ್ ಲಿಂಕ್ ಮಾಡಿರುವುದರಿಂದ ದೇಶದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆ.
>
> - **ಎ.ನಾರಾಯಣಸ್ವಾಮಿ,** ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ

ಸಿದ್ದರಾಮಯ್ಯ ಬಗ್ಗೆ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಖಂಡನೆ



ಮೈಸೂರು, ಅ.16(ಆರ್‌ಕೆಬಿ)– ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಗ್ಗೆ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರು ತೀರಾ ಕೀಳು ಮಟ್ಟದ ಅವಾಚ್ಯ ಪದ ಬಳಸಿ ಅವಹೇಳನ ಮಾಡಿರುವುದು ಖಂಡನೀಯ. ತಮ್ಮ ತಲೆಯನ್ನು ಬೇರೆಯವರ ಕೈಗೆ ಕೊಟ್ಟಿರುವುದರಿಂದಲೇ ಅವರು ಈ ರೀತಿ ಮಾತನಾಡುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಛಲವಾದಿ ನಾರಾಯಣಸ್ವಾಮಿಯಂತಹ ದುರ್ಬಲ ಮನಸ್ಥಿತಿಯ ನಾಯಕರನ್ನು ದಲಿತ ಮತ್ತು ಹಿಂದುಳಿದ ನಾಯಕರ ಮೇಲೆ ಛೂ ಬಿಡುವ ಮೂಲಕ ಕೋಮು ವಾದಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಆಕ್ರಮಣಕಾರಿ ನೀತಿ ಪ್ರದರ್ಶಿಸುತ್ತಿದೆ. ಇದರ ಭಾಗವಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಛಲವಾದಿ ನಾರಾಯಣಸ್ವಾಮಿ ಅವಹೇಳನಕಾರಿ ಪದ ಬಳಸಿ ನಿಂದಿಸಿದ್ದಾರೆ ಎಂದು ಟೀಕಿಸಿದರು.

ದಲಿತ ಹಾಗೂ ಹಿಂದುಳಿದ ವರ್ಗಗಳಲ್ಲದೆ ಇಡೀ ಜನಸಮೂಹದ ನಾಯಕ ಸಿದ್ದರಾಮಯ್ಯ ಎಂದೆಂದಿಗೂ ದಲಿತರ ಪರವಾಗಿದ್ದಾರೆ. ಅವರ ಆಡಳಿತದ ವೇಳೆ ದಲಿತ ನಾಯಕರಿಗೆ ಒಳ್ಳೆಯ ಖಾತೆ ನೀಡಿದ್ದಲ್ಲದೆ, ದಲಿತರ ಕಲ್ಯಾಣಕ್ಕಾಗಿ ಹಲವಾರು ಉಪಯುಕ್ತ ಯೋಜನೆ ರೂಪಿಸಿದ್ದಾರೆ. ಇಡೀ ದೇಶಕ್ಕೆ ಮಾದರಿಯಾಗುವಂತೆ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ದಲಿತ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಪಿ– ಟಿಎಸ್‌ಪಿ ಯೋಜನೆ ಜಾರಿಗೆ ತಂದು ಶೇ.24.01 ರ ಅನುದಾನ ನೀಡಲಾಯಿತು. ಕಾಮಗಾರಿಗಳ ಗುತ್ತಿಗೆಯಲ್ಲಿ 50 ಲಕ್ಷದವರೆಗೆ ದಲಿತರಿಗೆ ನೀಡುವ ಯೋಜನೆ ಜಾರಿ ಮಾಡಿದರು. ಸುಪ್ರೀಂ ಕೋರ್ಟ್ ಬಡ್ತಿ ಮೀಸಲಾತಿ ನೀಡಬಾರದೆಂದು ತೀರ್ಪು ನೀಡಿದ್ದರೂ ಸಹ ದಲಿತರ ಉದ್ಧಾರಕ್ಕಾಗಿ ಬಡ್ತಿ ಮೀಸಲಾತಿ ಜಾರಿಗೆ ತಂದರು ಎಂದು ವಿವರಿಸಿದರು.

ಜನಸಂಖ್ಯೆಗನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಿಸಲು ನ್ಯಾ.ನಾಗಮೋಹನದಾಸ್ ಆಯೋಗ ರಚಿಸಿದರು. ಹೀಗಿದ್ದರೂ ಅವರು ದಲಿತ ವಿರೋಧಿಯಾಗಿದ್ದಾರೆಂದು ಛಲವಾದಿ ನಾರಾಯಣಸ್ವಾಮಿ ಹೇಳುತ್ತಿರುವುದರಲ್ಲಿ ಯಾವುದೇ ಅರ್ಥವಿಲ್ಲ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಿದ್ದಕ್ಕಾಗಿ ಅವರು ಕ್ಷಮೆ ಯಾಚಿಸಬೇಕು ಎಂದು ಒತ್ತಾಯಿಸಿದರು.

ದಲಿತ ಅಪ್ರಾಪ್ತ ಹೆಣ್ಣು ಮಗುವಿನ ಮೇಲೆ ಮಠಾಧೀಶರೊಬ್ಬರು ದೌರ್ಜನ್ಯ ಎಸಗಿದ ಆರೋಪ ಕೇಳಿಬಂದಾಗ ಯಾರೊಬ್ಬ ಬಿಜೆಪಿ ಶಾಸಕರೂ ಖಂಡಿಸಲಿಲ್ಲ ಎಂದು ಜರಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಎಡತೊರೆ ನಿಂಗರಾಜು, ಹರೀಶ್, ಶ್ರೀಧರ್, ಮೈಸೂರು ಬಸಣ್ಣ ಉಪಸ್ಥಿತರಿದ್ದರು.



ಸಿದ್ದಗಂಗಾ ಕ್ಷೇತ್ರದಲ್ಲಿ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಗದ್ದುಗೆಗೆ ನವೆಂಬರ್ 21 ರಂದು ನಡೆಯುವ ತೃತೀಯ ವರ್ಷದ ಲಕ್ಷ ಪುಷ್ಪ ಬಿಲ್ವಾರ್ಚನೆ ಅಂಗವಾಗಿ ಸುತ್ತೂರು ಶ್ರೀಮಠಕ್ಕೆ ಆಗಮಿಸಿದ್ದ ಪ್ರಚಾರ ರಥವನ್ನು ಮಂಗಳವಾದ್ಯಗಳ ಸಮೇತ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರು, ಗ್ರಾಮಸ್ಥರು ಹಾಗೂ ವಸತಿ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಯೋಗ, ಪರಿಸರ ಸಂರಕ್ಷಣೆ ಜಾಗೃತಿಗಾಗಿ ಮೈಸೂರಿನ ಯುವಕ ದೇಶಾದ್ಯಂತ ಪಾದಯಾತ್ರೆ



ಮೈಸೂರು, ಅ.16(ಎಂಟಿವೈ)– ಯೋಗದ ಮಹತ್ವ ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಮೈಸೂರು ತಾಲೂಕಿನ ಜಯಪುರ ಹೋಬಳಿ ಉದ್ಬೂರು ಗ್ರಾಮದ ಕೃಷ್ಣನಾಯಕ ಎಂಬ ಯುವಕ ದೇಶಾದ್ಯಂತ ಕೈಗೊಂಡಿರುವ ಪಾದಯಾತ್ರೆಗೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ನಿಶಾನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು.

ಅರಮನೆಯ ಉತ್ತರದ್ವಾರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಭಾನುವಾರ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ಪಾದಯಾತ್ರೆಗೆ ಚಾಲನೆ ನೀಡಿ, ಶುಭ ಕೋರಿದರು.

ಉದ್ಬೂರು ಗ್ರಾಮದ ಕೃಷ್ಣನಾಯಕ ಇಂದಿನಿಂದ ಆರಂಭಿಸಿರುವ ಪಾದಯಾತ್ರೆ, ಮುಂದಿನ ಎರಡು ವರ್ಷ ಕಾಲ ನಡೆಯಲಿದೆ. ಮೈಸೂರಿಂದ ಹುಣಸೂರು, ಕುಶಾಲನಗರ, ಮಡಿಕೇರಿ, ಕಾಸರಗೂಡು ಮೂಲಕ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ನವದೆಹಲಿ, ಜಮ್ಮು ಮತ್ತು ಕಾಶ್ಮೀರಕ್ಕೆ ಕಾಲ್ನಡಿಗೆಯಲ್ಲಿ ತೆರಳಲಿದ್ದಾರೆ. ಪಾದಯಾತ್ರೆ ವೇಳೆ ಮಾರ್ಗಮಧ್ಯೆ ನಗರ ಹಾಗೂ ಪಟ್ಟಣಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಯೋಗ ಹಾಗೂ ಪರಿಸರ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸಲಾಗುತ್ತದೆ.

ಈ ಸಂದರ್ಭದಲ್ಲಿ ಯೋಗ ಗುರು ರಾಘವೇಂದ್ರ ಪೈ, ಉದ್ಬೂರು ಗ್ರಾಪಂ ಅಧ್ಯಕ್ಷ ಕೃಷ್ಣ, ಡಾ.ಪ್ರಶಾಂತ್, ರಂಗಸ್ವಾಮಿ, ದಯಾಕರ್ ಉಪಸ್ಥಿತರಿದ್ದರು.

ಎರಡನೇ ದಿನವೂ ಸೆರೆ ಸಿಗದ ಮೊಸಳೆ

ಮೈಸೂರು, ಅ.16(ಎಂಟಿವೈ)– ಮೈಸೂರಿನ ಎಲೆತೋಟದ ಬಳಿ ಚರಂಡಿಯಲ್ಲಿ ಶನಿವಾರ ಕಾಣಿಸಿಕೊಂಡು ಆತಂಕವನ್ನುಂಟು ಮಾಡಿದ ಬೃಹತ್ ಗಾತ್ರದ ಮೊಸಳೆ ಸೆರೆಗೆ ಭಾನುವಾರವೂ ಅರಣ್ಯ ಸಿಬ್ಬಂದಿಗಳು ಪತ್ತೆ ಕಾರ್ಯಾಚರಣೆ ನಡೆಸಿ ಬರಿಗೈಯ್ಯಲ್ಲಿ ವಾಪಸ್ಸಾದರು.

ದೊಡ್ಡ ಮೋರಿಯಲ್ಲಿ ಕಾಣಿಸಿಕೊಂಡಿದ್ದ ಮೊಸಳೆ ಸೆರೆಗೆ ಬಲೆ ಹಾಗೂ ಹಗ್ಗ ಬಳಸಿ ಅರಣ್ಯ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದರು. ಮೊಸಳೆಯನ್ನು ಚರಂಡಿಯಿಂದ ಮೇಲಕ್ಕೆಳೆಯುವ ವೇಳೆ ಹಗ್ಗದಿಂದ ನುಣುಚಿಕೊಂಡ ಮೊಸಳೆ ಚರಂಡಿ ನೀರಲ್ಲಿ ಪರಾರಿಯಾಗಿತ್ತು. ಜನವಸತಿ ಪ್ರದೇಶದತ್ತ ಬರಬಹುದೆಂಬ ಆತಂಕದಿಂದ ಅರಣ್ಯ ಇಲಾಖೆಯ ಸಿಬ್ಬಂದಿಗಳು ಸ್ಥಳೀಯರಲ್ಲಿ ಜಾಗೃತರಾಗಿರುವಂತೆ ಸೂಚಿಸಿದ್ದರು.

ಮದರಸಾಗಳ ಚಟುವಟಿಕೆ ಅಧ್ಯಯನಕ್ಕೆ ಅಧಿಕಾರಿ ವರ್ಗದ ಸಮಿತಿ ರಚನೆ ವಿಚಾರ

ಕುರಾನ್ ಬೋಧನೆಗೆ ಯಾವುದೇ ತಡೆಯೊಡ್ಡುವುದಿಲ್ಲವೆಂದು ಘೋಷಿಸಬೇಕು

ತಜ್ಞರು, ವಿವಿಧ ಪಕ್ಷದ ಪ್ರಮುಖರ ಅಧಿಕಾರೇತರ ಸಮಿತಿಯನ್ನೂ ರಚಿಸಬೇಕು ; ಮಾಜಿ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ಒತ್ತಾಯ

ಮೈಸೂರು,ಅ.16(ಪಿಎಂ)– ಮದರಸಾಗಳ ಚಟುವಟಿಕೆ ಅಧ್ಯಯನಕ್ಕೆ ಸರ್ಕಾರ ಕೇವಲ ಅಧಿಕಾರಿ ವರ್ಗದ ಸಮಿತಿ ರಚಿಸಿದ್ದು, ತಜ್ಞರು, ವಿವಿಧ ಪಕ್ಷದ ಪ್ರಮುಖರು ಒಳಗೊಂಡ ಅಧಿಕಾರಿಗಳೇತರ ಸಮಿತಿಯನ್ನೂ ರಚಿಸಿ, ಕುರಾನ್ ಬೋಧನೆಗೆ ಯಾವುದೇ ತಡೆಯೊಡ್ಡುವುದಿಲ್ಲವೆಂದು ಘೋಷಿಸಬೇಕು. ಕುರಾನ್ ಜೊತೆಗೆ ಬೇರೆ ವಿಷಯಗಳ ಕಲಿಕೆಗೆ ಇಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಸರ್ಕಾರ ಗಮನಿಸಬೇಕು. ಇಲ್ಲವಾದರೆ ಪಠ್ಯಪುಸ್ತಕದ ರೀತಿಯಲ್ಲೇ ಇದೂ ಒಂದು ವಿವಾದವಾಗಲಿದೆ ಎಂದು ಮಾಜಿ ಸಚಿವ ಪ್ರೊ.ಬಿ.ಕೆ.ಚಂದ್ರಶೇಖರ್ ಎಚ್ಚರಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮದರಸಾಗಳ ಚಟುವಟಿಕೆಗಳ ಬಗ್ಗೆ ಅಧ್ಯಯನಕ್ಕಾಗಿ ಅಧಿಕಾರಿಗಳನ್ನು ಒಳಗೊಂಡು ಸಮಿತಿ ರಚನೆ ಮಾಡಿರುವುದಾಗಿ ಬಿ.ಸಿ.ನಾಗೇಶ್ ನಾಲ್ಕೈದು ದಿನಗಳ ಹಿಂದೆ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಸಚಿವರು ಪರಿಶೀಲಿಸಲು ಸಮಿತಿ, ಮದರಸಾಗಳಿಗೆ ಹೋಗಲಿದೆ ಎಂದು ಹೇಳಿದ್ದು, ಈ 'ಪರಿಶೀಲನೆ' ಎಂಬ ಪದ ಪ್ರಯೋಗವೇ ಭಯ ಹುಟ್ಟಿಸಲಿದೆ. ಹೀಗೆ ಹೇಳಿರುವುದೇ ತಪ್ಪು ಎಂದರು.

ಕುರಾನ್ ಹೇಳಿಕೊಡುವ ಜೊತೆಗೆ ಎಲ್ಲಾ ಮದರಸಾಗಳಲ್ಲೂ ಕಡ್ಡಾಯವಾಗಿ ವಿಜ್ಞಾನ, ಗಣಿತ, ಪ್ರಾದೇಶಿಕ ಭಾಷೆ, ಇಂಗ್ಲಿಷ್ ಕಲಿಕೆಗೆ ಅವಕಾಶವಿರಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಪರಿವರ್ತನೆ ತರಬಹುದು. ದೇಶದಲ್ಲಿ ಸುಮಾರು 40 ಸಾವಿರ ಮದರಸಾಗಳಿವೆ. ಈ ಪೈಕಿ ರಾಜ್ಯದಲ್ಲಿ 940 ಮದರಸಾಗಳಿವೆ. 'ರಾಜ್ಯ ಮದರಸಾ ಶಿಕ್ಷಣ ಮಂಡಳಿ'ಯಲ್ಲಿ ಮದರಸಾಗಳು ನೋಂದಣಿ ಆಗಿದ್ದರೆ ಅವುಗಳಿಗೆ ಅನುದಾನ ದೊರೆಯಲಿದೆ. ನೋಂದಣಿ ಕಡ್ಡಾಯವೆಂಬ ನಿಯಮವೇನಿಲ್ಲ. ನೋಂದಣಿಯಾದಲ್ಲಿ ಶಿಕ್ಷಣ ಇಲಾಖೆ ಅಧೀನಕ್ಕೆ ಇವು ಒಳಪಡುತ್ತವೆ ಎಂದು ಹೇಳಿದರು.



ವೇದ ಪಾಠ ಶಾಲೆಗಳಿಗೂ ಅನ್ವಯ: ಮಂಡಳಿಯಲ್ಲಿ ನೋಂದಣಿ ಆಗದ ಮದರಸಾಗಳಿಗೆ ಸರ್ಕಾರದ ಸಮಿತಿ ಪರಿಶೀಲನೆಗೆ ಹೋಗಲಾಗದು ಎಂಬ ಭಾವನೆ ನನ್ನದು. ಏಕೆಂದರೆ ಸಂವಿಧಾನ 29 ಮತ್ತು 30ನೇ ಅಧಿನಿಯಮಗಳಲ್ಲಿ ಯಾವುದೇ ಧಾರ್ಮಿಕ ಗುಂಪುಗಳು ತಮ್ಮ ಧಾರ್ಮಿಕ ವಿಚಾರಗಳಿಗೆ ಶಿಕ್ಷಣ ಸಂಸ್ಥೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ವೇದ ಪಾಠ ಶಾಲೆಗಳಿಗೂ ಇದು ಅನ್ವಯಿಸುತ್ತದೆ ಎಂದರು.

10 ಮದರಸಾಗಳಲ್ಲಿ ಸುಧಾರಣೆ ತಂದಿದ್ದೆ: 2008ರಲ್ಲಿ ನಾನು ವಿಧಾನಪರಿಷತ್ ಸಭಾಪತಿ ಆಗಿದ್ದ ಸಂದರ್ಭದಲ್ಲಿ ಬೆಂಗಳೂರಿನ 10 ಮದರಸಾ ಶಾಲೆಗಳಿಗೆ ತಲಾ ಎರಡು ಕಂಪ್ಯೂಟರ್ ಕೊಡಿಸಿದ್ದೆ. ಸದರಿ 10 ಶಾಲೆಗಳು ಬಹಳ ಬಡವರು ಇದ್ದ ಪ್ರದೇಶದಲ್ಲಿದ್ದವು. 4 ತಿಂಗಳ ಬಳಿಕ ಈ ಪೈಕಿ ಐದಾರು ಮದರಸಾಗೆ ಭೇಟಿ ನೀಡಿದ್ದೆ. ಅಲ್ಲಿ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣ ಪಡೆದಿದ್ದರು. ಈ ರೀತಿಯಲ್ಲಿ ಸಾಮರಸ್ಯದಿಂದ ಮದರಸಾಗಳಲ್ಲಿ ಕುರಾನ್ ಜೊತೆಗೆ ಬೇರೆ ವಿಷಯಗಳ ಕಲಿಕೆಗೆ ಉತ್ತೇಜನ ನೀಡಲು ಅವಕಾಶವಿದ್ದು, ಈ ನಿಟ್ಟಿನಲ್ಲಿ ಕ್ರಮ ವಹಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಆರ್‌ಎಸ್‌ಎಸ್ ಹಿಡಿತದಲ್ಲಿ ಸಚಿವರು: ಶಿಕ್ಷಣ ಸಚಿವರು ಸೇರಿದಂತೆ ಎಲ್ಲಾ ಸಚಿವರಿಗೆ ಸಂಪೂರ್ಣ ಸ್ವಾತಂತ್ರ್ಯ ಇದ್ದಿದ್ದರೆ ಸ್ವಂತ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರು. ಅಂತಹ ಸಾಮರ್ಥ್ಯ ಹೊಂದಿರುವ ಸಚಿವರು ಬಿಜೆಪಿಯಲ್ಲಿದ್ದಾರೆ. ಆದರೆ ಇವರು ಸಂಪೂರ್ಣ ಆರ್‌ಎಸ್‌ಎಸ್ ನಿಯಂತ್ರಣದಲ್ಲಿದ್ದಾರೆ ಎಂದರು.

ವಿಚಾರ ವಿನಿಮಯಕ್ಕೆ ಸಿದ್ಧ: ಉದ್ದೇಶಪೂರ್ವಕವಾಗಿಯೇ 'ಟಿಪ್ಪು ಎಕ್ಸ್‌ಪ್ರೆಸ್' ಹೆಸರು ಕೈಬಿಡಲಾಗಿದೆ ಎಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆ ಬಗ್ಗೆ ಮಾತನಾಡಿದ ಅವರು, ಹೈದರ್ ಮತ್ತು ಟಿಪ್ಪು ಉತ್ತಮ ಆಡಳಿತಗಾರರು. ಇದಕ್ಕೆ ಸಾಕಷ್ಟು ದಾಖಲೆಗಳು ಲಭ್ಯವಿವೆ. ಕಂದಾಯ ಮತ್ತು ಕೃಷಿ ಎಂಬ 2 ಪ್ರಮುಖ ಇಲಾಖೆಗಳೂ ಸೇರಿದಂತೆ ಟಿಪ್ಪು ಒಟ್ಟು 7 ಇಲಾಖೆಗಳನ್ನು ಸೃಜಿಸಿ, ವ್ಯವಸ್ಥಿತ ಆಡಳಿತ ನೀಡಿದ್ದರು. ರೈತರ ಬಗ್ಗೆ ಕಾಳಜಿ ಹೊಂದಿದ್ದ ಟಿಪ್ಪು, ವ್ಯಾಪಾರ ಮತ್ತು ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಇವು ನಾನು ತಿಳಿದಿರುವ ವಿಚಾರಗಳು. ನನ್ನದು ತಪ್ಪಿದ್ದರೆ ವಿಚಾರ ವಿನಿಮಯ ಮೂಲಕ ಅವರಿಂದ ಕಲಿಯಲು ಸಿದ್ಧನಿದ್ದೇನೆ. ಅದಕ್ಕಾಗಿ ಅವರು ಸಮಯ ನಿಗದಿ ಮಾಡಬಹುದು. ಇದು ಸವಾಲು ಅಲ್ಲ, ಸವಾಲು ಹಾಕುವಷ್ಟು ದೊಡ್ಡವನು ನಾನಲ್ಲ. ಗೌರವಪೂರ್ವಕವಾಗಿ ಒಪ್ಪಿಗೆ ಸೂಚಿಸಬಹುದು ಎಂದು ಪ್ರೊ.ಬಿ.ಕೆ.ಚಂದ್ರಶೇಖರ್ ತಿಳಿಸಿದರು. ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ ಗೋಷ್ಠಿಯಲ್ಲಿದ್ದರು.

ಹಸಿವು ನೀಗಿಸುವಲ್ಲಿ ಹಿಂದುಳಿದ ಭಾರತ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಕ್ಷೇತ್ರದಲ್ಲಿ ಭಾರತ ಹಿಂದುಳಿಯುತ್ತಿರುವುದು ದಾಖಲಾಗುತ್ತಿದೆ. ಹಸಿವು ನೀಗಿಸುವಲ್ಲಿ ದೇಶವು ಕಳಪೆ ಸ್ಥಾನ ಪಡೆದಿದೆ. ಭಾರತವು ಪ್ರಸಕ್ತ ಸಾಲಿನ ಜಾಗತಿಕ ಹಸಿವು ಸೂಚ್ಯಂಕದಲ್ಲಿ 121 ದೇಶಗಳ ಪಟ್ಟಿಯಲ್ಲಿ 107ನೇ ಸ್ಥಾನಕ್ಕೆ ಕುಸಿದಿದೆ. ನಮ್ಮ ದೇಶಕ್ಕಿಂತ ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳು ಮೇಲಿವೆ. ಅಲ್ಲದೆ, ಸರ್ಕಾರ ಸರಿಯಾದ ಕ್ರಮ ವಹಿಸಿದ್ದರೆ ಕೋವಿಡ್ ಸೋಂಕಿನಿಂದ ಲಕ್ಷಾಂತರ ಮಂದಿ ಉಳಿಸಬಹುದಿತ್ತು ಎಂದು ಸಂಸತ್ ಸಮಿತಿ ಇತ್ತೀಚೆಗಷ್ಟೇ ವರದಿ ನೀಡಿದೆ. ಆದರೆ ಇವರು ಎಲ್ಲಾ ಅಂಕಿ–ಅಂಶ ಮರೆಮಾಚುತ್ತಾರೆ.

ಮೈಸೂರು ಮಿತ್ರ

ಸೋಮವಾರ 17 ಅಕ್ಟೋಬರ್ 2022

ಕೂಲಿ ಕೆಲಸವಾದರೂ ಪರವಾಗಿಲ್ಲ, ಅರಣ್ಯ ಇಲಾಖೆ ಕೆಲಸ ಬೇಡ

• ಜಿಲ್ಲಾಧಿಕಾರಿ, ಶಾಸಕರಿಗೆ ಕೈಮುಗಿದ ಕರಿಯಪ್ಪನ ಕುಟುಂಬ • 4.12 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ



ಹೆಚ್.ಡಿ.ಕೋಟೆ, ಅ.16– ಕೂಲಿ ಕೆಲಸ ಮಾಡಿದರೂ ಪರವಾಗಿಲ್ಲ. ಅರಣ್ಯ ಇಲಾಖೆ ಕೆಲಸ ಮಾತ್ರ ಬೇಡ ಎಂದು ಮೃತ ಕರಿಯಪ್ಪನ ಕುಟುಂಬದವರು ಶಾಸಕರು ಹಾಗೂ ಜಿಲ್ಲಾಧಿಕಾರಿಗಳಿಗೆ ಕೈ ಮುಗಿದರು.

ಅರಣ್ಯ ಇಲಾಖೆ ವಶದಲ್ಲಿದ್ದ ವೇಳೆ ಸಾವನ್ನಪ್ಪಿದ ತಾಲೂಕಿನ ಹೊಸಹಳ್ಳಿ ಹಾಡಿಯ ಆದಿವಾಸಿ ಕರಿಯಪ್ಪ ಅವರ ಮನೆಗೆ ಭಾನುವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಸರ್ಕಾರದ ವತಿಯಿಂದ ನೀಡಿದ 4.12 ಲಕ್ಷ ರೂ.ಗಳ ಪರಿಹಾರದ ಚೆಕ್ ಅನ್ನು ಕುಟುಂಬದವರಿಗೆ ನೀಡಿ, ಸಾಂತ್ವನ ಹೇಳಿ ಅರಣ್ಯ ಇಲಾಖೆಯಲ್ಲಿ ಕೆಲಸ ಕೊಡಿಸುವ ಭರವಸೆ ನೀಡಿದರು.

ಈ ವೇಳೆ ಕರಿಯಪ್ಪನವರ ತಾಯಿ ಮಾಚಮ್ಮ, ಮಕ್ಕಳಾದ ಸವಿತಾ, ಕುಮಾರಿ, ಸತೀಶ, ಕುಮಾರ ಜಿಲ್ಲಾಧಿಕಾರಿಗಳು ಹಾಗೂ ಶಾಸಕರಿಗೆ ಕೈ ಮುಗಿದು ಅರಣ್ಯ ಇಲಾಖೆಯ ಕೆಲಸ ಮಾತ್ರ ನಮಗೆ ಬೇಡ ಸ್ವಾಮಿ ಇಂತಹ ನೀಚ ಅಧಿಕಾರಿಗಳ ಜೊತೆ ನಾವು ಕೆಲಸ ಮಾಡಲು ಸಿದ್ಧರಿಲ್ಲ. ನಾವು ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತೇವೆ ಎಂದರು.

ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮಾತನಾಡಿ, ಸರ್ಕಾರದಿಂದ ಸಿಗಬೇಕಾದ ಎಲ್ಲಾ ರೀತಿಯ ನೆರವನ್ನು ಮೃತ ಕರಿಯಪ್ಪ ಅವರ ಕುಟುಂಬಕ್ಕೆ ನೀಡುವ ಜೊತೆಗೆ ನ್ಯಾಯ ಒದಗಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಗಿರಿಜನ ಆದಿವಾಸಿ ಮಕ್ಕಳಿಗೆ ನೇರವಾಗಿ 10ನೇ ತರಗತಿಗೆ ಪ್ರವೇಶ ನೀಡಲು ಅವಕಾಶ ಇದೆ. ಮಕ್ಕಳೆಲ್ಲ ವಿದ್ಯಾಭ್ಯಾಸ ಮಾಡಿ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕರಿಯಪ್ಪನವರ ಪುತ್ರ ಸತೀಶ್ ನಮಗೆ ಶಿಕ್ಷಣ ತಲೆಗೆ ಹೋಗುವುದಿಲ್ಲ. ನಾವು ಕೂಲಿ ಮಾಡಿಕೊಂಡೇ ಜೀವನ ಸಾಗಿಸುತ್ತೇವೆ. ನಮ್ಮ ತಂದೆ ಸಾವಿಗೆ ಕಾರಣರಾದ ಭ್ರಷ್ಟ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗೆ ಶಿಕ್ಷೆ ಕೊಡಿಸಿ ನಮಗೆ ನ್ಯಾಯ ಕೊಡಿಸಬೇಕು ಎಂದು ಮನವಿ ಮಾಡಿಕೊಂಡರು. ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಕರಿಯಪ್ಪನವರ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾನೂನಿನ ಅಡಿಯಲ್ಲಿ ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ಪ್ರತಿ 3 ತಿಂಗಳಿಗೆ ನಡೆಯಲಿರುವ ಜಿಲ್ಲಾಧಿಕಾರಿಗಳ ಎಸ್‌ಸಿ, ಎಸ್‌ಟಿ ಸಭೆಯಲ್ಲಿ ಈ ಪ್ರಕರಣದ ಬಗ್ಗೆ ಪ್ರಸ್ತಾಪಿಸುತ್ತೇನೆ. ಆದಿವಾಸಿ ಅಮಾಯಕರಿಗೆ ಅನ್ಯಾಯ ಆಗದ ರೀತಿ ಕ್ರಮ ಕೈಗೊಂಡು ನ್ಯಾಯ ಕೊಡಿಸುವ ಕೆಲಸ ಮಾಡುತ್ತೇನೆ ಎಂದರು.

ಕರಿಯಪ್ಪನವರ ಮಗ ಸತೀಶ್ ಅವರಿಗೆ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡಲು ಇಷ್ಟವಿಲ್ಲದಿದ್ದಲ್ಲಿ ಪರಿಶಿಷ್ಟ ಕಲ್ಯಾಣ ವರ್ಗಗಳ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಿ ಕೊಡುವ ಸಂಪೂರ್ಣ ಜವಾಬ್ದಾರಿ ನನ್ನದು ಎಂದರು.

ಹೊಸಹಳ್ಳಿ ಹಾಡಿಗೆ ಜಿಲ್ಲಾಧಿಕಾರಿ ಹಾಗೂ ಶಾಸಕರು ಭೇಟಿ ನೀಡಿದ್ದರೂ, ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳದಲ್ಲಿ ಹಾಜರಾಗದೇ ನಾಪತ್ತೆಯಾಗಿದ್ದರು. ಈ ವೇಳೆ ಸಿಪಿಐ ಆನಂದ್, ಪಂಚಾಕ್ಷಿತ ವ್ಯವಸ್ಥಾಪಕ ದಿವಾಕರ್, ಸಮಾಜ ಕಲ್ಯಾಣ ಅಧಿಕಾರಿ ರಾಮಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ನಾರಾಯಣ ಸ್ವಾಮಿ, ಆದಿವಾಸಿ ಬುಡಕಟ್ಟು ಸಮಾಜದ ಅಧ್ಯಕ್ಷ ವಡ್ಡರಗುಡಿ ಚಿಕ್ಕಣ್ಣ, ಶೈಲೇಂದ್ರ, ವೇಣು, ಮಂಜು ಪುಟ್ಟಬಸವ, ಗ್ರಾಪಂ ಮಾಜಿ ಅಧ್ಯಕ್ಷ ಕಾಳಸ್ವಾಮಿ, ಸುರೇಶ್ ಸೇರಿದಂತೆ ಅನೇಕರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ರೋರ್ಸ್ಚಾಚ್ (ಮ): ಬೆ.10.30ಕ್ಕೆ, ರಾ.10.05ಕ್ಕೆ, ಕಾಂತಾರ (ಕ): ಮ.1.20ಕ್ಕೆ, ಗುಡ್‌ಬೈ (ಹಿಂ): ಸಂ.4.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಸಂ.6.55ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.11ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ತೋತಾಪುರಿ–1 (ಕ): ಮ.1.30ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ಸಂ.4.15ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.10ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.15ಕ್ಕೆ, ಮ.12.30ಕ್ಕೆ, ಮ.3.35ಕ್ಕೆ, ಸಂ.6.40ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.9ಕ್ಕೆ, ಕಾಂತಾರ (ಕ): ಬೆ.11.35ಕ್ಕೆ, ಮ.2.40ಕ್ಕೆ, ಸಂ.5.45ಕ್ಕೆ, ರಾ.8.50ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.9.45ಕ್ಕೆ, ರಾ.7ಕ್ಕೆ, ಗುರು ಶಿಷ್ಯರು (ಕ): ಮ.1ಕ್ಕೆ, ಡಾಕ್ಟರ್ ಜಿ (ಹಿಂ): ಸಂ.4.20ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಡಾಕ್ಟರ್ ಜಿ (ಹಿಂ): ಬೆ.10.30ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಗುರುಶಿಷ್ಯರು (ಕ): ಮ.1ಕ್ಕೆ, ಎಂಆರ್‌ಪಿ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ನಾನ್ ಖದರ್ ನನ್ ಹುಡ್ಗಿ ಸೂಪರ್ (ಕ): ಬೆ.10ಕ್ಕೆ, ಕಾಂತಾರ (ಕ): ಮ.12.35ಕ್ಕೆ, ಮ.3.35ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.1.45ಕ್ಕೆ, ಸಂ.6ಕ್ಕೆ, ರಾ.9.05ಕ್ಕೆ.
ಸ್ಕ್ರೀನ್ 4	ಚಾಂಪಿಯನ್ (ಕ): ಬೆ.10.30ಕ್ಕೆ, ಶುಭಮಂಗಳ (ಕ): ಮ.1.40ಕ್ಕೆ, ಮೋದಿ ಜಿ ಕೀ ಬೇಟಿ (ಹಿಂ): ಸಂ.4.05ಕ್ಕೆ, ಗಾಡ್‌ಫಾದರ್ (ತೆ): ಸಂ.6.20ಕ್ಕೆ, ವರಾಲ್ (ಮ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.30ಕ್ಕೆ, ಬೆ.9.05ಕ್ಕೆ, ಬೆ.9.50ಕ್ಕೆ, ಮ.12.15ಕ್ಕೆ, ಮ.1ಕ್ಕೆ, ಮ.3.25ಕ್ಕೆ, ಸಂ.4.10ಕ್ಕೆ, ಸಂ.6.35ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, ದಿ ಚೆಕ್‌ಮೇಟ್ (ಕ): ಬೆ.10.05ಕ್ಕೆ, ಗುರು ಶಿಷ್ಯರು (ಕ): ಮ.3.10ಕ್ಕೆ, ಪಿಎಸ್–1 (ಹಿಂ): ಮ.3.30ಕ್ಕೆ, ರಾ.10.30ಕ್ಕೆ, ಗುಡ್‌ಬೈ (ಹಿಂ): ಬೆ.10.10ಕ್ಕೆ, ಸಂ.4.35ಕ್ಕೆ, ಪೊನ್ನಿಯನ್ ಸೆಲ್ವನ್–1 (ತ): ಬೆ.8.35ಕ್ಕೆ, ಮ.12ಕ್ಕೆ, ರಾ.7ಕ್ಕೆ, ದಿ ಗೋಸ್ಟ್ (ತೆ): ರಾ.7.10ಕ್ಕೆ, ಗಾಡ್‌ಫಾದರ್ (ತೆ): ಬೆ.9.30ಕ್ಕೆ, ಮ.1.15ಕ್ಕೆ, ಮ.3.50ಕ್ಕೆ, ರಾ.10.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.11.40ಕ್ಕೆ, ಸಂ.6.35ಕ್ಕೆ, ಒನ್ ಪೀಸ್ ಫಿಲಂ ರೆಡ್ (ಜ): ರಾ.7.40ಕ್ಕೆ, ಟಿಕೆಟ್ ಟು ಪ್ಯಾರಡೈಸ್ (ಇಂ): ಮ.12.50ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕೋಬ್ರಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ ವೇದ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಎಂಆರ್‌ಪಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಪ್ರಭಾ	
ಚಾಂಪಿಯನ್ (ಕ)	4 ಪ್ರದರ್ಶನಗಳು

ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ತಿ.ನರಸೀಪುರ, ಅ.16– ತಾಲೂಕಿನ ಅಭಿವೃದ್ಧಿಗಾಗಿ ಸರ್ಕಾರದ ಮಟ್ಟದಲ್ಲಿ ತಮ್ಮದೇ ಆದ ಪ್ರಭಾವ ಬೀರಿ, ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ತಾಲೂಕಿನ ಹೊಸೂರುಹುಂಡಿ ಗ್ರಾಮದಲ್ಲಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ವತಿಯಿಂದ 20 ಲಕ್ಷ ರೂ. ವೆಚ್ಚದ ಸಿಸಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಾಜಿ ಸಿಎಂ ಕುಮಾರಸ್ವಾಮಿ ಅವರ ನೆರವಿನೊಂದಿಗೆ ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಗ್ರಾಮಗಳ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಪರಿವರ್ತಿಸಲಾಗುತ್ತಿದೆ ಎಂದರು.

ಗ್ರಾಮದಲ್ಲಿ ಉಳಿದಿರುವ ಎಲ್ಲಾ ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡಲು 30 ಲಕ್ಷ ರೂ. ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

ಗ್ರಾಮದ ಮುಖಂಡರು ಮಾತನಾಡಿ, ಮತದಾನ ಮಾಡಲು ನಾವು ಧರ್ಮಯ್ಯನಹುಂಡಿ ಹಾಗೂ ಹೆರಗನಹಳ್ಳಿಗೆ ತೆರಳಬೇಕಾಗಿದೆ. ಹೀಗಾಗಿ ನಮ್ಮೂರಿನ ಶಾಲೆಯಲ್ಲಿ ಮತಗಟ್ಟೆ ಸ್ಥಾಪಿಸುವಂತೆ ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ತಮ್ಮ ಕೋರಿಕೆಯಂತೆ ಈ ಬಾರಿ ಹೊಸೂರುಹುಂಡಿ ಗ್ರಾಮದ ಶಾಲೆಯಲ್ಲಿ ಮತಗಟ್ಟೆ ತೆರೆದು, ಮತದಾನಕ್ಕೆ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಹೊಸೂರು ಹುಂಡಿ ಮಠದ ರಾಜಶೇಖರ ಸ್ವಾಮೀಜಿ, ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಬನ್ನಹಳ್ಳಿ ಹುಂಡಿ ಶಿವಕುಮಾರ್, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಮುಖಂಡರಾದ ಮೂಗೂರು ಶಿವಮೂರ್ತಿ, ಗೌಡರ ನಾಗಣ್ಣ, ಸೋಮಶೇಖರ್, ರವಿ, ಲಿಂಗರಾಜು, ಬಸವಣ್ಣ, ಯೋಗೇಶ್, ಉಪನ್ಯಾಸಕ ಕುಮಾರಸ್ವಾಮಿ, ಗುತ್ತಿಗೆದಾರ ವಾಟಾಳು ರಾಜೇಗೌಡ, ಬೇವಿನಹಳ್ಳಿ ಸತೀಶ್, ಅತ್ತಳ್ಳಿ ರವಿ, ಸೋಸಲೆ ರಾಜೇಶ್, ಕೆಆರ್‌ಐಡಿಎಲ್ ಇಲಾಖೆಯ ದಿಲೀಪ್, ಜಿಪಂ ಎಇ ಲಕ್ಷ್ಮಣ್ ರಾವ್ ಮತ್ತಿತರರಿದ್ದರು.

ಧಾರಾಕಾರ ಮಳೆಗೆ ಬೆಳೆ ನಾಶ: ಜಿಲ್ಲಾಧಿಕಾರಿ ಭೇಟಿ, ಪರಿಶೀಲನೆ



ನಂಜನಗೂಡು, ಅ.16– ಶನಿವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ತಾಲೂಕಿನ ಎಲಚಗೆರೆ, ಶಿರಮಳ್ಳಿ ಗ್ರಾಮಗಳಲ್ಲಿ ಕಬ್ಬು, ಭತ್ತ, ಬಾಳೆ, ಅರಿಶಿನ, ಶುಂಠಿ ಬೆಳೆಗಳು ನಾಶವಾಗಿದೆ.

ಎಲಚಗೆರೆ ಗ್ರಾಮದಲ್ಲಿ 50 ಎಕರೆ ಪ್ರದೇಶದಲ್ಲಿದ್ದ ಕಬ್ಬು, ಬಾಳೆ, ಅರಿಶಿನ ಮತ್ತು ಶುಂಠಿ ಬೆಳೆ ನಾಶವಾಗಿದೆ. ತಾಲೂಕಿನ ಶಿರಮಳ್ಳಿ ಗ್ರಾಮದಲ್ಲಿ 30 ಎಕರೆ ಪ್ರದೇಶದ ಭತ್ತ ಮತ್ತು ಕಬ್ಬು ಬೆಳೆ ನಾಶವಾಗಿದೆ. ತಾಲೂಕಿನ ಸಿಂಧುವಳ್ಳಿ ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ನೀರು ನುಗ್ಗಿ ಜಲಾವೃತಗೊಂಡಿರುವ ಹಿನ್ನೆಲೆಯಲ್ಲಿ ಶಾಲೆಗೆ 2 ದಿನಗಳ ಕಾಲ ರಜೆ ಘೋಷಿಸಲಾಗಿದೆ. ಅಲ್ಲದೆ ತಾಲೂಕಿನ ಹುಣಸನಾಳು ಗ್ರಾಮದಲ್ಲಿ 5 ಮನೆಗಳ ಗೋಡೆ ಕುಸಿತಗೊಂಡಿದೆ.

ಜಿಲ್ಲಾಧಿಕಾರಿ ಬಗಾದಿ ಗೌತಮ್ ಭೇಟಿ: ಮಳೆಹಾನಿ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ತಾಲೂಕಿನ ಶಿರಮಳ್ಳಿ ಗ್ರಾಮದಲ್ಲಿ 30 ಎಕರೆ ಪ್ರದೇಶದ ಭತ್ತದ ಬೆಳೆಗೆ ನೀರು ನುಗ್ಗಿ ನಾಶವಾಗಿರುವುದನ್ನು ಕಣ್ಣಾರೆ ಕಂಡು ರೈತರಿಗೆ ಪರಿಹಾರ ಒದಗಿಸುವ ಭರವಸೆ ನೀಡಿದರು. ಈ ವೇಳೆ ತಹಸೀಲ್ದಾರ್ ಎಂ.ಶಿವಮೂರ್ತಿ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ದೀಪಕ್ ಹಾಗೂ ರೈತರು ಇದ್ದರು.

'ನಿದ್ದೆಕದ್ದ ಸಾಲುಗಳು' ಕೃತಿ ಲೋಕಾರ್ಪಣೆ



ನಂಜನಗೂಡು, ಅ.16– ನಗರದ ಶಂಕರ ಮಠದ ಭಾರತೀ ತೀರ್ಥ ಸಭಾಂಗಣದಲ್ಲಿ ಎನ್.ಚೇತನ್ ಶರ್ಮಾ ಅವರು ರಚಿಸಿದ ನಿದ್ದೆಕದ್ದ ಸಾಲುಗಳು ಕೃತಿ ಲೋಕಾರ್ಪಣೆಗೊಳಿಸಲಾಯಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಕಿರುತೆರೆ ನಟ ಶಶಿಧರ್ ಕೋಟೆ ಉದ್ಘಾಟಿಸಿದರು. ಅಂಕಣಕಾರ ಡಾ.ಗುಬ್ಬಿಗೂಡು ರಮೇಶ್ ಕೃತಿ ಬಿಡುಗಡೆ ಮಾಡಿ ಮಾತನಾಡಿ, ಕೃತಿಕಾರರು ಮುಕ್ಕಾಲು ಭಾಗ ಅನುಭವವನ್ನು ಕಾಲು ಭಾಗ ಕಲ್ಪನೆಯನ್ನು ಬೆರೆಸಿ ಹದಗೊಳಿಸಿ ಸಿದ್ಧಗೊಳಿಸಿದ ಅನುಭವಾತ್ಮಕ ಕವಿತೆಗಳು ರಚನೆಗೊಂಡಿದೆ ಎಂದರು.

ಕೃತಿ ಪರಿಚಯ ಮಾಡಿದ ಡಾ.ಕಿರಣ್ ಸಿಡ್ಲೆಹಳ್ಳಿ ಅವರು, ಕೃತಿಯು ಪ್ರೀತಿ, ಪ್ರೇಮ, ಸಾಮಾಜಿಕ ಕಳಕಳಿ, ವಿಡಂಬನೆ, ಬಾಲ್ಯ, ಪರಿಸರದ ಕಾಳಜಿ ಎಲ್ಲವನ್ನು ಒಳಗೊಂಡಂತೆ ಕವಿಯ ನಿದ್ದೆಗೆಡಿಸುವ ಸಾಕಷ್ಟು ಅಂಶಗಳು ಕವಿತೆಯಲ್ಲಿ ಅವರ ಅನುಭವಗಳ ಭಾವನೆಗಳು ಪದಗಳಾಗಿ ಹೊರಹೊಮ್ಮಿವೆ ಎಂದರು.

ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಕೆ.ಜಿ ಮಹೇಶ್, ಶಂಕರ ಮಠದ ಧರ್ಮಾಧಿಕಾರಿ ಶ್ರೀಕಂಠ ಜೋಯಿಸ್ ಕೃತಿಕಾರರಿಗೆ ಶುಭ ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿರಿಗನ್ನಡ ವೇದಿಕೆ ಕಾರ್ಯಾಧ್ಯಕ್ಷ ಸೌಗಂಧಿಕಾ ವಿ.ಜೋಯಿಸ್ ವಹಿಸಿದ್ದರು.

ಕೃತಿಕಾರ ಎನ್.ಚೇತನ್ ಶರ್ಮಾ ಅವರು ಕೃತಿ ರಚನೆಯಾದ ಸಂದರ್ಭ, ಹಿನ್ನೆಲೆ ಭಾವನೆಗಳ ಕುರಿತು ಹಾಗೂ ತಮ್ಮ ಸಾಹಿತ್ಯ ಕ್ಷೇತ್ರದ ತೊಡಗಿಸಿಕೊಳ್ಳುವಿಕೆಗೆ ಕಾರಣರಾದ ಪ್ರತಿಯೊಬ್ಬರನ್ನು ನೆನೆಸಿಕೊಂಡರು. ಈ ವೇಳೆ ಶ್ರೀಕಾಂತ್, ಪುಷ್ಪ, ಸಿರಿಗನ್ನಡ ವೇದಿಕೆ ಸದಸ್ಯ ಶ್ರೀಕಂಠಮೂರ್ತಿ, ಸುಧಾಮಣಿ, ಶ್ರೀನಿವಾಸ್, ಸತ್ಯ ನಾರಾಯಣ, ರವಿಶಂಕರ್, ರಮೇಶ್ ಉಪಸ್ಥಿತರಿದ್ದರು.

ಶ್ರಮವಹಿಸಿ ಓದುವಂತೆ ವಿದ್ಯಾರ್ಥಿಗಳಿಗೆ ಸಲಹೆ

ದಿನಪತ್ರಿಕೆ ಹಂಚುವ 50 ವಿದ್ಯಾರ್ಥಿಗಳಿಗೆ ಬ್ಯಾಗ್, ಪುಸ್ತಕ ವಿತರಣೆ



ಹೆಚ್.ಡಿ.ಕೋಟೆ, ಅ.16– ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳು ಪೈಪೋಟಿಯಿಂದ ಕೂಡಿದ್ದು, ಅದಕ್ಕೆ ತಕ್ಕಂತೆ ಶ್ರಮವಹಿಸಿ ಓದಬೇಕು ಎಂದು ವಿದ್ಯಾರ್ಥಿಗಳಿಗೆ ಕಬಿನಿ ಜಲಾಶಯದ ಸುಭಾಷ್ ವಿದ್ಯುತ್ ಘಟಕದ ಹಿರಿಯ ವ್ಯವಸ್ಥಾಪಕ ಸಂದೀಪ್ ಕುಮಾರ್ ಸಲಹೆ ನೀಡಿದರು.

ಪಟ್ಟಣದ ಜೈನ ಭವನದಲ್ಲಿ ಭಾನುವಾರ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ದಿನಪತ್ರಿಕೆ ಹಂಚುವ 50 ವಿದ್ಯಾರ್ಥಿಗಳಿಗೆ ಬ್ಯಾಗ್, ಪುಸ್ತಕ ಸೇರಿದಂತೆ ವಿವಿಧ ವಸ್ತುಗಳನ್ನು ವಿತರಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಗುಣಮಟ್ಟದ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸಲು ಬೇಕಿರುವ ಸಾಮರ್ಥ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದರು. ಓದಿದ್ದೇನೆ ಎಂದು ನಿರ್ಲಕ್ಷ್ಯ ಮನೋಭಾವ ತೋರಬಾರದು. ಸಾಮರ್ಥ್ಯಗಳನ್ನು ಅಳವಡಿಸಿಕೊಂಡು, ಆತ್ಮವಿಶ್ವಾಸದಿಂದ ಮುನ್ನುಗ್ಗಿದರೆ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ ಎಂದು ತಿಳಿಸಿದರು.

ಹುಟ್ಟಿನಿಂದ ಬಡವನಾದರೆ ಏನೂ ಚಿಂತೆಯಿಲ್ಲ, ವ್ಯಾಸಂಗ ಹಾಗೂ ಸಾಧನೆಯಿಂದ ಶ್ರೀಮಂತನಾಗಬೇಕು. ಆಗ ಮಾತ್ರ ಏನನ್ನಾದರೂ ಸಾಧಿಸಿದಂತೆ ಆಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಕಬಿನಿ ಪವರ್ ಪ್ರಾಜೆಕ್ಟ್‌ನ ಶಿವಕುಮಾರ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಸತೀಶ್ ಆರಾಧ್ಯ, ಪ್ರಧಾನ ಕಾರ್ಯದರ್ಶಿ ಎಸ್.ಆರ್. ನಾಗರಾಮ, ಉಪಾಧ್ಯಕ್ಷ ಮಂಜುಕೋಟೆ, ಸಹ ಕಾರ್ಯದರ್ಶಿ ಮಂಜು ಬೀಚನಹಳ್ಳಿ, ಖಜಾಂಚಿ ದೊಡ್ಡಸಿದ್ದು, ಜಿಲ್ಲಾ ನಿರ್ದೇಶಕ ಎಂ.ಎಲ್. ರವಿಕುಮಾರ್, ದಾಸೇಗೌಡ, ಶರವಣ, ಎಡತೊರೆ ಮಹೇಶ್, ಪುರುಷೋತ್ತಮ, ಎಚ್.ಬಿ.ಬಸವರಾಜು, ಆನಂದ, ಜಸೀಲಾ, ಜಿ.ರವಿಕುಮಾರ್, ವಾಸುಕಿ ನಾಗೇಶ್, ರಂಗರಾಜು, ಚಿಕ್ಕಣ್ಣೇಗೌಡ, ಸುರೇಶ, ನಾಗೇಶ್, ರೇಣುಕಾ, ಪ್ರಮೋದ್, ಲಿಂಗಣ್ಣ, ಶ್ರೀನಿಧಿ ಇದ್ದರು.

ಮುಳ್ಳೂರಿನಲ್ಲಿ ವಿಶ್ವಕರ್ಮ ಜಯಂತಿ



ಹುಣಸೂರು, ಅ.16– ಸಣ್ಣಪುಟ್ಟ ಸಮಾಜಗಳು ಒಗ್ಗೂಡಿ ಒಗ್ಗಟ್ಟು ಪ್ರದರ್ಶನ ಮಾಡಿದಾಗ ಮಾತ್ರ ಜನಪ್ರತಿನಿಧಿಗಳು ಹಾಗೂ ಸರ್ಕಾರ ನಿಮ್ಮತ್ತ ಗಮನಹರಿಸಲು ಸಾಧ್ಯ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದಿನ ಸರ್ಕಾರ ವಿಶ್ವಕರ್ಮ ಸೇರಿದಂತೆ ಇತರೆ ಜನಾಂಗಗಳ ನಿಗಮ ಸ್ಥಾಪಿಸಿದೆ ಈಗಿನ ಸರ್ಕಾರ ಇಲ್ಲಿಯವರೆಗೂ ನಿಗಮಗಳಿಗೆ ಅನುದಾನ ನೀಡಿಲ್ಲ. ಸರ್ಕಾರ ಕೂಡಲೇ ಎಲ್ಲಾ ನಿಗಮಗಳಿಗೆ ಅನುದಾನ ನೀಡಿ ಬಡಜನರ ಅಭಿವೃದ್ಧಿಗೆ ನೆರವಾಗಬೇಕೆಂದು ಒತ್ತಾಯಿಸಿದ ಅವರು, ಕಳೆದ 15 ವರ್ಷಗಳಿಂದ ಹುಣಸೂರಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂದೆಯೂ ನಿಮ್ಮೆಲ್ಲರ ಸಹಕಾರ ನನ್ನ ಮೇಲಿರಲಿ ಎಂದರು.

ಈ ವೇಳೆ ಗ್ರಾಮಸ್ಥರು ದೊಡ್ಡೇಕೊಪ್ಪಲು ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಹಾಗೂ ಮುಳ್ಳೂರಿನಲ್ಲಿ ವಿಶ್ವಕರ್ಮ ಭವನ ನಿರ್ಮಾಣ ಮಾಡಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಅಣ್ಣಯ್ಯ ನಾಯಕ, ಕಾಯಕ ಸಮಾಜದ ಅಧ್ಯಕ್ಷ ಹೊನ್ನಪ್ಪ, ತಾಪಂ ಮಾಜಿ ಸದಸ್ಯ ಗಣಪತಿ ಇಂದೂಲ್ಕರ್, ಗ್ರಾಮದ ಯಜಮಾನರಾದ ಶಿವಬಸಪ್ಪ, ಶ್ರೀನಿವಾಸಚಾರಿ, ಅಮರನಾಥ್, ಮೂರ್ತಿನಾಯಕ, ಗೋವಿಂದಯ್ಯ, ಶಿವಣ್ಣ ಸೇರಿದಂತೆ ಇತರರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಬೆಟ್ಟದಪುರ, ಅ.16– ಇಲ್ಲಿಗೆ ಸಮೀಪದ ಕಿತ್ತೂರು ಗ್ರಾಮದಲ್ಲಿ 1.5 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗ್ರಾಮದೇವತೆ ಕಿತ್ತೂರಮ್ಮ ದೇವಾಲಯದಿಂದ ಕಿತ್ತೂರು ಗ್ರಾಮದವರೆಗೆ ಹದಗೆಟ್ಟಿದ್ದ ರಸ್ತೆ ಅಭಿವೃದ್ಧಿಪಡಿಸುವಂತೆ ಗ್ರಾಮಸ್ಥರು ಮನವಿ ಮಾಡಿದರು. ಈ ಹಿನ್ನೆಲೆಯಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಿತ್ತೂರು ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ನಿಗಾ ವಹಿಸುವುದಾಗಿ ತಿಳಿಸಿದರು. ಈ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಜಿಲ್ಲಾ ಬ್ಯಾಂಕ್ ನಿರ್ದೇಶಕ ರವಿ, ಗುತ್ತಿಗೆದಾರ ಅಶ್ವತ್, ಗ್ರಾಪಂ ಸದಸ್ಯ ದಿನೇಶ್, ಕಷ್ಣೇಗೌಡ, ಪ್ರಕಾಶ್, ಕೀರ್ತಿಗೌಡ, ಮುಖಂಡರಾದ ಗಗನ್, ಎಸ್.ಎಸ್.ಗೌಡ, ಪಿಡಿಓ ರಾಜಶೇಖರ್, ಜಿಪಂ ಸಹಾಯಕ ಕಾರ್ಯಪಾಲಕ ಮಲ್ಲಿಕಾರ್ಜುನ್, ಪಿಡಬ್ಲ್ಯುಡಿ ಇಂಜಿನಿಯರ್ ಕುಮಾರ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸರಗೂರು: ಸಂವಿಧಾನ ಸಂರಕ್ಷಣಾ ಸಮಿತಿಗೆ ಬಸವರಾಜು ಅಧ್ಯಕ್ಷ




ಸರಗೂರು, ಅ.16– ತಾಲೂಕು ಸಂವಿಧಾನ ಸಂರಕ್ಷಣಾ ಸಮಿತಿ ನೂತನ ಅಧ್ಯಕ್ಷರಾಗಿ ಬಸವರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಚಿಕ್ಕವೀರನಾಯಕ, ಪ್ರಧಾನ ಕಾರ್ಯದರ್ಶಿ ಬೆಟ್ಟಸ್ವಾಮಿ, ಖಜಾಂಚಿ ಮಹೇಶ್, ಉಪಾಧ್ಯಕ್ಷರಾಗಿ ಎಂ.ಕೆಂಡಗಣ್ಣಸ್ವಾಮಿ, ಚಿಕ್ಕಣ್ಣ, ವೈಕಂಠಯ್ಯ, ಗುರುಸ್ವಾಮಿ, ಶಂಕರ್, ತಿಮ್ಮಯ್ಯ ಪುಟ್ಟಸ್ವಾಮಿ, ಶ್ರೀನಿವಾಸ್, ಎಸ್.ಎನ್.ನಾಗರಾಜು, ಚಿಕ್ಕದಾಸಯ್ಯ, ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್, ಬೆಟ್ಟನಾಯಕ, ಪ್ರಕಾಶ್, ನಾಗರಾಜು, ಸುರೇಶ್, ಸುಂದರ್, ಸಲಹೆಗಾರರಾಗಿ ರಾಜಣ್ಣ, ಎಸ್.ಎಲ್.ರಾಜಣ್ಣ, ಜಿ.ಗೋಪಾಲಸ್ವಾಮಿ, ಬಸವರಾಜು, ಮಲ್ಲೇಶ್, ಪುಟ್ಟಹನುಮಯ್ಯ, ನಾಗರಾಜು, ನಾಗಣ್ಣ, ಶಿವರಾಜು, ಚಿನ್ನಸ್ವಾಮಿ, ಪ್ರತಾಪ್ ಆಯ್ಕೆಯಾಗಿದ್ದಾರೆ.

ತಿ.ನರಸೀಪುರ ತಾಲೂಕು ಕುರುಬರ ಸಂಘದ ಚುನಾವಣೆ

ಅಧ್ಯಕ್ಷರಾಗಿ ಮನ್ನೇಹುಂಡಿ ಎಂ.ಎಸ್.ಮಹದೇವಸ್ವಾಮಿ ಆಯ್ಕೆ



ತಿ.ನರಸೀಪುರ, ಅ.16– ತಾಲೂಕು ಕುರುಬರ ಸಂಘದ ಅಧ್ಯಕ್ಷರಾಗಿ ಎಂ.ಎಸ್. ಮಹದೇವಸ್ವಾಮಿ (ಮನ್ನೇಹುಂಡಿ ಮಹೇಶ್) ಆಯ್ಕೆಯಾಗಿದ್ದಾರೆ.

ಪಟ್ಟಣದ ಮರಿಗೌಡ ಸ್ಮಾರಕ ಭವನದಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಾಜಿ ಅಧ್ಯಕ್ಷ ಪ್ರಶಾಂತ್‌ಬಾಬು ಬಣದ ಮಹದೇವಸ್ವಾಮಿ ಹಾಗೂ ಟೌನ್ ಅಧ್ಯಕ್ಷ ಬಸವಣ್ಣ ಬಣದ ಉಕ್ಕಲಗೆರೆ ಬಸವಣ್ಣ ನಾಮಪತ್ರ ಸಲ್ಲಿಸಿದರು. ನಂತರ ಚುನಾವಣೆ ಪ್ರಕ್ರಿಯೆಯಲ್ಲಿ 20 ಮತ ಪಡೆದು ಮಹದೇವಸ್ವಾಮಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದರೆ, ಪ್ರತಿಸ್ಪರ್ಧಿ ಉಕ್ಕಲಗೆರೆ ಬಸವಣ್ಣ 15 ಮತ ಪಡೆದು ಪರಾಭವಗೊಂಡರು.

ಈ ಹಿಂದಿನ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆಯಿತು. ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ರಘು, ಸಹಾಯಕ ಚುನಾವಣಾಧಿಕಾರಿಯಾಗಿ ಲಿಂಗರಾಜು ಕಾರ್ಯ ನಿರ್ವಹಿಸಿದರು. ಮೊದಲಿಗೆ ಅಧ್ಯಕ್ಷರ ಆಯ್ಕೆಯನ್ನು ಅವಿರೋಧವಾಗಿ ಮಾಡಲು ಪ್ರಯತ್ನಿಸಲಾಯಿತಾದರೂ, ಗುಂಪುಗಳಾದ ಹಿನ್ನೆಲೆಯಲ್ಲಿ ಚುನಾವಣೆ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟು ಚುನಾವಣೆ ನಡೆಯಿತು.

ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್ ಬಾಬು ಮಾತನಾಡಿ, ಚುನಾವಣೆಯಲ್ಲಿ ಸೋಲು ಗೆಲುವು ಸಹಜ. ಚುನಾವಣೆ ಸೋಲನ್ನು ಪ್ರತಿಷ್ಠೆಯಾಗಿ ಪರಿಗಣಿಸದೇ ವಿಶ್ವಾಸದಿಂದ ಸಮಾಜದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಚುನಾವಣೆಯಲ್ಲಿ ಒಟ್ಟು 35 ನಿರ್ದೇಶಕರು ಪಾಲ್ಗೊಂಡಿದ್ದರು. ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಕಾರ್ಯಾಧ್ಯಕ್ಷ ಎಂ. ಮಾದೇಶ್, ಉಪಾಧ್ಯಕ್ಷರಾದ ವೆಂಕಟೇಶ್ (ವೆಂಕಿ), ಬೋಟ್ ನಾಗೇಶ್, ಕುಪ್ಪೆ ಭಾಗ್ಯಮ್ಮ, ಶಾಂತಿರಾಜು, ಪ್ರಧಾನ ಕಾರ್ಯದರ್ಶಿ ಕೊತ್ತೆಗಾಲ ಬಸವರಾಜು, ಸಹ ಕಾರ್ಯದರ್ಶಿ ಲಿಂಗಣ್ಣ, ಖಜಾಂಚಿ ಮಲ್ಲೇಶ್, ನಿರ್ದೇಶಕರಾದ ಎಂ.ಮಲ್ಲಿಕಾರ್ಜುನಸ್ವಾಮಿ, ತುಂಬಲ ಬಾಬು, ಟೌನ್ ಬಸವಣ್ಣ, ಅಕ್ಕೂರು ಗುರುಮೂರ್ತಿ, ಹೆಳವರಹುಂಡಿ ಅರುಣ್‌ಗೌಡ, ಗೋಪಾಲ್, ಬಣ್ಣ ಮಹೇಶ್, ಭಾಗ್ಯ ಹಾಳೇಗೌಡ, ನಾಗಮಣಿ ನಾಗರಾಜ್, ಕೆನುಂಜುಂಡಸ್ವಾಮಿ, ಸಂಜು, ವಾಟಾಳು ಶಿವಶಂಕರ್, ಎ.ಬಿ. ಮಂಜುನಾಥ್, ಮಾಲಿನಿ ನಾಗರಾಜ್, ಚಂದ್ರಶೇಖರ್, ಶಿವರಾಂ, ಚಿಕ್ಕಸಿದ್ದೇಗೌಡ, ಸೌಮ್ಯ ಕುಮಾರ್, ಕೈಯಂಬಳ್ಳಿ ಲೋಹಿತ್, ಸವಿತಾ ನಾಗರಾಜು, ಪದ್ಮಮ್ಮ ಸಿದ್ದರಾಜು, ಮೀನಾಕ್ಷಿ ಬೋರೇಗೌಡ, ಕೆ.ಅಶ್ವಿನ್ ಹಾಜರಿದ್ದರು.

> ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಒತ್ತು ಎಲ್ಲಾ ನಿರ್ದೇಶಕರ ವಿಶ್ವಾಸ ಹಾಗೂ ಸಹಕಾರದೊಂದಿಗೆ ಸಮಾಜದ ಅಭಿವೃದ್ಧಿಗೆ ದುಡಿಯುತ್ತೇನೆ. ಸಮಾಜಕ್ಕಾಗಿ ದುಡಿದ ಹಿರಿಯರ ಮಾರ್ಗದರ್ಶನದಲ್ಲಿ ಸಂಘವನ್ನು ಅಭಿವೃದ್ಧಿಪಡಿಸುವ ಮೂಲಕ ಮಾದರಿ ಸಂಘವನ್ನಾಗಿ ಮಾಡಲು ಶ್ರಮಿಸುತ್ತೇನೆ. ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ, ಜನರ ಹಿತ ಕಾಪಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ.
>
> – ಮಹದೇವಸ್ವಾಮಿ, ನೂತನ ಅಧ್ಯಕ್ಷ

ಜಿಲ್ಲೆಗೆ ಒಂದರಂತೆ 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ದೇಶಕ್ಕೆ ಸಮರ್ಪಿಸಿದ ಪ್ರಧಾನಿ ನರೇಂದ್ರ ಮೋದಿ

ನವದೆಹಲಿ, ಅ.16– ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಭಾನುವಾರ 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ದೇಶದ 75 ಜಿಲ್ಲೆಗಳಿಗೆ ಸಮರ್ಪಿಸಿದರು.



ವಿಡಿಯೊ ಕಾನ್ಫರೆನ್ಸ್ ಮೂಲಕ ದೇಶಕ್ಕೆ ಸಮರ್ಪಿಸಿದ ಮಾತ ನಾಡಿದ ಪ್ರಧಾನಿ, ಸಾಮಾನ್ಯ ಜನರ ಜೀವನವನ್ನು ಸರಳಗೊಳಿಸಲು ಈಗ ನಡೆಯುತ್ತಿರುವ ಅಭಿಯಾನ ದಲ್ಲಿ ಡಿಜಿಟಲ್ ಬ್ಯಾಂಕಿಂಗ್ ಘಟಕಗಳು ಹೆಚ್ಚು ಮಹತ್ವದ್ದಾಗಿದೆ. ಇದೊಂದು ವಿಶೇಷ ಬ್ಯಾಂಕಿಂಗ್ ವ್ಯವಸ್ಥೆ ಹಾಗೂ ಸೌಲಭ್ಯ ವಾಗಿದ್ದು ಕನಿಷ್ಠ ಡಿಜಿಟಲ್ ಮೂಲಭೂತ ಸೌಕರ್ಯಗಳ ಮೂಲಕ ಗರಿಷ್ಠ ಸೇವೆ ಗಳನ್ನು ಜನರಿಗೆ ಒದಗಿಸಲಿದೆ ಎಂದರು.

ಈ ಸೇವೆಗಳು ಕಾಗದದ ಕೆಲಸ ಮತ್ತು ಇತರ ತೊಂದರೆ ಗಳಿಂದ ಮುಕ್ತವಾಗಿರುತ್ತವೆ. ಇವುಗಳು ಸೌಲಭ್ಯಗಳು ಮತ್ತು ಡಿಜಿಟಲ್ ಬ್ಯಾಂಕಿಂಗ್ ಭದ್ರತೆಯನ್ನು ಹೊಂದಿರುತ್ತವೆ ಎಂದರು.

ಈ ಸಂದರ್ಭದಲ್ಲಿ ಮಾತ ನಾಡಿದ ಆರ್ ಬಿಐ ಗವರ್ನರ್ ಶಕ್ತಿಕಾಂತ್ ದಾಸ್, ಬ್ಯಾಂಕಿಂಗ್ ಸೇವೆ ಗಳಿಂದ ಡಿಜಿಟಲ್ ಮೂಲಸೌಕರ್ಯಗಳ ಲಭ್ಯತೆಯನ್ನು ಸುಧಾರಿಸಲು ಆರ್‌ಬಿಐ ಪ್ರಗತಿಪರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. 75 ಡಿಜಿಟಲ್ ಬ್ಯಾಂಕಿಂಗ್ ಘಟಕಗಳನ್ನು ಸ್ಥಾಪಿಸಲು 2022–23 ಬಜೆಟ್‌ನಲ್ಲಿ ಘೋಷಣೆ ಮಾಡಿದ ನಂತರ, ಭಾರತೀಯ ಬ್ಯಾಂಕ್ ಗಳ ಅಸಸ್, ವಾಣಿಜ್ಯ ಬ್ಯಾಂಕ್‌ಗಳು ಮತ್ತು ತಜ್ಞರನ್ನು ಸಂಪರ್ಕಿಸಿದ ನಂತರ ಆರ್‌ಬಿಐ ಮಾರ್ಗಸೂಚಿಗಳನ್ನು ಹೊರಡಿಸಿತು ಎಂದರು. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ವಾಣಿಜ್ಯ ಬ್ಯಾಂಕುಗಳು ಈ ಉಪಕ್ರಮಕ್ಕೆ ಉತ್ತಮವಾಗಿ ಪ್ರತಿಕ್ರಿಯಿಸಿವೆ. 75 ಡಿಬಿಯುಗಳು (ಡಿಜಿಟಲ್ ಬ್ಯಾಂಕಿಂಗ್ ಘಟಕಗಳು) ದಾಖಲೆಯ 6 ತಿಂಗಳ ಅವಧಿಯಲ್ಲಿ ದೇಶದಾದ್ಯಂತ ಹರಡಿರುವ 75 ಜಿಲ್ಲೆಗಳಲ್ಲಿ 75 ವರ್ಷಗಳ ಸ್ವಾತಂತ್ರ್ಯದ ಸ್ಮರಣಾರ್ಥ ಸ್ಥಾಪಿಸಲಾಗಿದೆ ಎಂದರು.

ಚಿತ್ರದುರ್ಗದ ಮುರುಘಾ ಮಠಕ್ಕೆ ಪ್ರಭಾರ ಪೀಠಾಧ್ಯಕ್ಷರ ನೇಮಕ

ಚಿತ್ರದುರ್ಗ, ಅ.16– ಕೊನೆಗೂ ಚಿತ್ರದುರ್ಗದ ಮುರುಘಾ ಮಠಕ್ಕೆ ಪ್ರಭಾರ ಪೀಠಾಧ್ಯಕ್ಷರ ನೇಮಕ ಆಗಿದೆ. ಹಲವರ ವಿರೋಧದ ನಡುವೆಯೂ ಕಾನೂನು ಪ್ರಕ್ರಿಯೆ ಮೂಲಕ ಅಧಿಕೃತವಾಗಿ ದಾವಣಗೆರೆ ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ ಅವರನ್ನು ಪೀಠಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ಬಗ್ಗೆ ಹೈಕೋರ್ಟ್ ಅನುಮತಿ ಪಡೆದು ಬಸವಪ್ರಭುಶ್ರೀ ನೇಮಕಕ್ಕೆ ಮುರುಘಾಮಠ ಇಂದು ಅಕ್ಟೋಬರ್ ಇಂದು ಅಧಿಕೃತ ಪ್ರಕಟಣೆ ಹೊರಡಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಧಾರ್ಮಿಕ, ಸೇವಾ, ಪೂಜಾ ಕಾರ್ಯಗಳು ಮಠದ ಪರಂಪರೆ ಮುಂದುವರೆಸಿಕೊಂಡು ಹೋಗಲು ಪ್ರಕಟಣೆಯಲ್ಲಿ ತಿಳಿಸಿದೆ. ಮುರುಘಾ ಮಠದ ಪೂಜಾ ಕೈಂಕರ್ಯ ಉಸ್ತುವಾರಿ ಯಾಗಿ ನೇಮಕಗೊಂಡಿರುವ ಬಸವಪ್ರಭು ಶ್ರೀ ಮೊದಲ ಬಾರಿಗೆ ಪ್ರತಿಕ್ರಿಯಿಸಿದ್ದು, ಪೂಜೆ, ದಾಸೋಹ, ಮಠದ ಕೆಲಸ ನೋಡಿಕೊಳ್ಳಲು ಶಿವಮೂರ್ತಿ ಮುರುಘಾ ಶರಣರಿಂದ ಆದೇಶ ಸಿಕ್ಕಿದೆ. ನಿಷ್ಠೆ, ಭಕ್ತಿಯಿಂದ ಸೇವಾಕಾರ್ಯ ಮಾಡುತ್ತೇನೆ. ಮುರುಘೇಶ, ಗುರು ಬಸವೇಶನ ಸೇವೆ ಮಾಡುತ್ತೇನೆ ಎಂದು ಹೇಳಿದರು.



ಬಸವಪ್ರಭು ಸ್ವಾಮೀಜಿ

ಇದಕ್ಕೂ ಮುನ್ನ ಮಠದ ಆಡಳಿತ ಮಂಡಳಿ ಸದಸ್ಯರು, ಮುಖಂಡರು ಸಭೆ ನಡೆಸಿ ಬಸವಪ್ರಭು ನೇಮಕ ಮಾಡುವುದಕ್ಕೆ ತೀರ್ಮಾನಿಸಿದ್ದರು. ಮತ್ತೊಂದು ಕಡೆ ಬಸವಪ್ರಭು ಶ್ರೀಗೆ ಪ್ರಭಾರ ಪೀಠಾ ಧ್ಯಕ್ಷರಾಗಿ ನೇಮಕಕ್ಕೆ ಅಪಸ್ವರ ಕೇಳಿ ಬಂದಿತ್ತು. ವಿವಿಧ ಮಠಾಧೀಶರು, ಸಮಾಜದ ಮುಖಂಡರು ಅಪಸ್ವರ ಎತ್ತಿದ್ದರು. ಮುರುಘಾಶ್ರೀ ರಕ್ಷಣೆಗಾಗಿ ಬಸವಪ್ರಭು ಶ್ರೀ ನೇಮಕ ಎಂದು ಕಿಡಿಕಾರಿದ್ದಾರೆ. ಬಸವಪ್ರಭು ಶ್ರೀ ನೇಮಕ ನ್ಯಾಯ ಸಮ್ಮತವಲ್ಲ ಎಂದು ವೀರಶೈವ ಲಿಂಗಾಯತ ಸಮಾಜದ ಮುಖಂಡರು ವಿರೋಧ ವ್ಯಕ್ತಪಡಿಸಿದ್ದರು. ಮಠದಲ್ಲಿ ದೀಕ್ಷೆ ಪಡೆದ ಕೆಲ ಮಠಾಧೀಶರಿಂದಲೂ ಆಕ್ಷೇಪ ವ್ಯಕ್ತ ವಾಗಿತ್ತು. ಆದರೆ ಇದೀಗ ಅಂತಿಮವಾಗಿ ಬಸವಪ್ರಭುಗಳನ್ನೇ ಆಯ್ಕೆ ಮಾಡಲಾಗಿದೆ.

ಮುರುಘಾಮಠದ ಪೂಜಾ ಕೈಂಕರ್ಯ ಮಾಡಲು ಈ ಹಿಂದೆ ಹೆಬ್ಬಾಳ ಮಠದ ಮಹಾಂತ ರುದ್ರೇಶ್ವರ ಶ್ರೀಗೆ ಮೌಖಿಕ ವಾಗಿ ಸೂಚಿಸಲಾಗಿತ್ತು. ಆದರೆ ಇದೀಗ ಮುರುಘಾಮಠದ ಪೂಜಾ ಕೈಂಕರ್ಯಕ್ಕೆ ಬಸವಪ್ರಭು ಶ್ರೀ ನೇಮಕ ಮಾಡಲಾಗಿದೆ. ಇನ್ನು ಮಠದ ಎಸ್.ಜೆ.ಎಮ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ನಿವೃತ್ತ ನ್ಯಾಯಾಧೀಶ ಎಸ್.ಬಿ.ವಸ್ತ್ರದಮಠ ಅವರಿಗೆ ಪವರ್ ಆಫ್ ಅಟರ್ನಿ ನೀಡಲಾಗಿದೆ. ಅದರಂತೆ ಎಸ್.ಜೆ.ಎಮ್ ವಿದ್ಯಾಸಂಸ್ಥೆಯ ಹಣಕಾಸು ವ್ಯವಹಾರ ಸೇರಿದಂತೆ ಚೆಕ್‌ಗೆ ಸಹಿ ಮಾಡಲು ವಸ್ತ್ರದಮಠ ಅವರನ್ನು ನೇಮಿಸಲಾಗಿದೆ.

'ಸಮಸ್ಯಾ ಪೂರ್ಣ ಮುಕ್ತಕ' ಕೃತಿ ಬಿಡುಗಡೆ



ಮೈಸೂರು, ಅ.16(ಜಿಎ)–ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಹಿಮಾಲಯ ಪ್ರತಿಷ್ಠಾನದ ಸಹಯೋಗದೊಂದಿಗೆ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ತು ಸದಸ್ಯ ಡಾ.ಡಿ. ತಿಮ್ಮಯ್ಯ'ಸಮಸ್ಯಾ ಪೂರ್ಣ ಮುಕ್ತಕ' ಕೃತಿಯನ್ನು ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ನಾನು ರಾಜಕೀಯಕ್ಕೆ ಬರುವುದಕ್ಕೂ ಮುನ್ನ ಸಾಹಿತ್ಯದ ಪ್ರೇಮಿಯಾಗಿ ಸಾಹಿತಿಗಳ ಒಡನಾಟದಲ್ಲಿರುತ್ತಿದೆ. ಆದರೆ, ಇಂದು ರಾಜಕೀಯ ಒತ್ತಡದಿಂದ ಸಾಧ್ಯವಾಗುತ್ತಿಲ್ಲ. ಸ್ವಾಸ್ಥ ಸಮಾಜ ನಿರ್ಮಾಣ ಮಾಡಲು ಸಾಹಿತ್ಯ ಕೃತಿಗಳ ಅವಶ್ಯಕತೆ ಇದೆ ಎಂದು ವಿಧಾನ ಪರಿಷತ್ತು ಸದಸ್ಯ ಡಾ.ಡಿ. ತಿಮ್ಮಯ್ಯ ಅಭಿಪ್ರಾಯಪಟ್ಟರು. ಸಾಹಿತ್ಯವು ಮನುಷ್ಯನ ಜೀವನದ ಮೇಲೆ ಪರಿಣಾಮ ಬೀಳುತ್ತದೆ. ನಾವು ಎಷ್ಟು ಕೃತಿಗಳನ್ನು ಓದುತ್ತೇವೆ ಅಷ್ಟು ಉಲ್ಲಾಸ ಮತ್ತು ಚೈತನ್ಯ ವೃದ್ಧಿಸುತ್ತದೆ. ಇದರಿಂದ ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಸುಲಭವಾಗಿ ಎದುರಿಸಬಹುದು ಎಂದರು.

ಕೆ.ಟಿ.ಶ್ರೀಮತಿ ಅವರು ಬರೆದಿರುವ 'ಸಮಸ್ಯಾ ಪೂರ್ಣ ಮುಕ್ತಕ' ಕೃತಿಯು ಬಹಳಷ್ಟು ಅರ್ಥಪೂರ್ಣವಾಗಿದ್ದು, ಮುಕ್ತಕಗಳನ್ನು ಅಳವಡಿಸಿಕೊಂಡರೆ, ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಗೌರವ ಅಧ್ಯಕ್ಷ ಎಸ್.ರಾಮಪ್ರಸಾದ್, ಕವಯತ್ರಿ ಕೆ.ಟಿ.ಶ್ರೀಮತಿ, ಹಿರಿಯ ಕವಯತ್ರಿ ನಾಗಮ್ಮ, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಎನ್.ಅನಂತ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.